ಲಂಕೇಶ್

ಜನವರಿ 25, 2012 ಪುಟ 20 ರೂ. 14/-

ರಿಲಯನ್ಸ್ ಶೇರು ಮಾರುಕಟ್ಟೆ ಗೋಲ್‌ಮಾಲ್



ಆರೆಸ್ಸೆಸ್ ತೇಪೆ



ಮಂಡ್ಯ ಮರ್ಯಾದಾಹೀನ ಹತ್ಯೆ

ಅಷ್ಟಮಠಗಳ ಪರ್ಯಾಯ ಕಿತ್ತಾಟ



ವೈದ್ಯಕೀಯ ಶಿಕ್ಷಣ ರಾಮದಾಸ್ ಲೂಟಿ

"ವೈ ದಿಸ್ ಕೊಲವೆರಿ, ಕೊಲವೆರಿ ಡಿ"- "ನನ್ನಂಥ ಬಡಪಾಯಿಯ ಮೇಲೆ ಏಕೀ ಕೊಂದುಹಾಕುವಂಥಾ ಕೋಪ ಚಿಣ್ಣ"- ಅನ್ನೋ ಅರ್ಥದ ಈ ಹಾಡು ಭಾಷೆ, ರಾಜ್ಯ, ದೇಶಗಳ ಗಡಿಯನ್ನು ದಾಟಿ ಈಗ ಮೂರು ಕೋಟಿಗೂ ಹೆಚ್ಚು ಜನರು ಇದನ್ನು ಹಾಡಿಕೊಳ್ಳುತ್ತಿದ್ದಾರಂತೆ! ಈ ದೇಶದ ರಾಷ್ಟ್ರಗೀತೆಗೆ ನೂರು ವರ್ಷ ತುಂಬಿದ ಸಂಭ್ರಮವನ್ನು ಮೀರಿಸುವಂತೆ 'ಕೊಲವೆರಿ' ದೇಶದ ಯುವಜನತೆಯ ದೇಶಗೀತೆಯಾಗಿದೆ ಎಂದು ಫೇಸ್‌ಬುಕ್‌ಗಳು, ಟ್ವಿಟರ್‌ಗಳು, ಟಿವಿ ಚಾನೆಲ್‌ಗಳು, ಎಫ್.ಎಂ ರೇಡಿಯೋಗಳು ಹೇಳುತ್ತಿವೆ.

ಬೆಂಗಳೂರು ಮುಂತಾದ ಕಾಸ್ಮೋಪಾಲಿಟನ್ ನಗರಗಳಲ್ಲಿ ಎಲ್ಲಾ ಯುವಜನರ ಬಾಯಲ್ಲೂ ಬಹಳ ಬೇಗ ಈ ಕೊಲವೆರಿ ಪಾಪ್ಯುಲರ್ ಆದದ್ದು ನಿಜವಿರಬಹುದಾದರೂ ಉಳಿದ ಸಣ್ಣಪುಟ್ಟ ಟೌನುಗಳಲ್ಲಿ ಇಷ್ಟೊಂದು ಜನಪ್ರಿಯವಾಗಿದೆಯೇ ಎಂಬುದು ಸ್ಪಷ್ಟವಿಲ್ಲ. ಅದೇನೇ ಇದ್ದರೂ ನವೆಂಬರ್ 16ರಂದು ಇಂಟರ್‌ನೆಟ್-ಯೂ ಟ್ಯೂಬ್ ಮಾಧ್ಯಮದ ಮೂಲಕ ಮತ್ತು ವಿಡಿಯೋ ಸಿಡಿಗಳ ಮೂಲಕ, ಅಂದರೆ ಪ್ರಧಾನವಾಗಿ ನಗರದ ಮಧ್ಯಮ ಮತ್ತು ಮೇಲ್ ಮಧ್ಯಮ ವರ್ಗವೇ ಹೆಚ್ಚು ಬಳಸುವ ಮಾಧ್ಯಮಗಳ ಮೂಲಕ ಅಧಿಕೃತವಾಗಿ ಮಾರುಕಟ್ಟೆ ಪ್ರವೇಶಿಸಿದ ಈ ಹಾಡು ಈಗಾಗಲೇ ಪ್ರಪಂಚಾದ್ಯಂತ ಮೂರು ಕೋಟಿಗೂ ಹೆಚ್ಚು ಜನರನ್ನು ತಲುಪಿದೆಯೆಂದು ಸಮೀಕ್ಷೆಗಳು ತಿಳಿಸುತ್ತಿವೆ. ಈ ಅಭೂತಪೂರ್ವ ಯಶಸ್ಸನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂದು ಈಗ ಅರ್ಥಶಾಸ್ತ್ರಜ್ಞರೂ, ಸಂಸ್ಕೃತಿ ವಿಶ್ಲೇಷಕರೂ, ರಾಜಕೀಯ ಪಂಡಿತರೂ ತಲೆಕೆಡಿಸಿಕೊಳ್ಳುತ್ತಿದ್ದಾರೆ.

ರಾಂಚಿ, ಬೆಂಗಳೂರು, ಅಹಮದಾಬಾದ್‌ನಲ್ಲಿರುವ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟುಗಳು (IIM)ಗಳಲ್ಲಿ ಈ 'ಕೊಲವೆರಿ'ಯ ಯಶಸ್ಸಿನ ಬಗ್ಗೆ ಶಾಸ್ತ್ರೀಯ ಅಧ್ಯಯನಗಳೇ ಪ್ರಾರಂಭವಾಗಿವೆಯಂತೆ.

ಇನ್ನು ಹಲವು ಸಂಸ್ಕೃತಿ ವಿದ್ವಾಂಸರು ಹಲವು ಬಗೆಯ ಕಾರಣಗಳನ್ನು ಮುಂದಿಡುತ್ತಿದ್ದಾರೆ. ಅವುಗಳಲ್ಲಿ ಕೆಲವು ಸ್ಯಾಂಪಲ್‌ಗಳಿವು:

- ಇದು ಬಟ್ಲರ್ ಇಂಗ್ಲಿಷಿನಲ್ಲಿ ಬರೆದ 'ತಂಗ್ಲಿಶ್' ಹಾಡು. ಹೆಚ್.ಎಸ್. ಶಿವಪ್ರಕಾಶ್ ಅಂಥವರ ಪ್ರಕಾರ ಇದು ಇಂಗ್ಲಿಷ್ ಬಗ್ಗೆ ಕೀಳರಿಮೆ ಇದ್ದ ಸಾಮಾನ್ಯ ತಮಿಳರು ಅದನ್ನು ಮೀರಲು ಕಂಡುಕೊಂಡ ವಿದ್ರೋಹಿ ಉಪಕ್ರಮಗಳಿಗೆ ರೂಪಕದಂತೆ ಒದಗಿಬಂದಿದೆ.
- ಹಾಡಿನ ಸಾರಾಂಶ ಹುಡುಗಿಯಿಂದ ಮೋಸ ಹೋದ ಭಗ್ನ ಹೃದಯದ ಹುಡುಗನ ಕಥೆ. ಭಾರತದ ಸಾಂಸ್ಕೃತಿಕ ಪರಿಸರದಲ್ಲಿ ಭಗ್ನಪ್ರೇಮದ ಕಥೆ ಶೇ.99ರಷ್ಟು ಪ್ರೇಕ್ಷಕರನ್ನು ಗೆದ್ದುಕೊಳ್ಳುತ್ತದೆ.
- ಇದು ಭಗ್ನಪ್ರೇಮಿ ಹುಡುಗ ಕುಡಿದಾಗ ಹಾಡುವ ಹಾಡು ಕೂಡಾ ಆದ್ದರಿಂದ ಕುಡುಕ ಪ್ರೇಮಿಗಳಿಗೂ ಘನತೆ ತಂದುಕೊಟ್ಟಿದೆ.
- ಇದರ ಸಂಗೀತ ನಿರ್ದೇಶಕ 18 ವರ್ಷದ ಯುವಕನಾಗಿದ್ದು ಆತನಿಗೆ ಯುವಪೀಳಿಗೆಯ ನಾಡಿಮಿಡಿತ ಗೊತ್ತಿದೆ.
- ಇದನ್ನು ಮಾಡಿರುವುದು ಹೊಸಬರಲ್ಲ, ಬದಲಿಗೆ ರಜನಿಕಾಂತ್ ಅಂಥಾ ಸೂಪರ್‌ಸ್ಟಾರ್‌ನ ಮಗಳು (ಐಶ್ವರ್ಯ) ಮತ್ತು ಅಳಿಯ (ಧನುಶ್) ಹಾಗೂ ಕಮಲ್‌ಹಾಸನ್ ಎಂಬ ಮತ್ತೊಬ್ಬ ಸೂಪರ್‌ಸ್ಟಾರ್‌ನ ಮಗಳು (ಶ್ರುತಿ ಹಸನ್).
- ಈ ಮ್ಯೂಸಿಕ್ ಆಲ್ಬಮ್‌ಅನ್ನು ದೇಶದ ಸಾರ್ವಕಾಲಿಕ ಸೂಪರ್ ಸ್ಟಾರ್‌ಗಳಾದ ಅಮಿತಾಭ್, ಶಾರೂಖ್ ಖಾನ್ ಇನ್ನಿತರರು ತಮ್ಮ ಟ್ವಿಟರ್ ಇನ್ನಿತರ ಮಾಧ್ಯಮದ ಮೂಲಕ ತಮ್ಮ ಬೆಂಬಲದ ಪ್ರಚಾರ ನೀಡುತ್ತಿದ್ದಾರೆ.



ವೈ ದಿಸ್ ಕೊಲವೆರಿ, ಕೊಲವೆರಿ-ಡಿ?

ಇದರಲ್ಲಿ ಎಲ್ಲವೂ ನಿಜ. ಎಲ್ಲವೂ ಈ 'ಯಶೋಗಾಥೆಯ' ಒಂದು ಮುಖವನ್ನು ಮಾತ್ರ ಹೇಳುತ್ತದೆ. ಆದರೆ ಪ್ರಮುಖವಾದ ಮತ್ತು ಕಳವಳಕಾರಿಯಾದ ಮತ್ತೊಂದು ಅಂಶವನ್ನು ಮಾತ್ರ ಮರೆಮಾಚಲು ಯತ್ನಿಸುತ್ತವೆ.

ವಾಸ್ತವವಾಗಿ 'ಕೊಲವೇರಿ'ಯ 'ಯಶಸ್ಸಿ'ನ ಬಗ್ಗೆ ನಡೆಯುತ್ತಿರುವ ಚರ್ಚೆಗಳು ವರ್ತಮಾನದ ಸಾಂಸ್ಕೃತಿಕ ರಾಜಕಾರಣವು ಹೇಗೆ ಕೆಲವು ಪರಿಕಲ್ಪನೆಗಳನ್ನೇ ನಮಗೆ ಗೊತ್ತಾಗದಂತೆ ಬದಲಾಯಿಸಿ ಒಪ್ಪಿಸಿಬಿಟ್ಟಿದೆ ಎಂಬ ದಿಗ್ಭ್ರಾಂತಿಯನ್ನು ಹುಟ್ಟಿಸುತ್ತದೆ.

ಮೊದಲಿಗೆ 'ಕೊಲವೆರಿಯ ಯಶಸ್ಸು' ಎಂಬ ಪರಿಕಲ್ಪನೆಯ ಹಿಂದೆ, ಮಾರುಕಟ್ಟೆಯಲ್ಲಿ ಪಡೆಯುವ ಯಶಸ್ಸೇ ಯಶಸ್ಸಿನ ಮೂಲಮಾನದಂಡ ಎಂಬ ಒಂದು ಬಂಡವಾಳ



ಶಿವಸುಂದರ್

ಚಾರ್ವಾಕ

ಶಾಹಿ ಉದ್ಯಮದ ಉಪಭೋಗಿ ಪರಿಕಲ್ಪನೆಯನ್ನು ನಮಗೆ ಗೊತ್ತಾಗದಂತೆ ನಮಗೆ ಒಪ್ಪಿಸಿಬಿಡುವ ರಾಜಕಾರಣವಿದೆ. ಒಂದು ಹಾಡು, ಅದು ಯಾವ ಮೌಲ್ಯವನ್ನೇ ಹೊಂದಿರಲಿ, ಯಾವ ಪರಿಣಾಮವನ್ನೇ ಉಂಟುಮಾಡಿರಲಿ ಅದು ಹೆಚ್ಚು ಜನರನ್ನು ತಲುಪಿದ ತಕ್ಷಣ ಅದನ್ನು ಯಶಸ್ಸು ಎಂದು ಬೇರೆ ಯಾವ ಮಾನದಂಡವನ್ನು ಅನುಸರಿಸದೇ ಕರೆದುಬಿಡಬಹುದೇ?

ಇದು ಭೈರಪ್ಪನವರ ಕಾದಂಬರಿ 'ಕವಲು' ಹೆಚ್ಚು ಜನರನ್ನು ತಲುಪಿದೆ ಎಂಬುದೊಂದೇ ಅವರು ಯಶಸ್ವೀ ಕಾದಂಬರಿಕಾರರು ಎನ್ನುವುದಕ್ಕೆ ಸಾಕ್ಷಿ ಎಂಬ ವಾದದಂತಾಗುವುದಿಲ್ಲವೇ? ಅದರರ್ಥ ಕೊಲವೆರಿ ಹೆಚ್ಚು ಜನರನ್ನು ತಲುಪಿಲ್ಲ ಎಂಬುದಲ್ಲ, ಆದರೆ ಯಶಸ್ಸಿನ ಮಾನದಂಡ ಕೇವಲ 'ರೀಚ್' ಮಾತ್ರವೇ? ಹಾಗಿದ್ದಲ್ಲಿ 'ದೇವರ' (ಅಶ್ಲೀಲ) ಚಿತ್ರಗಳು ಮತ್ತು ಸಾಹಿತ್ಯಗಳು ಸಾಹಿತ್ಯಿಕವಾಗಿ ಅತ್ಯಂತ ಸಂವೇದನಾಶೀಲವೂ, ಜನಪರ ಮತ್ತು ಜನಪ್ರಿಯ ಗುಣಗಳೂ ಹೊಂದಿರುವ ಕೃತಿಗಳಿಗಿಂತ ಹೆಚ್ಚು ರೀಚ್ ಹೊಂದಿದೆಯೆಂಬ ಮಾತ್ರಕ್ಕೆ ಅವು 'ಹೆಚ್ಚು' ಯಶಸ್ವೀ ಎಂದು ಹೇಳಬಹುದೇ?

ಒಂದು ಸಂಗೀತ ಮತ್ತು ಸಾಹಿತ್ಯ ಉತ್ಪನ್ನಗಳಿಗೆ ಇತರ ಕೈಗಾರಿಕಾ ಉತ್ಪನ್ನಗಳ ತರಹ ಕೇವಲ ಎಷ್ಟು ಜನರನ್ನು ತಲುಪಿದೆ ಎಂಬುದೇ ಯಶಸ್ಸಿನ ಏಕೈಕ ಮಾನದಂಡವಾಗುತ್ತದೆಯೇ? ಆದ್ದರಿಂದಲೇ ಇಡೀ ದೇಶ ಕೊಲವೆರಿಯನ್ನು ಹಾಡಿ ಹೊಗಳುತ್ತಿರುವಾಗ ಜಾವೆದ್ ಅಖ್ತರ್ ಎತ್ತಿದ ಆಕ್ಷೇಪಣೆಗಳು ಅತ್ಯಂತ ಅರ್ಥಪೂರ್ಣವೂ ಆಗಿದೆ. ಸಂದರ್ಶನವೊಂದರಲ್ಲಿ ಅವರು "ಕೊಲವೆರಿ-ಡಿ. ಎಲ್ಲರೂ ಬಟ್ಟೆಯನ್ನು ಹೊಗಳುತ್ತಿದ್ದಾರೆ. ಆದರೆ ರಾಜ ಬೆತ್ತಲಾಗಿದ್ದಾನೆ. ಸಂಗೀತ ಸಾಧಾರಣ. ಹಾಡುಗಾರಿಕೆ ಕೆಳಮಟ್ಟದ್ದು. ಸಾಹಿತ್ಯ ಮನುಷ್ಯ ಸಂವೇದನೆಗಳನ್ನು ಅವಹೇಳನ ಮಾಡುವಂತದ್ದು. ಯಶಸ್ಸು ಮಿಕ್ಕಿದ್ದೆಲ್ಲವನ್ನು ಹಲವರಿಗೆ ಮರೆಸಬಹುದು. ಆದರೆ ನನಗೆ ಗುಣಮಟ್ಟವೇ ಮುಖ್ಯ. ಯಾವುದೇ ಯಶಸ್ಸು ಗುಣಮಟ್ಟದೊಂದಿಗೆ ಯಶಸ್ಸು ಪಡೆಯಬೇಕೆಂಬುದು ನನ್ನ ಆಶಯ. ಕೀಳು ಅಭಿರುಚಿಗಳು ಅದು 'ವೈಯಕ್ತಿಕ ಆಯ್ಕೆ' ಎಂಬ ಹೆಸರಿನಲ್ಲೇ ಇದ್ದರೂ ನನಗೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ.

ಯಾವುದು ಕೀಳು ಯಾವುದು ಮೇಲು ಅನ್ನುವ ಜಡ್ಜ್‌ಮೆಂಟ್ ಹಿಂದೆ ಹಲವು ಬಗೆಯ ಗೃಹೀತಗಳು ಕೆಲಸ ಮಾಡುವುದು ನಿಜವೇ ಆದರೂ ರೀಚ್‌ನಲ್ಲಿ ಪಡೆದ ಯಶಸ್ಸು ಮಿಕ್ಕೆಲ್ಲಾ ಪರಿಗಣನೆಗಳನ್ನು ಇಂದು ಜನಪ್ರಿಯ ಸಂಸ್ಕೃತಿ-ಪಾಪ್ ಸಂಸ್ಕೃತಿಯ ರಕ್ಷಕರು ಅಸಂಬದ್ಧ ಮತ್ತು ಅಸಂಗತಗೊಳಿಸುತ್ತಿರುವುದು ಅಪಾಯಕಾರಿಯೇ!


ಏಕೆಂದರೆ ಯಾವುದೇ ಸಾಂಸ್ಕೃತಿಕ ಉತ್ಪನ್ನಗಳನ್ನು, ಸಾಹಿತ್ಯ ಸಂಗೀತ, ಇತರ ಯಾವುದೇ ಪರಿಕರಗಳನ್ನು, ಜನರು ಮಾರುಕಟ್ಟೆಯೇ ಮೂಲಕವೇ ಪಡೆದುಕೊಳ್ಳಬೇಕಿರುವ ಇಂದಿನ ಸಂದರ್ಭದಲ್ಲಿ ಮಾರುಕಟ್ಟೆಯ ಮೇಲೆ ನಿಯಂತ್ರಣೆವನ್ನು ಸಾಧಿಸುವ ಶಕ್ತಿಗಳು ಜನತೆಯ ಅಭಿರುಚಿ ಮತ್ತು ಸಂಸ್ಕೃತಿಗಳ ಮೇಲೂ ಹಿಡಿತ ಸಾಧಿಸುತ್ತಾರೆ. ಮ್ಯಾನಿಪುಲೇಟ್ ಮಾಡುತ್ತಾರೆ. ಹೀಗಾಗಿಯೇ ಯಾವುದನ್ನು ಇವತ್ತು ನಾವು ಜನಪ್ರಿಯ ಎಂದು ಆರಾಧಿಸುತ್ತಿರುತ್ತೇವೆಯೋ ಅವುಗಳಲ್ಲಿ ಬಹುಪಾಲು ಮಾರುಕಟ್ಟೆ ಶಕ್ತಿಗಳು ಮ್ಯಾನಿಪುಲೇಟ್ ಮಾಡಿದ, ಮಧ್ಯಪ್ರವೇಶ ಮಾಡಿ ಮಾರುಕಟ್ಟೆಯಲ್ಲಿ ಮಾರಬಲ್ಲ ಸರಕಾಗುವಂತೆ ಅದರ ಒಳಗನ್ನು ಬದಲಿಸಿದ, ಹಾಡುಗಳಾಗಿರುತ್ತವೆ, ಉಡುಪುಗಳಾಗಿರುತ್ತವೆ, ಆಚರಣೆಗಳಾಗಿರುತ್ತವೆ, ನೃತ್ಯಗಳಾಗಿರುತ್ತವೆ. ಅದಕ್ಕೆ ಜನಪ್ರಿಯ, ದೇಸೀ, ಜಾನಪದ, ಆಧುನಿಕ ನಗರ ಜಾನಪದ ಎಂಬಿತ್ಯಾದಿ ಗ್ಲಾಮರಸ್ ವಿಶೇಷಣಗಳು ಜೋಡಣೆಗೊಂಡು ಇನ್ನೂ ಹೆಚ್ಚು ಬಿಕರಿಯಾಗುತ್ತವೆ.

ಉದಾಹರಣೆಗೆ ಕೊಲವೆರಿಯ 'ಯಶೋಗಾಥೆ'ಯನ್ನೇ ತೆಗೆದುಕೊಳ್ಳಿ. ಅದು ಅಹೋರಾತ್ರಿ ಯಶಸ್ಸನ್ನು ಗಳಿಸಿದ ಸುತ್ತಾ ಒಂದು ಸುಂದರ ಸಂಕಥನವನ್ನು ಸೃಷ್ಟಿಸಲಾಗಿದೆ. ಅದು ಅಧಿಕೃತ ವರ್ಷನ್ ಮಾರುಕಟ್ಟೆಗೆ ಬರುವ ಮುಂಚೆಯೇ ಯಾರೋ ಅದನ್ನು ಮಾರುಕಟ್ಟೆಗೆ ಯೂ ಟ್ಯೂಬ್‌ಗೆ 'ಲೀಕ್' ಮಾಡಿದರೆಂದೂ, ಅದು ಲೀಕ್ ಆದ ಕೆಲವು ದಿನಗಳಲ್ಲೇ 58,000 ಹಿಟ್‌ಗಳನ್ನು ಪಡೆಯಿತೆಂದೂ ಹೇಳಲಾಗಿದೆ. ಆದರೆ ಅದರ ಮಾರುಕಟ್ಟೆ ಗುತ್ತಿಗೆ ಪಡೆದಿರುವ 'ಸೋನಿ ಎಂಟರ್‌ಟೈನ್‌ಮೆಂಟ್' ಎಂಬ ದೈತ್ಯ ಬಹುರಾಷ್ಟ್ರೀಯ ಕಂಪನಿ ತಮಗೆ ಆ ಲೀಕ್ ಬಗ್ಗೆ ಮಾಹಿತಿಯಿತ್ತೆಂದು ಹೇಳಿದ್ದಾರಲ್ಲದೆ ಈ ಲೀಕ್ ಮಾಹಿತಿಯನ್ನೂ ಸಹ ಬಹಳ 'ಯಶಸ್ವಿ'ಯಾಗಿ 'ಕೊಲವೆರಿ' ಮಾರುಕಟ್ಟೆಯ ಸುತ್ತ ಹೆಣೆದಿದ್ದಾರೆ. ಆನಂತರದಲ್ಲಿ ನವೆಂಬರ್ 16 ರಂದು ಅಧಿಕೃತವಾಗಿ ಅದರ ವರ್ಷನ್ ಮಾರುಕಟ್ಟೆಗೆ ಬಂದನಂತರ ಬಹಳ ಪ್ರಜ್ಞಾಪೂರ್ವಕವಾಗಿಯೇ ಅಮಿತಾಭ್, ಶಾರೂಖ್ ಇನ್ನಿತರರ ಟ್ವಿಟರ್ ಪಡೆದುಕೊಳ್ಳುವ ಮೂಲಕ ಪ್ರಚಾರಕ್ಕಿಳಿದರು ಮತ್ತು ಈ ಹೊಸ ಮಾಧ್ಯಮಗಳ ಮೇಲ್ ಮಧ್ಯಮ ವರ್ಗದ ಬಳಕೆದಾರರು ಈ ರೀತಿ ಖ್ಯಾತನಾಮರು ಯಾವುದನ್ನಾದರೂ ಶಿಫಾರಸ್ಸು ಮಾಡಿದರೆ ತಾವೂ ಅದನ್ನು ಕೊಂಡುಕೊಳ್ಳುವುದಲ್ಲದೆ ತಮ್ಮ ಸ್ನೇಹವಲಯದ ಸಾವಿರ ಜನರಿಗೆ ತಮ್ಮದೇ ಖರ್ಚಿನಲ್ಲಿ ಪ್ರಚಾರ ಮಾಡುವ ಪುಕ್ಕಟೆ ಪ್ರಚಾರ ಸಿಬ್ಬಂದಿಯೂ ಆಗಿಬಿಡುತ್ತಾರೆ. ಆದ್ದರಿಂದ ಒಂದು ಮಾರುಕಟ್ಟೆ ತಂತ್ರವಾಗಿ ಶಾರೂಖ್ ಮಾತ್ರವಲ್ಲದೆ ಆಯಾ ಪ್ರದೇಶಗಳ ಖ್ಯಾತನಾಮರಿಂದಲೂ ಇದರ ಬಗ್ಗೆ ಶಿಫಾರಸ್ಸುಗಳನ್ನು 'ಉತ್ಪಾದಿಸಲಾಯಿತು'. ತಮಿಳು ಚಿತ್ರೋದ್ಯಮದ ಹಾಗೂ ಅಖಿಲ ಭಾರತ ಖ್ಯಾತಿ ಹೊಂದಿರುದ ರಜನಿಕಾಂತ್ ಕಮಲ್‌ಹಾಸನ್ ಎಂಬ ಎರಡು ದಿಗ್ಗಜ ಕುಟುಂಬಗಳು ಇದರಲ್ಲಿ ತೊಡಗಿಕೊಂಡಿದ್ದರಿಂದ ಸಹಜವಾಗಿಯೇ ಜನರಲ್ಲಿದ್ದ ಕುತೂಹಲ ಈ ಸರಕಿನ ಮಾರುಕಟ್ಟೆಗೆ ಪೂರಕವಾಯಿತು. ಈ ಕುಟುಂಬಗಳ ವ್ಯಾವಹಾರಿಕ ಸಂಬಂಧಗಳು ಅವರಿಗೆ ಅಖಿಲ ಭಾರತ ಮತ್ತು ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಇನ್ನಷ್ಟು ಪ್ರಚಾರವನ್ನು ಗಿಟ್ಟಿಸಿಕೊಟ್ಟವು. ಇವೆಲ್ಲವನ್ನು ಸೋನಿ ಕಂಪನಿ ಬಹಳ ಪ್ರಜ್ಞಾಪೂರ್ವಕವಾಗಿ ಮತ್ತು ವ್ಯವಹಾರಿಕ ಜಾಣ್ಮೆಯಿಂದ ದುಡಿಸಿಕೊಂಡಿತು. ಹೀಗೆ ನವೆಂಬರ್ 16ರಿಂದ ಡಿಸೆಂಬರ್ ಕೊನೆಯ ವೇಳೆಗೆ ಮೂರು ಕೋಟಿ ಮಂದಿ ಇದನ್ನು ನೋಡಿದ್ದರ ಹಿಂದೆ ಸೋನಿ ಎಂಟರ್‌ಟೈನ್‌ಮೆಂಟ್ ಎಂಬ ಬಂಡವಾಳಶಾಹಿ ಕಂಪನಿಯ ಮಾರುಕಟ್ಟೆ ಕಿಲಾಡಿತನದ ದೊಡ್ಡ ಪಾತ್ರವಿದೆ.

ಇದರ ಸಾರಾಂಶವಿಷ್ಟೆ. ಯಾವುದನ್ನು ಜನಪ್ರಿಯ-ಪಾಪ್ ಎಂದು ಆರಾಧಿಸುತ್ತಿರುತ್ತೇವೆಯೋ ಅದರ ಹಿಂದೆ ಮಾರುಕಟ್ಟೆ ಶಕ್ತಿಗಳ ಮ್ಯಾನಿಪುಲೇಷನ್ ಇರುತ್ತದೆ. ಹೀಗಾಗಿ ಅದನ್ನು ವಿಮರ್ಶೆ ಮಾಡದೆ ತಲೆದೂಗುವುದು ಕಷ್ಟ!

ಇದರರ್ಥ ಜನ ಕೊಲವೆರಿಗೆ ತಲೆದೂಗುತ್ತಿಲ್ಲ ಎಂದಲ್ಲ. ಆದರೆ ಯಾವ ಭಾವಕ್ಕೆ ಯಾವ ಅರ್ಥಕ್ಕೆ ತಲೆದೂಗುತ್ತಿದ್ದಾರೆ ಎಂಬುದು ಅತಿಮುಖ್ಯ. ಈ ಭಾವ ಅರ್ಥಗಳು ಹೊಸ ಯುಗದ ಮೌಲ್ಯಗಳಾದ ಬೇಜವಾಬ್ದಾರಿ ಸ್ವಕೇಂದ್ರಿತ ಮೌಲ್ಯಗಳನ್ನು ವಿಜೃಂಭಿಸುತ್ತಿಲ್ಲವೇ? ಬದುಕು ಸಮಸ್ಯೆಗಳು ಸಂಕೀರ್ಣಗೊಳ್ಳುತ್ತಾ, ಹೆಚ್ಚೆಚ್ಚು ಜನರನ್ನು ಅತಂತ್ರಗೊಳಿಸುತ್ತಿರುವ ಈ ಹೊತ್ತಿನಲ್ಲಿ, ಸಂದರ್ಭ ಇನ್ನಷ್ಟು ಗಂಭೀರತೆಯನ್ನು ಯೋಜಿತ ಪ್ರತಿರೋಧಗಳನ್ನು ಒಂದು ಮೌಲ್ಯವಾಗಿ ಬೇಡುತ್ತಿರುವ ಹೊತ್ತಲ್ಲಿ, ಲೈಟ್ ಆಗಿರುವುದು, ಕೂಲ್ ಆಗಿರುವುದು, ಆ ಕ್ಷಣದ ಸಂವೇದನೆಯನ್ನು ಮಾತ್ರ ಪರಮಸತ್ಯವೆಂದು ಭಾವಿಸಬೇಕೆಂಬ ಮೌಲ್ಯಗಳನ್ನು ಮಾರುಕಟ್ಟೆ ಶಕ್ತಿಗಳು ಏಕೆ ಪ್ರಮೋಟ್ ಮಾಡುತ್ತಿವೆ? ಇದು ಮನುಷ್ಯ ನಗಬಾರದೆಂಬ ಅರ್ಥದಲ್ಲಲ್ಲ. ಅವಹೇಳನವನ್ನು ಹಾಸ್ಯವೆಂದುಕೊಳ್ಳಬಾರದು. ಅವಗಣನೆಯನ್ನು ಲೈಟ್ ಆಗಿ ತೆಗೆದುಕೊಳ್ಳಬಾರದು. ಅಷ್ಟೆ. ಕೊಲವೆರಿಯ ಹಾಡಿನ ಸಾರಾಂಶದ ಮತ್ತು ಅದರ ಯಶಸ್ಸಿನ ಸಾರಾಂಶದ ಸಾಂಸ್ಕೃತಿಕ ವಿಶ್ಲೇಷಣೆ ಅವೆಲ್ಲವನ್ನೂ ಬೇಡುತ್ತದೆ...

ನೋ ಕಾಮೆಂಟ್ಸ್



"ಕೊಲವೆರಿ-ಡಿ. ಎಲ್ಲರೂ ಬಟ್ಟೆಯನ್ನು ಹೊಗಳುತ್ತಿದ್ದಾರೆ. ಆದರೆ ರಾಜ ಬೆತ್ತಲಾಗಿದ್ದಾನೆ. ಸಂಗೀತ ಸಾಧಾರಣ. ಹಾಡುಗಾರಿಕೆ ಕೆಳಮಟ್ಟದ್ದು. ಸಾಹಿತ್ಯ ಮನುಷ್ಯ ಸಂವೇದನೆಗಳನ್ನು ಅವಹೇಳನ ಮಾಡುವಂತದ್ದು. ಯಶಸ್ಸು ಮಿಕ್ಕಿದ್ದೆಲ್ಲವನ್ನು ಹಲವರಿಗೆ ಮರೆಸಬಹುದು. ಆದರೆ ನನಗೆ ಗುಣಮಟ್ಟವೇ ಮುಖ್ಯ. ಯಾವುದೇ ಯಶಸ್ಸು ಗುಣಮಟ್ಟದೊಂದಿಗೆ ಯಶಸ್ಸು ಪಡೆಯಬೇಕೆಂಬುದು ನನ್ನ ಆಶಯ. ಕೀಳು ಅಭಿರುಚಿಗಳು ಅದು 'ವೈಯಕ್ತಿಕ ಆಯ್ಕೆ' ಎಂಬ ಹೆಸರಿನಲ್ಲೇ ಇದ್ದರೂ ನನಗೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ."

ಜಾವೆದ್ ಅಖ್ತರ್

"ಸಾರಾಯಿ ನಿಷೇಧಿಸುವ ಮುನ್ನ 12 ಲಕ್ಷ ಮದ್ಯದ ಪೆಟ್ಟಿಗೆಗಳು ಮಾರಾಟವಾಗುತ್ತಿದ್ದರೆ ಅವುಗಳ ಸಂಖ್ಯೆ ಇದೀಗ 44 ಲಕ್ಷ ದಾಟಿದೆ. ಈ ಉದ್ಯಮದಲ್ಲಿ 36,000 ಕೋಟಿ ರೂ. ವ್ಯವಹಾರ ನಡೆಯುತ್ತಿದ್ದು ಸರ್ಕಾರಕ್ಕೆ ವಾರ್ಷಿಕ 10,000 ಕೋಟಿ ಆದಾಯ ಬರುತ್ತಿದ್ದರೆ, ಅಂದಾಜು 1.70 ಕೋಟಿ ಜನ ಮದ್ಯದ ದಾಸರಾಗಿದ್ದಾರೆ. ವರ್ಷಕ್ಕೆ ಶೇ.15 ರಷ್ಟು ಹೊಸ ಯುವ ಪೀಳಿಗೆ ಮದ್ಯದ ದಾಸರಾಗುತ್ತಿದ್ದಾರೆ."

- ಸರ್ಕಾರಿ ವರದಿ

"ಎಲ್ಲದಕ್ಕೂ ಗುಜರಾತ್ ಮಾದರಿ ಅನುಸರಿಸುತ್ತೇವೆ ಎಂದು ಹೇಳುವ ಸರ್ಕಾರ ಸಾಧ್ಯವಾದರೆ ಗುಜರಾತ್‌ನಂತೆಯೇ ಕರ್ನಾಟಕದಲ್ಲೂ ಸಂಪೂರ್ಣ ಮದ್ಯಪಾನ ನಿಷೇಧ ಮಾಡಲಿ."

- ಡಾ. ಶಿವಮೂರ್ತಿ ಮುರುಘಾ ಶರಣರು

"ಕರ್ನಾಟಕದಲ್ಲಿ ಚುನಾವಣೆಗೆ ಮೊದಲು ಗುಜರಾತ್ ಮಾದರಿ ಕೋಮುಗಲಭೆ ಸೃಷ್ಟಿಸಲು ಬಿಜೆಪಿ ಹುನ್ನಾರ ನಡೆಸಿದೆ. ಸಿಂಧಗಿಯಲ್ಲಿ ಪಾಕಿಸ್ತಾನ ಧ್ವಜ ಹಾರಿಸಿದ ಪ್ರಕರಣದ ಹಿಂದೆ ಇಂಥ ಹುನ್ನಾರ ಅಡಗಿದೆ. ಪಾಕಿಸ್ತಾನ ಧ್ವಜ ಹಾರಿಸಿದ್ದು ಆರೆಸ್ಸೆಸ್ ಎಂದು ಶ್ರೀ ರಾಮಸೇನೆ ಕಾರ್ಯಕರ್ತರೇ ಹೇಳುತ್ತಿದ್ದಾರೆ."

- ಮಧುಸೂದನ್ ಮಿಸ್ತ್ರಿ, ಕಾಂಗ್ರೆಸ್ ಮುಖಂಡ

"ವಿಧಾನಸಭೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಕ್ರಿಮಿನಲ್ ಆರೋಪ ಎದುರಿಸುತ್ತಿರುವ ಸುಮಾರು 33 ಸಚಿವರು ಕಣದಲ್ಲಿದ್ದಾರೆ. ಉತ್ತರ ಪ್ರದೇಶದ 46 ಸಚಿವರ ಪೈಕಿ 21 ಮಂದಿ ಕ್ರಿಮಿನಲ್ ಆರೋಪ ಎದುರಿಸುತ್ತಿದ್ದಾರೆ. ರಾಜ್ಯ ಬಿಎಸ್ಪಿ ನಾಯಕ ರತನ್ ಲಾಲ್ ವಿರುದ್ಧ ಏಳು ಪ್ರಕರಣಗಳು ದಾಖಲಾಗಿವೆ. ಪಂಜಾಬಿನಲ್ಲಿ ಶಿರೋಮಣಿ ಅಕಾಲಿದಳದ ಬಲ್ಬೀರ್ ಸಿಂಗ್ ನಾಲ್ಕು ಪ್ರಕರಣಗಳನ್ನು ಎದುರಿಸುತ್ತಿದ್ದರೆ, ಉತ್ತರ ಖಂಡದ ಬಿಜೆಪಿ ನಾಯಕ ಬನ್ಸಿಧರ್ ವಿರುದ್ಧ ಮೂರು ಗಂಭೀರತರದ ಆರೋಪಗಳಿವೆ."

- 'ನ್ಯಾಷನಲ್ ಎಲೆಕ್ಷನ್ ವಾಚ್' ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಗೊಂದಲಗಳನ್ನು ಬಗೆಹರಿಸಿಕೊಂಡಿದ್ದೇವೆ. ಮುಂದಿನ ಚುನಾವಣೆಯಲ್ಲಿ 150 ಸೀಟುಗಳನ್ನು ಗೆದ್ದು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುತ್ತೇವೆ ಎಂದು ಪರಿವಾರದ ನಾಯಕರಿಗೆ ಭರವಸೆ ನೀಡಿದ್ದೇವೆ."

- ಯಡಿಯೂರಪ್ಪ

"ಹಿರಿಯರ ಮಾರ್ಗದರ್ಶನದಂತೆ ಎಲ್ಲಾ ನಾಯಕರು ನಡೆಯುತ್ತೇವೆ. ಒಗ್ಗಟ್ಟು ಕಾಯ್ದುಕೊಳ್ಳುತ್ತೇವೆ. ಪಕ್ಷ ಬಲವರ್ಧನೆಗೆ ಗಮನ ನೀಡುತ್ತೇವೆ. ನಮ್ಮಲ್ಲಿ ಗೊಂದಲಗಳಿಗೆ ಅವಕಾಶ ಕೊಡುವುದಿಲ್ಲ."

- ಈಶ್ವರಪ್ಪ

ಹುಲಿಸಿಂಹಗಳ ಹಂಗು, ಹರಿಣಿಗಳ ಜೊತೆ ಸ್ನೇಹ!

"ಇಸ್ರೇಲ್‌ಗೆ ಮೂರು ದಿನಗಳ ಭೇಟಿ ನೀಡಿದ ವಿದೇಶಾಂಗ ಮಂತ್ರಿ ಕೃಷ್ಣರವರು ಇಸ್ರೇಲ್‌ನ ಜೊತೆ ಇನ್ನಷ್ಟು ಹೆಚ್ಚಿನ ಬಾಂಧವ್ಯ ಮತ್ತು ಪಾಲುದಾರಿಕೆ ಭಾರತ ಹಾತೊರೆಯುತ್ತಿದೆ ಎಂದು ಹೇಳಿದರು. ನಂತರ ಪ್ಯಾಲೆಸ್ತೀನಿಗೂ ಭೇಟಿ ನೀಡಿ ಇಸ್ರೇಲ್ ವಿರುದ್ಧ ಹೋರಾಡುತ್ತಿರುವ ಪ್ಯಾಲೆಸ್ತೀನೀಯರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು."

- ವರದಿ

ಜೆಪಿಗಳ ಬುದ್ಧಿಮಾಂದ್ಯತೆ; ಮಹಿಳೆಯರ ಸಭ್ಯತೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಗಣಿ ಮೆತ್ತಿದ್ದ ಮನೆಗಳಲ್ಲಿದ್ದವರು ಮಾತ್ರ 1984ರಲ್ಲಿ ಭವಿಸಿದ ಭೋಪಾಲ್ ಅನಿಲ ದುರಂತದಲ್ಲಿ ಪ್ರಾಣ ಳೆದುಕೊಳ್ಳದೆ ಪಾರಾದರು.

ಣುವಿಕಿರಣದಿಂದ ಜನ ತಮ್ಮನ್ನು ರಕ್ಷಿಸಿಕೊಳ್ಳಬೇಕಿದ್ದರೆ ವರು ತಮ್ಮ ದೇಹಕ್ಕೆ ಸಗಣಿ ಮೆತ್ತಿಕೊಳ್ಳಬೇಕು.

ಗಣಿಯನ್ನು ಮೆತ್ತಿಕೊಂಡರೆ ಗರ್ಭಿಣಿಯರು ವೈದ್ಯರ ರವಿಲ್ಲದೆ ಸಹಜವಾಗಿಯೇ ಮಕ್ಕಳಿಗೆ ಜನ್ಮ ನೀಡ ಹುದು.

ಮೆ ಹಸುಗಳ ಮತ್ತು ಎಮ್ಮೆಗಳ ಹಾಲು ಕುಡಿಯುವ ನ ನಾಟಿ ಹಸುಗಳ ಹಾಲು ಕುಡಿಯುವ ಜನರಿಗಿಂತ ಚ್ಚು ಅಪರಾಧ ಕೃತ್ಯಗಳಲ್ಲಿ ತೊಡಗುತ್ತಾರೆ.

ಸುವಿನ ದೇಹವನ್ನು ಮುಟ್ಟಿದರೆ ಸಾಕು ಜನರ ಹದಲ್ಲಿರುವ ರಕ್ತದೊತ್ತಡ ತಕ್ಷಣವೇ ತಹಬದಿಗೆ ರುತ್ತದೆ.

ಮೆ ಹಸುಗಳ ಹಾಲಿನಲ್ಲಿ ವಿಷಕಾರಿ ಶ ಇರುತ್ತದೆ. ಆದರಲ್ಲಿರುವ ಎ1 ಪ್ರೊಟೀನಿನಿಂದಾಗಿ ಹೃದಯಾಘಾತ ಗುತ್ತದೆ ಮತ್ತು ಬುದ್ಧಿಮಾಂದ್ಯತೆ ಂಟಾಗುತ್ತದೆ.

ತ್ತು ಗ್ರಾಮ್ ಹಸುವಿನ ಹಾಲು ರು ಟನ್ ಆಮ್ಲಜನಕಕ್ಕೆ ಸಮಾನ.

ಸುವಿನ ಹಾಲು ಕುಡಿಯುವ ಮಕ್ಕಳು ಧೇಯರಾಗಿದ್ದು ತಂದೆತಾಯಿಯ ತನ್ನು ಕೇಳುತ್ತಾರೆ.

ಸುವಿನ ಗಂಜಲದಿಂದ ಕಣ್ಣುರೋಗ ಸು ಮತ್ತು ಚರ್ಮ ರೋಗಗಳು ರಣೆ ಆಗುತ್ತವೆ.

ಸುವಿನ ಗಂಜಲದಿಂದ ಕ್ಷಯ ರೋಗವನ್ನು ನಿವಾರಿಸಬಹುದು.

ಸುವಿನ ಗಂಜಲಕ್ಕೆ ಪ್ರತಿಜೀವಾಣು (ಆಂಟಿ ಬಯಾ ಕ್) ಶಕ್ತಿ ಇದೆ.

ಇಂತಹ ಹಲವಾರು ತಲೆಬುಡವಿಲ್ಲದ ಸುಳ್ಳುಗಳನ್ನು ಮಧ್ಯಪ್ರದೇಶ ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಪ್ರಚಾರ ಮಾಡುತ್ತಿದ್ದಾರೆ. ಆದಕ್ಕೆ ಕಾರಣ ಇತ್ತೀಚೆಗೆ ಗಳು ಆ ರಾಜ್ಯದ ಗೋಸಂತತಿ ವಧಾ ನಿಷೇಧ ಗೆ ತಮ್ಮ ಅಂಕಿತ ಹಾಕಿರುವುದು. ಆ ಕಾಯಿದೆಯನ್ನು ಕಳೆದ ವಾರ ನಮ್ಮ ಶಿವಸುಂದರ್ ತಮ್ಮ 'ಚಾರ್ವಾಕ' ದಲ್ಲಿ ಬರೆದಿದ್ದರು. ಕರ್ನಾಟಕದಲ್ಲೂ ಅಧಿಕಾರ ನ ಚಿಡ್ಡಿಗಳು ಮಧ್ಯಪ್ರದೇಶದ ಕಾಯಿದೆಗಿಂತಲೂ ದ 'ಜಾನುವಾರು ಹತ್ಯಾ ನಿಷೇಧ ಮಸೂದೆ'ಯನ್ನು ವರ್ಷ ವಿಧಾನಸಭೆ ಮತ್ತು ಪರಿಷತ್ತಿನಲ್ಲಿ ಪಾಸು ರ ಬಗ್ಗೆ ಮತ್ತು ಆ ಮಸೂದೆಯು ಕಾಯಿದೆಯಾಗಿ ಬಂದರೆ ಆಗುವ ಪರಿಣಾಮಗಳ ಬಗ್ಗೆಯೂ ತಮ್ಮ ದಲ್ಲಿ ವಿವರಿಸಿದ್ದರು. ಅಷ್ಟೇ ಅಲ್ಲದೆ, ಕಳೆದ ವರ್ಷ ಕೆಯು ಇಂತಹ ಒಂದು ಕಾಯಿದೆ ಹೇಗೆ ರೈತ- ಖ್ಯಾತ-ಹೈನುಗಾರ ಸಮುದಾಯಗಳ ವಿರೋಧಿ ಎಂದು ಹತ್ತಾರು ಲೇಖನಗಳನ್ನು ಪ್ರಕಟಿಸಿದ್ದನ್ನು, ! ವಿರುದ್ಧದ ಆಂದೋಲನದಲ್ಲಿ ಭಾಗಿ ಆಗಿದ್ದನ್ನು ಮನಿಸಿರುತ್ತೀರಿ.

ಲ್ಲಕ್ಕಿಂತ ಮುಖ್ಯವಾಗಿ ಜಾನುವಾರು ಹತ್ಯಾ ಕಾನೂನಾದರೆ ನಮ್ಮ ರಾಜ್ಯದಲ್ಲಿ ಹಾಲು, ಹಾಲು ರುವ ಕಾಫಿ ಮತ್ತು ಟೀ, ಮೊಸರು, ಮಜ್ಜಿಗೆ, ಗಿಣ್ಣು ಳನ್ನು ಸೇವಿಸುವ ಪ್ರತಿಯೊಬ್ಬರ ಮೇಲೂ ಎಂತಹ ಏ ಬೀರಲಿದೆ ಎಂಬ ಅಂಶವೂ ಅಡಗಿದೆ. ಈಗಾ ನದ್ರೋಹಿ ಬಿಜೆಪಿ ಅಧಿಕಾರಕ್ಕೆ ಬಂದನಂತರ ಲ್ಲಿ ಹಾಲಿನ ದರವನ್ನು ಮೂರು ಪಟ್ಟು ಏರಿಸಿದೆ. ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಒಂದು ಲೀಟರ್ ಬೆಲೆ ರಾಜ್ಯದಲ್ಲಿ ಕೇವಲ 16 ರೂಪಾಯಿ ಆಗಿತ್ತು, ಆದರೀಗ ಅದರ ಬೆಲೆ 24 ರೂಪಾಯಿಯಾಗಿದೆ. ಇದು ಸಾಮಾನ್ಯ ಜನರ ಮೇಲೆ ಎಂತಹ ಪರಿಣಾಮ ಬೀರಿದೆ ಎಂಬುದನ್ನು ಪ್ರಜಾವಾಣಿ ಪತ್ರಿಕೆಯಲ್ಲಿ ಪಡುಬಿದ್ರೆ ಮೊಹಮ್ಮದ್ ಅವರು ಬಿಡಿಸಿದ್ದ ಕಾರ್ಟೂನ್ ಸೆರೆ ಹಿಡಿದಿತ್ತು. ಹಾಗೊಮ್ಮೆ ಬಿಜೆಪಿ ಪ್ರೇರಿತ ಜಾನುವಾರು ಹತ್ಯಾ ನಿಷೇಧ ಕಾನೂನು ಜಾರಿಯಾದರೆ ರಾಜ್ಯದಲ್ಲಿ ಹಾಲಿನ ಬೆಲೆ ಗಗನಕ್ಕೇರುವುದು ಗ್ಯಾರಂಟಿ.

ಈ ಬಿಜೆಪಿಯ ಜನ ಎಷ್ಟು ದಡ್ಡರು ಎಂದರೆ ಸಿ.ಟಿ.ರವಿ ಎಂಬ ಬುದ್ಧಿಮಾಂದ್ಯ ಶಾಸಕ "ಗೋವುಗಳನ್ನು ವಧೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಹಾಲಿನ ಬರ ಉಂಟಾಗಿದೆ" ಎಂದಿದ್ದ. (ಮಧ್ಯಪ್ರದೇಶದ ಚೆಡ್ಡಿಗಳು ಹೇಳಿರುವಂತೆ ಪ್ರಾಯಶಃ ಈ ರವಿ ಸೀಮೆ ಅಥವಾ ಎಮ್ಮೆ ಹಾಲನ್ನು ಕುಡಿದೇ ಬೆಳೆದಿರಬೇಕು!) ವಾಸ್ತವವಾಗಿ ಮುದಿ ದನಗಳನ್ನು ಜನ ಕಸಾಯಿಖಾನೆಗಳಿಗೆ ಮಾರುತ್ತಾರೆಯೇ ಹೊರತು ಹಾಲು ಕರೆಯುವ ದನಗಳನ್ನು ಯಾರೂ ಮಾರುವುದಿಲ್ಲ. ಆದ್ದರಿಂದ ಹಾಲಿನ ಉತ್ಪತ್ತಿಗೂ, ಜಾನುವಾರು ಹತ್ಯೆಗೂ ಯಾವ ಸಂಬಂಧವೂ ಇಲ್ಲ. ಬದಲಾಗಿ ಜಾನುವಾರು ಹತ್ಯೆಯನ್ನು ನಿಷೇಧಿಸಿದರೆ ಹಾಲಿನ ಉತ್ಪತ್ತಿ ಕಡಿಮೆಯಾಗುತ್ತದೆ.



ಈಗ ಮುದಿ ದನಗಳನ್ನು ಮತ್ತು ಯಾವ ಪ್ರಯೋಜನಕ್ಕೂ ಬಾರದ ಸೀಮೆ ತಳಿಯ ಗಂಡು ದನಗಳನ್ನು ರೈತರು ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವವರು ಮಾರುತ್ತಾರೆ ಮತ್ತು ಅವುಗಳಿಂದ ಬಂದ ಹಣದೊಂದಿಗೆ ಉಪಯುಕ್ತವಾದ ಜಾನುವಾರುಗಳನ್ನು ಕೊಂಡುಕೊಳ್ಳುತ್ತಾರೆ. ಜಾನುವಾರು ಹತ್ಯೆ ನಿಷೇಧ ಕಾನೂನು ಜಾರಿಗೆ ಬಂದರೆ, ಅಂತಹ ನಿರುಪಯುಕ್ತ ಜಾನುವಾರುಗಳನ್ನು ರೈತರು ಮತ್ತು ಹೈನುಗಾರಿಕೆಯಲ್ಲಿರುವವರು ವಿಧಿ ಇಲ್ಲದೆ ಸಾಕಬೇಕಾಗುತ್ತದೆ. ಆದರಿಂದ ಅವರ ಲಾಭದ ಪ್ರಮಾಣ ಕುಸಿದು ಅವರ ಜೀವನೋಪಾಯಕ್ಕೇ ಕೊಡಲಿ ಏಟು ಬೀಳುತ್ತದೆ. ಇತ್ತ ಕೆಲಸಕ್ಕೆ ಬಾರದ ದನಗಳನ್ನು ಸಾಕಲು ಆರ್ಥಿಕ ಶಕ್ತಿಯೂ ಇಲ್ಲದೆ, ಅತ್ತ ಕಾನೂನು ಮತ್ತು ಜೈಲಿಗೆ ಹೆದರಿ ಅವುಗಳನ್ನು ಮಾರಲೂ ಆಗದೆ, ಇಂತಹ ರೇಜಿಗೆಗಳೇ ಬೇಡವೆಂದು ಜನರು ದನಗಳನ್ನು ಸಾಕುವುದನ್ನೇ ನಿಲ್ಲಿಸುತ್ತಾರೆ. ಆಗ ಸಹಜವಾಗಿಯೇ ಹಾಲಿನ ಬರ ಕಾಣಿಸಿಕೊಳ್ಳುತ್ತದೆ... ಇಂತಹ ಒಂದು ಸರಳ ಸತ್ಯ ಗೊಡ್ಡು ಚೆಡ್ಡಿಗಳಿಗೆ ಅರ್ಥವಾಗುವುದು ಕಷ್ಟ ಬಿಡಿ.

ಇನ್ನು ಈ ಗೊಡ್ಡು ದನಗಳನ್ನು ಸಾಕಲು ಬೇಕಿರುವ ಅಪಾರ ಮೊತ್ತದ ಹಣ ಒಂದೆಡೆ ಆದರೆ, ಇವುಗಳ ವಧೆಯಿಂದ ಆಗುವ ಅಪಾರ ಮೊತ್ತದ ಲಾಭವೂ ಇನ್ನೊಂದೆಡೆ ಇದೆ. ಸಿಂಥಿಯಾ ಸ್ಟೀಫನ್ ಎಂಬುವವರು ಬರೆದಿರುವ ಲೇಖನದ ಪ್ರಕಾರ ನಮ್ಮ ರಾಜ್ಯದಲ್ಲಿ ಪ್ರತಿದಿನ ಸುಮಾರು 20,000 ಗೊಡ್ಡು ದನಗಳು ಕಸಾಯಿಖಾನೆಗೆ ಹೋಗುತ್ತವೆ. ಈ ಕಸಾಯಿಖಾನೆಗಳಲ್ಲಿ ಪ್ರತಿದಿನ ಎರಡು ಕೋಟಿ ರೂಪಾಯಿಗಳಷ್ಟು ಮೌಲ್ಯದ ಎರಡು ಲಕ್ಷ ಕೇಜಿಯಷ್ಟು ಮಾಂಸ ತಯಾರಾಗುತ್ತದೆ. ಅಷ್ಟೇ ಅಲ್ಲದೆ, ತೊಗಲು, ಮೂಳೆ, ಕೋಡು, ಗೊರಸು, ಇತ್ಯಾದಿಗಳ ಮೌಲ್ಯವೇ ಒಂದು ಕೋಟಿ ರೂಪಾಯಿ. ಕಸಾಯಿಖಾನೆಯ ಈ ಉಪಉತ್ಪನ್ನಗಳು ತೊಗಲು, ಔಷಧಿ ಮತ್ತು ಸಕ್ಕರೆ ತಯಾರಿಕೆಯಲ್ಲಿ ಕಚ್ಚಾಸಾಮಗ್ರಿಗಳಾಗಿವೆ. ಅಂದರೆ ಜಾನುವಾರು ಹತ್ಯೆ ನಿಷೇಧದಿಂದಾಗಿ ಸಕ್ಕರೆಯಿಂದ ಹಿಡಿದು ಚಪ್ಪಲಿ ಮತ್ತು ಶೂಗಳು ಸೇರಿದಂತೆ ಹಲವಾರು ಪದಾರ್ಥಗಳ ಬೆಲೆಯೂ ಹೆಚ್ಚಾಗಿ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ.

ವಾಸ್ತವವಾಗಿ ನಮ್ಮ ದೇಶದಲ್ಲಿ ದನದ ಮಾಂಸ ತಿನ್ನುವವರ ಸಂಖ್ಯೆಯೇ ಹೆಚ್ಚಿನದ್ದಾಗಿದೆ. ವಿಶ್ವಸಂಸ್ಥೆಯ ಒಂದು ವಿಭಾಗ ಕೊಟ್ಟ ಒಂದು ವರದಿಯ ಪ್ರಕಾರ ನಮ್ಮ ದೇಶದಲ್ಲಿ ಪ್ರತಿವರ್ಷ 26 ಲಕ್ಷ ಟನ್ನಿನಷ್ಟು ದನದ ಮಾಂಸ ಮಾರಾಟವಾಗುತ್ತದೆ. ಅದಕ್ಕೆ ಹೋಲಿಸಿದರೆ ಕುರಿ ಮಾಂಸದ ಪ್ರಮಾಣ ಕೇವಲ ಆರು ಲಕ್ಷ ಟನ್ ಮತ್ತು ಹಂದಿಮಾಂಸ 14 ಲಕ್ಷ ಟನ್. ಅಷ್ಟೇ ಅಲ್ಲದೆ, ಪ್ರತಿವರ್ಷ 1.28 ಮಿಲಿಯನ್ ಟನ್ನಿನಷ್ಟು ದನದ ಮಾಂಸವು ರಫ್ತಾಗುತ್ತಿದ್ದು ಜಗತ್ತಿನಲ್ಲೇ ಅತಿಹೆಚ್ಚು ದನದಮಾಂಸ ಮಾರುವ ಮೂರನೆ ದೇಶವಾಗಿದೆ ಭಾರತ.

ದನಗಳು ನಮ್ಮ ರಾಜ್ಯದ ರೈತರ ಮತ್ತು ಹೈನುಗಾರಿಕೋದ್ಯಮಿಗಳ ಜೀವನಾಧಾರವಾಗಿದ್ದರೆ, ಅವು ನಿರುಪಯುಕ್ತವಾದ ನಂತರ ಅವುಗಳ ಮಾಂಸ ನಮ್ಮ ಬಡವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಕಡಿಮೆ ಬೆಲೆಯಲ್ಲಿ ಸಿಗುವ ಪೌಷ್ಟಿಕ ಆಹಾರವಾಗಿದೆ. ಜೊತೆಗೆ ಅವುಗಳಿಂದ ಸಿಗುವ ಉಪ ಉತ್ಪನ್ನಗಳು ಹಲವಾರು ಕಾರ್ಖಾನೆಗಳಿಗೆ ಕಚ್ಚಾ ಸಾಮಗ್ರಿಯಾಗಿದೆ. ಈ ಎಲ್ಲಾ ವಲಯಗಳಲ್ಲಿ ಲಕ್ಷಾಂತರ ಜನರು ಇದ್ದಾರೆ. ಜಾನುವಾರು ಹತ್ಯೆ ನಿಷೇಧ ಕಾನೂನು ಜಾರಿಯಾದರೆ ಅವರೆಲ್ಲರ ಬದುಕು ಅತಂತ್ರವಾಗುತ್ತದಲ್ಲದೆ, ಈ ರಾಜ್ಯದ ಕೋಟ್ಯಾಂತರ ಜನರ ಕೈಗಳಿಗೆ ಹಾಲು ಕಡಿಮೆ ದರದಲ್ಲಿ ಸಿಗದಂತಾಗುತ್ತದೆ.

ಅಂದರೆ ಬಿಜೆಪಿಗಳ ಕೆಟ್ಟ ಚಿಂತನಾಕ್ರಮದಿಂದಾಗಿ ನಮ್ಮ ರಾಜ್ಯದ ಲಕ್ಷಾಂತರ ಜನರ ಬದುಕಿಗೆ ಕೊಡಲಿ ಏಟು ಬೀಳುತ್ತದೆ ಮಾತ್ರವಲ್ಲ ಕೋಟ್ಯಂತರ ಜನರ ಜೇಬಿಗೂ ಚೆಡ್ಡಿಗಳು ಕೈಹಾಕುವ ಹುನ್ನಾರ ಇದರ ಹಿಂದೆ ಅಡಗಿದೆ. ನಮ್ಮ ಜನ ಇವರ ಕುತಂತ್ರವನ್ನು ಅರಿತು ಇಂತಹ ಕೆಟ್ಟ ಮಸೂದೆಯು ಜಾರಿಗೆ ಬರದಂತೆ ನೋಡಿಕೊಳ್ಳಬೇಕಿದೆ.

****

ಮಹಿಳೆಯರು 'ಸಭ್ಯ'ವಾದ ಉಡುಪು ಧರಿಸಬೇಕು, ಇಲ್ಲವೆಂದರೆ ಅವರ ಮೇಲೆ ಅತ್ಯಾಚಾರ ಗ್ಯಾರಂಟಿ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಯಾದ ಸಿ.ಸಿ.ಪಾಟೀಲ್ ಪೆದ್ದುಪೆದ್ದಾದ ಹೇಳಿಕೆ ನೀಡಿದ್ದಾನೆ. ಆತ ಹೇಳಿಕೇಳಿ ಬುದ್ಧಿಮಾಂದ್ಯ ಬಿಜೆಪಿ ಪಕ್ಷದ ಸದಸ್ಯ. ಆದ್ದರಿಂದ ಆತನಿಂದ ಇಂತಹ ಮಾತುಗಳಲ್ಲದೆ ಬೇರೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಆತ ಇಂತಹ ಒಂದು ಹೇಳಿಕೆ ಕೊಟ್ಟ ಬೆನ್ನಲ್ಲೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಲೈಂಗಿಕ ಕಿರುಕುಳ ತಡೆ ಸಮಿತಿಯ ನೇತೃತ್ವ ವಹಿಸಿರುವ ಕೆ.ಕೆ.ಸೀತಮ್ಮ ಎಂಬಾಕೆಯೂ ಅಂತಹದ್ದೇ ಹೇಳಿಕೆಯನ್ನು ನೀಡಿದ್ದಾಳೆ.

ಈ ಹಿಂದೆ ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥೆಯೂ ಆಗಿದ್ದ ಸೀತಮ್ಮ ಇತ್ತೀಚೆಗೆ ಇಂಗ್ಲಿಷ್ ಪತ್ರಿಕೆಯೊಂದಕ್ಕೆ ನೀಡಿರುವ ಹೇಳಿಕೆಯನ್ನು ನೋಡಿ:

"ಮಹಿಳೆಯರು ಅಸಭ್ಯವಾದ ಬಟ್ಟೆ ಧರಿಸುವುದನ್ನು ನಾನು ವಿರೋಧಿಸುತ್ತೇನೆ. ಅವರು ಅಂತಹ ಬಟ್ಟೆ ತೊಡುವುದರಿಂದಲೇ ಪುರುಷರನ್ನು ಪ್ರಲೋಭಿಸಿ ಅತ್ಯಾಚಾರಕ್ಕೆ ಗುರಿ ಯಾಗುತ್ತಾರೆ. ಸೀರೆ ತೊಟ್ಟಾಗಲೂ ಅದ ರೊಂದಿಗೆ ಉದ್ದನೆ ತೋಳಿರುವ ಬ್ಲೌಸ್ ಧರಿಸಬೇಕು. ಮಹಿಳೆಯರು ಮೈತುಂಬಾ ಬಟ್ಟೆ ಹಾಕಿಕೊಂಡಾಗ ಚೆನ್ನಾಗಿ ಕಾಣಿಸುತ್ತಾರೆ. ಮಹಿಳೆಯರಾಗಿ ನಾವು ನಮ್ಮ ರಕ್ಷಣೆಗೆ ಸಭ್ಯವಾದ ಉಡುಪನ್ನು ಧರಿಸಬೇಕು. ಮಹಿಳೆಯರ ಸ್ವಾತಂತ್ರಕ್ಕೂ ಅವರು ಧರಿಸುವ ಬಟ್ಟೆಗಳಿಗೂ ಯಾವ ಸಂಬಂಧವೂ ಇಲ್ಲ. ಮಹಿಳೆಯರಿಗೆ ಸಂಜೆ ಆರು ಗಂಟೆ ಅಥವಾ ಆರೂವರೆ ಗಂಟೆಯೊಳಗೆ ಮನೆ ಸೇರುವುದಕ್ಕೆ ಏನು ಧಾಡಿ?"

ವಾಸ್ತವವಾಗಿ ಮಹಿಳೆಯರು ಧರಿಸಿರುವ ಉಡುಪಿಗೂ, ಆಕೆಯ ಮೇಲೆ ನಡೆಯುವ ಅತ್ಯಾಚಾರಕ್ಕೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಹಲವಾರು ಅಧ್ಯಯನಗಳು ಸಾಬೀತುಪಡಿಸಿವೆ. ಅಷ್ಟೇ ಅಲ್ಲ, ಹೇಗೆ ಓರ್ವ ಸಭ್ಯಸ್ಥ ಅಶ್ಲೀಲವಾದ ಉಡುಪನ್ನು ಧರಿಸಿರುವ ಮಹಿಳೆಯನ್ನು ನೋಡಿದಾಗಲೂ ಪ್ರಲೋಭನೆಗೊಳ್ಳುವುದಿಲ್ಲವೋ ಹಾಗೆಯೇ ಓರ್ವ ಕಾಮುಕ ಸಭ್ಯವಾದ ಬಟ್ಟೆ ತೊಟ್ಟಿರುವ ಮುದಿಕಿಯನ್ನೂ ಕಾಮದ ವಸ್ತುವಾಗಿ ಮಾತ್ರ ನೋಡುತ್ತಾನೆ. ಅಂದರೆ ಅತ್ಯಾಚಾರಗಳು ಸಂಭವಿಸುವುದು ಪುರುಷರಲ್ಲಿನ ಕಾಮುಕ ಬುದ್ಧಿಯಿಂದಾಗಿಯೇ ಹೊರತು, ಮಹಿಳೆಯರು ಎಂತಹ ಬಟ್ಟೆ ತೊಟ್ಟಿದ್ದಾರೆ ಎಂಬ ಕಾರಣಕ್ಕಾಗಿ ಅಲ್ಲ.

ಅಂದಹಾಗೆ ಈ ಸೀತಮ್ಮನ ಪ್ರಕಾರ ಸೀರೆಯೊಂದಿಗೆ ಉದ್ದನೆ ತೋಳಿರುವ ಬ್ಲೌಸ್ ಮಾತ್ರ ಸೂಕ್ತ ಎಂಬುದು ನಿಜವಾದರೆ ನಮ್ಮ ದೇಶದ ಬಹಳಷ್ಟು ಮಹಿಳೆಯರು ಪ್ರತಿದಿನ ಅಸಭ್ಯವಾದ ಬಟ್ಟೆಯನ್ನೇ ತೊಡುತ್ತಾರೆ. ಅಂದರೆ ಆಕೆಯ ಪ್ರಕಾರ ಅವರೆಲ್ಲ ತಮ್ಮ ಮೇಲೆ ಅತ್ಯಾಚಾರವೆಸಗುವಂತೆ ಪುರುಷರನ್ನು ಪ್ರಚೋದಿಸುತ್ತಿದ್ದಾರೆ.

ಅಷ್ಟೇ ಅಲ್ಲ, ಸ್ವತಃ ಪ್ರಾಧ್ಯಾಪಕಿಯಾಗಿರುವ ಸೀತಮ್ಮ ಮಹಿಳೆಯರಿಗೆ ಸೂಚಿಸಿರುವಂತೆ ತಾನೇ ಸಂಜೆ ಆರು ಗಂಟೆಗೆ ಮುನ್ನ ಕೆಂಗೇರಿಯಲ್ಲಿರುವ ವಿಶ್ವವಿದ್ಯಾಲಯದಿಂದ ತನ್ನ ಮನೆ ಹೊಕ್ಕುತ್ತಾಳೆಯೇ? ಬೇರೆ ಮಹಿಳೆಯರು ಈ ಸೀತಮ್ಮನನ್ನು "ನಿನಗ್ಯಾಕೆ ಈ ಅಧ್ಯಾಪಕಿ ವೃತ್ತಿ, ತೆಪ್ಪಗೆ ಮನೆಯಲ್ಲಿ ಕೂತಿರಲು ನಿನಗೇನು ಧಾಡಿ?" ಎಂದು ಪ್ರಶ್ನಿಸಬಹುದಲ್ಲವೇ?!


ಸುವರ್ಣ


ಮರ್ಯಾದಾಹೀನ ಹತ್ಯೆ ಸುವರ್ಣಳೆಂಬ ಹೆಣ್ಣುಮಗಳು ಮುಂದಿಟ್ಟಿರುವ ಪ್ರಶ್ನೆಗಳು

"ಅಂತರ್ಜಾತಿ ಮದುವೆಗಳನ್ನು ಮನೆಯವರು ವಿರೋಧಿಸುವುದು ಈ ಜಾತಿಗ್ರಸ್ತ ಸಮಾಜದಲ್ಲಿ ಅತ್ಯಂತ ಮಾಮೂಲು. ಅದೇರೀತಿ ದಿನೇದಿನೇ ಅಂತರ್ಜಾತಿ ಮದುವೆಗಳು ಹೆಚ್ಚಾಗುತ್ತಾ ಹೋಗುತ್ತಿರುವುದೂ, ನಿಧಾನಕ್ಕೆ ಕುಟುಂಬಗಳೂ ಆರಂಭದ ಮುನಿಸಿನ ನಂತರ ಒಪ್ಪಿಕೊಳ್ಳುವುದೂ ಸಹ ಹೆಚ್ಚಾಗುತ್ತಿದೆ. ಆದರೆ ಸಮಾಜ ಹಿಂದಕ್ಕೆ ಚಲಿಸುವ ರೀತಿಯಲ್ಲಿ ಮರ್ಯಾದಾ(ಹೀನ) ಹತ್ಯೆಗಳು ಶುರುವಾದವು. ಅವು ಶುರುವಾದಾಗ ಸಮಾಜದಲ್ಲಿ ತೀವ್ರವಾದ ಪ್ರತಿಕ್ರಿಯೆ ಬಂದು, ಆರಂಭದಲ್ಲೇ ಇದನ್ನು ಇಲ್ಲವಾಗಿಸುವ ಕಡೆಗೆ ಪ್ರಯತ್ನಗಳು ನಡೆಯಬೇಕಿತ್ತು. ಹಾಗೆ ನಡೆಯದಿದ್ದುದರಿಂದ ಅದು ಒಂದು ಸರಣಿ ವಿದ್ಯಮಾನವಾಗಿ ಬೆಳೆಯಿತು. ಇಂದು ಕರ್ನಾಟಕದಲ್ಲೂ ಅಂತಹುದೇ ಒಂದು ಸಂದರ್ಭ ಎದುರಾಗಿದ್ದು, ಈ ನಾಡಿನ ಎಲ್ಲಾ ಪ್ರಜ್ಞಾವಂತರ ಮುಂದೆ ಅದೇ ಸವಾಲು ಇದೆ."

• ಲಕ್ಷ್ಮಣ್ ಚೀರನಹಳ್ಳಿ ಮತ್ತು ವಾಸು ಎಚ್.ವಿ

ಈ ಊರಲ್ಲೇ ಏಕೆ ಇಂತಹ ಘಟನೆಗಳು ಪದೇಪದೇ ನಡೆಯುತ್ತಿವೆಯೋ? ಕುರಿ ಕದ್ದ ಎಂಬ ಅನುಮಾನ ಬಂದದ್ದಕ್ಕೇ ಕಲ್ಲಲ್ಲೇ ಕೊಂದು ಹಾಕುವ ಕ್ರೂರಿಗಳೂ ಇಲ್ಲಿದ್ದಾರೆ. ಮರಳು ಸಾಗಣೆ ಕುರಿತ ಕಾನೂನುಕಟ್ಟಲೆಗಳನ್ನು ಹೇಳಿದ್ದಕ್ಕೆ ಉಪ ವಿಭಾಗೀಯ ಅಧಿಕಾರಿಯೊಬ್ಬರಿಗೆ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲೇ ಕಂಬಕ್ಕೆ ಕಟ್ಟಿ, ಪೆಟ್ರೋಲ್ ಹಾಕಿ ಸುಟ್ಟು ಹಾಕುತ್ತೇವೆಂದು ಧಮಕಿಹಾಕಿ ದಕ್ಕಿಸಿಕೊಂಡವರಿದ್ದಾರೆ. ಇನ್ನು ಪ್ರೀತಿಯ ವಿಚಾರಕ್ಕೆ ಬಂದರೆ, ಅದರಲ್ಲೂ ಅಂತರ್ಜಾತಿ ಪ್ರೇಮಪ್ರಕರಣ ಬೆಳಕಿಗೆ ಬಂದರೆ ಆ ಪ್ರೇಮಿಗಳ ಕಥೆ ಮುಗಿದಂತೆ! ಈಗ ನಡೆದಿರುವುದು ಅಂತಹುದೇ ಒಂದು ದುರಂತ ಪ್ರೇಮಕಥೆ; ಬಲಿಷ್ಠ ಜಾತಿವಾದಿ ಭೂಮಾಲಿಕ ಒಕ್ಕಲಿಗ ಕುಟುಂಬವೊಂದರಲ್ಲಿ ಹುಟ್ಟಿ, ಮಾದಿಗ ಹುಡುಗನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದಕ್ಕೆ ಅಮಾಯಕ ಹೆಣ್ಣುಜೀವವೊಂದು ಸದ್ದಿಲ್ಲದೆ ಪ್ರಾಣ ಕಳೆದುಕೊಂಡ ದುರಂತ ಕಥಾನಕವಿದು! ಇದು ಬಿಹಾರದ್ದೋ, ಹರ್ಯಾಣ, ರಾಜಾಸ್ಥಾನ ರಾಜ್ಯಗಳದ್ದೋ ಅಲ್ಲ, ನಮ್ಮದೇ ರಾಜ್ಯದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಆಬಲವಾಡಿ ಎಂಬ ಗ್ರಾಮದಲ್ಲಿ ಎರಡು ತಿಂಗಳ ಕೆಳಗೆ ನಡೆದು, ಇಡೀ ಪೊಲೀಸ್ ಇಲಾಖೆಗೆ ಸಂಪೂರ್ಣ ಮಾಹಿತಿಯಿದ್ದೂ ಹೊರಗೇ ಬರದೆ ಮುಚ್ಚಿಹೋಗುತ್ತಿದ್ದ ಒಂದು ನರಹತ್ಯೆಯ ಸಂಗತಿಯಿದು. ದವಲನ ರಾಮಕೃಷ್ಣ ಎಂಬ ಜಾತ್ಯತೀತ ಜನತಾದಳದ ನಾಯಕ ತನ್ನ ಮಗಳ ಪಾಲಿಗೆ ವಿಲನ್ ಆಗಿ, ಸುವರ್ಣಳನ್ನು ಸಾಯುವ ಹಾಗೆ ಬಡಿದು, ಕೊನೆ ಉಸಿರಿದ್ದ ಸಂದರ್ಭದಲ್ಲಿ ಕೈಯ್ಯಾರೆ ನೇಣಿಗೇರಿಸಿ, ಸತ್ತ ಅರ್ಧ ಗಂಟೆಯ ಒಳಗೇ ಸುಳಿವೇ ಇಲ್ಲದಂತೆ ಬೂದಿಯಾಗಿಸಿದ ಅಮಾನುಷ ಪ್ರಕರಣವಿದು.

ಹಾಗೆಂದು ಈ ಊರಿನಲ್ಲಿ ಮಾನವೀಯ ಮನಸ್ಸುಳ್ಳವರು ಇಲ್ಲವೇ ಇಲ್ಲವೆಂತಲೋ, ಇದು ವಿಚಿತ್ರ ಊರು ಎಂತಲೋ ಅಲ್ಲ, ಅಂತಹ ಅಂತಃಕರಣವಿರುವವರು ಇರುವುದರಿಂದಲೇ ಈ ಪ್ರಕರಣದ ಮತ್ತೊಂದು ಯುವಜೀವ ಗೋವಿಂದರಾಜು ಇನ್ನೂ ಜೀವದೊರಸೆಯಿಂದ ಬದುಕುಳಿದಿದ್ದಾನೆ. ಯಾವ ಒಕ್ಕಲಿಗ ಜಾತಿಯ ಒಂದು ಕುಟುಂಬ ತನ್ನದೇ ವಂಶದ ಕುಡಿಯನ್ನು ಕೊಂದಿತೋ, ಅದೇ ಒಕ್ಕಲಿಗ ಜಾತಿಯ ಜನರು ಈ ಹುಡುಗನನ್ನು ಬದುಕಿಸಿದ್ದಾರೆ. ಆದರೆ ಇಂತಹವರು ಅಲ್ಲಿ ಗಟ್ಟಿ ದನಿಯಿಂದ ಮಾತಾಡಲಾರದಂತೆ, ಅವರು ಸತ್ಯವನ್ನು ಬಹಿರಂಗವಾಗಿ ಹೇಳಿ, ಕೇಡನ್ನು ಕಡಿಮೆ ಮಾಡುವಂತೆ ಆಗದಷ್ಟು ಪ್ರಮಾಣಕ್ಕೆ ಆ ಊರಿನ ದವಲನ ರಾಮಕೃಷ್ಣನ ಕುಟುಂಬ ವರ್ತಿಸುತ್ತಿದೆ ಮತ್ತು ಅದಕ್ಕೆ ಸರಿಯಾಗಿ ಜಿಲ್ಲೆಯ ಪೊಲೀಸರು ಜೊತೆಗೇಡಿಗಳಾಗಿ ನಡೆದುಕೊಂಡಿದ್ದಾರೆ.


ದವಲನ ರಾಮಕೃಷ್ಣ

ಇದು ನಿಸ್ಸಂದೇಹವಾಗಿ ಮರ್ಯಾದಾಹೀನ ಹತ್ಯೆ

ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕಳೆದೊಂದು ದಶಕದಲ್ಲಿ ಹುಟ್ಟಿ, ನಂತರ ಒಂದು ವಿದ್ಯಮಾನವಾಗಿ ಬೆಳೆದಿರುವ ಮರ್ಯಾದಾ(ಹೀನ) ಹತ್ಯೆಯಂತಹುದೇ ಪ್ರಕರಣ ಇದಾಗಿದೆ. ಕುಟುಂಬ ಹಾಗೂ ಜಾತಿಯ ಕಟ್ಟುಪಾಡನ್ನು ಮೀರಿ ಪ್ರೀತಿಸುವ, ಮದುವೆಯಾಗುವ ಜೋಡಿಗೆ ಖಾಪ್ ಪಂಚಾಯುತಿಯಲ್ಲಿ ಮರಣದಂಡನೆ ವಿಧಿಸಿ ಅದೇ ಸಮುದಾಯಕ್ಕೆ ಸೇರಿದವರೇ ಕೊಂದು ಹಾಕುವ ವಿದ್ಯಮಾನವನ್ನು ಅದ್ಯಾರು ಮರ್ಯಾದಾ ಹತ್ಯೆಯೆಂದು ಕರೆದರೋ ಗೊತ್ತಿಲ್ಲ. ಆದರೆ ಇದು ದೇಶಾದ್ಯಂತ ಪ್ರಜ್ಞಾವಂತರನ್ನು ಬೆಚ್ಚಿಬೀಳಿಸಿದ್ದಂತೂ ಸತ್ಯ.

ಅಂತರ್ಜಾತಿ ಮದುವೆಗಳನ್ನು ಮನೆಯವರು ವಿರೋಧಿಸುವುದು ಈ ಜಾತಿಗ್ರಸ್ತ ಸಮಾಜದಲ್ಲಿ ಅತ್ಯಂತ ಮಾಮೂಲು. ಅದೇರೀತಿ ದಿನೇದಿನೇ ಅಂತರ್ಜಾತಿ ಮದುವೆಗಳು ಹೆಚ್ಚಾಗುತ್ತಾ ಹೋಗುತ್ತಿರುವುದೂ, ನಿಧಾನಕ್ಕೆ ಕುಟುಂಬಗಳೂ ಆರಂಭದ ಮುನಿಸಿನ ನಂತರ ಒಪ್ಪಿಕೊಳ್ಳುವುದೂ ಸಹ ಹೆಚ್ಚಾಗುತ್ತಿದೆ. ಆದರೆ ಸಮಾಜ ಹಿಂದಕ್ಕೆ ಚಲಿಸುವ ರೀತಿಯಲ್ಲಿ ಮರ್ಯಾದಾ(ಹೀನ) ಹತ್ಯೆಗಳು ಶುರುವಾದವು. ಅವು ಶುರುವಾದಾಗ ಸಮಾಜದಲ್ಲಿ ತೀವ್ರವಾದ ಪ್ರತಿಕ್ರಿಯೆ ಬಂದು, ಆರಂಭದಲ್ಲೇ ಇದನ್ನು ಇಲ್ಲವಾಗಿಸುವ ಕಡೆಗೆ ಪ್ರಯತ್ನಗಳು ನಡೆಯಬೇಕಿತ್ತು, ಹಾಗೆ ನಡೆಯದಿದ್ದುದರಿಂದ ಅದು ಒಂದು ಸರಣಿ ವಿದ್ಯಮಾನವಾಗಿ ಬೆಳೆಯಿತು. ಇಂದು ಕರ್ನಾಟಕದಲ್ಲೂ ಅಂತಹುದೇ ಒಂದು ಸಂದರ್ಭ ಎದುರಾಗಿದ್ದು, ಈ ನಾಡಿನ ಎಲ್ಲಾ ಪ್ರಜ್ಞಾವಂತರ ಮುಂದೆ ಅದೇ ಸವಾಲು ಇದೆ.

ದುರಂತ ಪ್ರೇಮಕಥೆ

ದವಲನ ರಾಮಕೃಷ್ಣ ಎಂಬ ಕೊಪ್ಪ ವಿಎಸ್‌ಎಸ್‌ಎನ್‌ನ ಅಧ್ಯಕ್ಷ, ಹೋಬಳಿಯ ಜೆಡಿಎಸ್‌ನ ದೊಡ್ಡ ನಾಯಕ. ಆತನ ಮಗಳು ಸುವರ್ಣ ಹಾಗೂ ಅದೇ ಊರಿನ ಮಾದಿಗ ಜಾತಿಯ ಗೋವಿಂದರಾಜು ಪರಸ್ಪರ ಪ್ರೀತಿಸಿದ್ದಾರೆ. ಅದು ಹುಡುಗಿಯ ಮನೆಗೆ ಗೊತ್ತಾಗಿ, ಗೋವಿಂದರಾಜುವಿಗೆ ತೀವ್ರ ಎಚ್ಚರಿಕೆ ನೀಡಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ಆತನ ಅಣ್ಣ ತಿಮ್ಮಪ್ಪನನ್ನು ಕರೆಸಿ ಇದು ಹೀಗೇ ಮುಂದುವರೆದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಧಮಕಿ ಹಾಕಿದ್ದಾರೆ. ದವಲನ ರಾಮಕೃಷ್ಣನ ಈ ಹಿಂದಿನ ಕೃತ್ಯಗಳು, ಊರಿನ ಒಟ್ಟು ಸ್ಥಿತಿಯ ಬಗ್ಗೆ ಅರಿವಿರುವ ತಿಮ್ಮಪ್ಪರ ಕುಟುಂಬ ಗೋವಿಂದರಾಜುವಿಗೆ ಸರಿಯಾಗಿ ಬೈದಿದ್ದಾರೆ. ಊರಲ್ಲಿ ಇದ್ದರೆ ಇವನು ಮುಂದುವರೆಸಬಹುದು ಎಂದು ಊರು ಬಿಟ್ಟು ಹೋಗಬೇಕೆಂದು ಮನೆಯವರೇ ತಾಕೀತು ಮಾಡಿ ಕಳಿಸಿಬಿಟ್ಟಿದ್ದಾರೆ.

ರಾಮಕೃಷ್ಣನ ಕುಟುಂಬದವರು ಅರ್ಜೆಂಟಾಗಿ ಹುಡುಗಿಗೆ ಪಕ್ಕದ ಪಣ್ಣೇದೊಡ್ಡಿಯ ರವಿ ಎಂಬಾತನ ಜೊತೆ ಎಂಗೇಜ್‌ಮೆಂಟ್ ಮಾಡಿಬಿಟ್ಟಿದ್ದಾರೆ. ಆದರೆ ಸುವರ್ಣ ಸತತವಾಗಿ ಗೋವಿಂದರಾಜುವಿನ ಜೊತೆ ಮೊಬೈಲ್ ಸಂಪರ್ಕದಲ್ಲಿದ್ದು, ತಾನು ಬಂದುಬಿಡುತ್ತೇನೆ, ಎಲ್ಲಿಯಾದರೂ ಹೋಗಿಬಿಡೋಣ ಎಂದು ಒತ್ತಾಯಿಸುತ್ತಾ ಬಂದಿದ್ದಾಳೆ. ಈ ಮಧ್ಯೆ ಹಲವು ಸಾರಿ ಹೋಗಿಬಿಡುವ ಆಲೋಚನೆ ಮಾಡಿದ್ದರಾದರೂ ಅದು ಆಗಿರಲಿಲ್ಲ, ಈ ಮಧ್ಯೆ ಬೇರೆ ಏನೋ ಕೆಲಸಕ್ಕೆ ಮಂಡ್ಯ ತಾಲೂಕು ಬಸರಾಳಿಗೆ ಬರುವವಳಿದ್ದ ಸುವರ್ಣ, ಅಲ್ಲಿಗೆ ಬರಲು ಹೇಳಿದ್ದಾಳೆ. ಆದರೆ


ಗೋವಿಂದರಾಜು

ಆಕೆಯ ಚಿಕ್ಕಮ್ಮ ಜೊತೆಗಿದ್ದುದರಿಂದ ಅಲ್ಲಿ ಮಾತುಕತೆ ಸಾಧ್ಯವಾಗಿಲ್ಲ, ಮಾರನೆಯ ದಿನ ಅಂದರೆ ನವೆಂಬರ್ 6ರಂದು ಆಬಲವಾಡಿಯಿಂದ 4 ಕಿ.ಮೀ. ದೂರದಲ್ಲಿರುವ ಅರಿಶಿನಕೆರೆ ಗೇಟ್‌ನಲ್ಲಿ ಇಬ್ಬರೂ ಭೇಟಿಯಾಗಲು ನಿಶ್ಚಯಿಸಿಕೊಂಡಿದ್ದಾರೆ. ಅಲ್ಲಿಗೆ ನಿಗದಿಪಡಿಸಿಕೊಂಡಿದ್ದಂತೆ ಮಧ್ಯಾಹ್ನ 12 ಗಂಟೆಯಿಂದ ಗೋವಿಂದರಾಜು ಕಾಯ್ದಿದ್ದಾನೆ. 12.30 ಹೊತ್ತಿಗೆ ಗೇಟ್‌ನಿಂದ ಸ್ವಲ್ಪ ದೂರದಲ್ಲಿ ನಿಂತಿದ್ದ ಹುಡುಗ, ಶಿವಪುರದ ಕಡೆಯಿಂದ ಸುವರ್ಣ ಬರುವುದನ್ನು ನೋಡಿದ್ದಾನೆ: ಆದರೆ ಆಕೆಯ ಹಿಂದೆ ತುಸು ಹೊತ್ತಿನಲ್ಲಿ ನಿಶ್ಚಿತಾರ್ಥವಾಗಿದ್ದ ಹುಡುಗ ರವಿ ಬೈಕ್‌ನಲ್ಲಿ ಬಂದು ಗಾಡಿ ನಿಲ್ಲಿಸಿದ್ದಾನೆ. ಆದರೆ ಆತನ ಜೊತೆ ಗಾಡಿ ಹತ್ತದ ಸುವರ್ಣ ಏನೋ ಹೇಳಿಕಳಿಸಿದ್ದಾಳೆ. ನಂತರ ಗೋವಿಂದರಾಜುವಿನ ಹತ್ತಿರ ಸುವರ್ಣ ಹೋದಾಗ 'ರವಿ ಯಾವಾಗ ಬಂದ?' ಅಂತ ಕೇಳಿದ್ದಾನೆ. 'ಬೆಳಿಗ್ಗೆ ಶಿವಪುರದ ಚಿಕ್ಕಮ್ಮನ ಮನೆಗೆ ಬಂದಿದ್ದ' ಎಂದು ಆಕೆ ಹೇಳಿದ್ದಾಳೆ. ಇನ್ನೊಂದು ವಾರದಲ್ಲಿ ಮನೆಯಿಂದ ಇಬ್ಬರೂ ಹೋಗಿಬಿಡೋಣ ಎಂದು ನಿಶ್ಚಯಿಸಿಕೊಂಡಿದ್ದಾರೆ. ಇಬ್ಬರೂ ಮಾತಾಡುತ್ತಿದ್ದುದನ್ನು ಗಮನಿಸಿದ ರವಿ ಸುವರ್ಣಳ ಮನೆಯವರಿಗೆ ಫೋನ್ ಮಾಡಿದ್ದಾನೆ. ಹತ್ತು ನಿಮಿಷದೊಳಗೆ ಅಲ್ಲಿಗೆ ನಾಲ್ಕಾರು ಬೈಕ್‌ಗಳಲ್ಲಿ ದವಲನ ಕುಟುಂಬದ ಎಲ್ಲಾ ಧಾಂಡಿಗರೂ ಬಂದು ಸೇರಿದ್ದಾರೆ. ಅವರಲ್ಲಿ ದವಲನ ಕುಟುಂಬದ ಅಣ್ಣ ತಮ್ಮಂದಿರ ಮಕ್ಕಳಾದ ತಿಮ್ಮೇಶ, ರವಿ, ಪ್ರವೀಣ ಯಾಮ ಇವರುಗಳು ಬಂದವರು ಇಬ್ಬರನ್ನೂ ಸರಿಯಾಗಿ ಬಡಿದು ಊರೊಳಕ್ಕೆ ಎತ್ತಿಕೊಂಡು ಬಂದಿದ್ದಾರೆ. ಅಲ್ಲಿ ಬಂದವರಿಗೆ ಗೋವಿಂದರಾಜುವಿನ ಅಣ್ಣ ತಿಮ್ಮಪ್ಪ ದಾರಿಯಲ್ಲಿ ಸಿಕ್ಕಿದ್ದಾರೆ. ಅಣ್ಣನ ವಶಕ್ಕೆ ಹುಡುಗನನ್ನು ಒಪ್ಪಿಸಿ, ನಂತರ 'ನೋಡಿಕೊಳ್ಳುವುದಾಗಿ' ಹೇಳಿ ಹುಡುಗಿಯನ್ನು ಎಳೆದುಕೊಂಡು ಹೋಗಿದ್ದಾರೆ.

ಅಮಾನವೀಯ ಕೃತ್ಯಕ್ಕೆ ಹೇಗೆ ಮನಸ್ಸು ಬಂತೋ?

ದವಲನ ರಾಮಕೃಷ್ಣ ಆ ಸಂದರ್ಭದಲ್ಲಿ ಊರಿನಲ್ಲಿ ಇರಲಿಲ್ಲ, ರಾಮಕೃಷ್ಣನ ತಂಡೆ (ಊರಿನ ನಿರ್ದಿಷ್ಟ ಕುಟುಂಬದಿಂದ ಕವಲೊಡೆದ ಹತ್ತಿರದ ಸಂಬಂಧಿಗಳ ಗುಂಪು) ಹೆಚ್ಚಿರುವುದರಿಂದ ಊರಿನ 12 ಜನ ಯಜಮಾನರಲ್ಲೂ ಆತನೂ ಒಬ್ಬ. ರಾಮಕೃಷ್ಣನ ಅನುಪಸ್ಥಿತಿಯಲ್ಲಿ ಇತರ ಯಜಮಾನರುಗಳನ್ನು ಸೇರಿಸುವ ಪ್ರಯತ್ನ ಮಾಡಲಾಗಿದೆ. ಯಜಮಾನರು ಬರುವ ಹೊತ್ತಿಗೆ ದವಲನ ರಾಮಣ್ಣನ ಮನೆಯಲ್ಲಿ ಹುಡುಗಿಗೆ ಸಿಕ್ಕಾಪಟ್ಟೆ ಹೊಡೆಯಲು ಶುರು ಮಾಡಿದ್ದಾರೆ.

ಈ ಹೊತ್ತಿಗೆ 'ಊರು ಬಿಟ್ಟು ಹೋಗು' ಎಂದು ಹೇಳಿ ಕಳಿಸಲಾಗಿದ್ದ ತಮ್ಮ ಮತ್ಯಾಕೆ ಬಂದ ಎಂದು ಸಿಟ್ಟಾಗಿದ್ದ ಗೋವಿಂದರಾಜುವಿನ ಮನೆಯವರು ಆತನನ್ನು ಬಯ್ಯುತ್ತಾ ಕೂತಿದ್ದರು. ಅಷ್ಟರಲ್ಲಿ ದವಲನ ಕುಟುಂಬದ ಹುಡುಗರು ಮತ್ತು ಊರಿನ ಇನ್ನೂ ಕೆಲವರು ಬಂದು ಗೋವಿಂದರಾಜುವನ್ನು ಬಡಿಯುತ್ತಾ ಎಳೆದುಕೊಂಡು ಹೋಗಿದ್ದಾರೆ. ಗೋವಿಂದರಾಜು ಅಲ್ಲಿಗೆ ತಲುಪುವ ಸಮಯಕ್ಕೆ ಹುಡುಗಿ ಒಳಗಿನಿಂದ ನೋವಿನಲ್ಲಿ ಜೋರಾಗಿ ಕಿರುಚುತ್ತಿದ್ದುದೂ, ಆಕೆಗೆ ಬಡಿಯುತ್ತಿದ್ದುದೂ ಕೇಳಿಸಿದೆ. ಹುಡುಗನಿಗೂ ಏಟುಗಳು ಬೀಳಲು ಶುರುವಾಗಿದೆ. ಗೋವಿಂದರಾಜುವಿನ ಶರೀರದ ಎಲ್ಲಾ ಭಾಗಗಳಿಗೂ ಭಾರೀ ಪೆಟ್ಟುಗಳು ಬಿದ್ದು ಇದು ಹೀಗೇ ಮುಂದುವರೆದರೆ ಆತ ಸತ್ತು ಹೋಗಿಬಿಡಬಹುದು ಅನ್ನುವ ಹೊತ್ತಿಗೆ ಅಲ್ಲಿಗೆ ಬಂದ ಊರಿನ ಕೆಲವರು ತಡೆದಿದ್ದಾರೆ. ಇವೆಲ್ಲಾ ನಡೆಯುವ ಸಂದರ್ಭಕ್ಕೇ ಅಲ್ಲಿಗೆ ಬಂದ ದವಲನ ರಾಮಕೃಷ್ಣ ಅಬ್ಬರಿಸಿದ್ದಾನೆ. ಅಷ್ಟು ಹೊತ್ತಿಗೆ ಯುವ ಪ್ರೇಮಿಗಳಿಬ್ಬರೂ ಮೇಲೇಳಲೂ ಶಕ್ತಿಯಿಲ್ಲದೇ ನರಳಾಡುತ್ತಿದ್ದರು. ಆದರೂ ಕರುಣೆಯಿಲ್ಲದೇ ಇವರಿಬ್ಬರನ್ನು ಕೊಲ್ಲಲೇಬೇಕು ಎಂದು ರಾಮಕೃಷ್ಣ ಪಟ್ಟುಹಿಡಿದಿದ್ದಾನೆ. ವಿವೇಕವಿದ್ದ ಕೆಲವರು ಸಣ್ಣ ದನಿಯಲ್ಲಿ ಬುದ್ಧಿ ಹೇಳಲು ಪ್ರಯತ್ನ ಮಾಡಿದರೂ, ರಾಮಕೃಷ್ಣನನ್ನು ಅವರ್‍ಯಾರೂ ತಡೆಯಲು ಸಾಧ್ಯವಾಗಿಲ್ಲ, 'ಅವಳನ್ನು ನೇಣು ಹಾಕಬೇಕು, ಇಲ್ಲವಾದರೆ ನಾನು ನೇಣು ಹಾಕಿಕೊಳ್ಳುತ್ತೇನೆ' ಎಂದಿದ್ದಾನೆ. ಇಷ್ಟರಲ್ಲಿ ಗೋವಿಂದರಾಜುವಿಗೆ ಏನಾದರೂ ಮಾಡಿದರೆ ಅಟ್ರಾಸಿಟಿ ಕೇಸಾಗುತ್ತದೆ ಎಂದು ಹೇಳಿ ಊರಿನ ಕೆಲವರು ಮುಖಂಡರು ಅವನನ್ನು ಬಿಟ್ಟುಬಿಡಲು ಒತ್ತಾಯಿಸಿದ್ದಾರೆ.

ಇಷ್ಟರಲ್ಲಿ ದವಲನ ಕುಟುಂಬದ ಪ್ರಮುಖರಿಗೆ ಒಂದು ಐಡಿಯಾ ಹೊಳೆದಿದೆ. ಗೋವಿಂದರಾಜುವಿಗೆ 'ನೀನು ನಿಮ್ಮ ಮನೆಗೆ ಹೋಗಿ ನೇಣು ಹಾಕಿಕೊಳ್ಳಬೇಕು, ನಾವು ಇವಳನ್ನು ಸಾಯಿಸಿ ಅಲ್ಲಿಗೆ ತರುತ್ತೇವೆ' ಎಂದು ಹೇಳಿ ಹೊಡೆದು ಕಳಿಸಿದ್ದಾರೆ. ಅಲ್ಲಿಂದ ಕುಂಟುತ್ತಾ, ಕಬ್ಬಿನ ಗದ್ದೆಗಳಲ್ಲಿ ನುಸುಳಿ ಗೋವಿಂದರಾಜು ತಪ್ಪಿಸಿಕೊಂಡಿದ್ದಾನೆ. ಅದಾದನಂತರ ನಡೆದದ್ದು ಬಹಳ ಘೋರವಾದುದು. ಅರೆಜೀವವಾಗಿದ್ದ ಸುವರ್ಣಳನ್ನು ಆಕೆಯ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳೇ ಎತ್ತಿಕೊಂಡು ಗೋವಿಂದರಾಜುವಿನ ಮನೆಗೆ ಹೋಗಿದ್ದಾರೆ. ಅಲ್ಲಿ ಭಯದಲ್ಲಿದ್ದ ತಿಮ್ಮಪ್ಪನ ಹೆಂಡತಿ, ನಾದಿನಿ, ತಾಯಿಯರ ಮೇಲೆ ಹಲ್ಲೆ ನಡೆಸಿ, ಅಲ್ಲೇ ಇದ್ದ ದನ ಕಟ್ಟುವ ಹಗ್ಗ ಕೈಗೆ ತೆಗೆದುಕೊಂಡಿದ್ದಾರೆ. ಮನೆಯ ತೊಲೆಗೆ ಹಗ್ಗ ಬಿಗಿದು, ಸುವರ್ಣಳ ತಂದೆ ಮತ್ತು ವರಸೆಯಲ್ಲಿ ಅಣ್ಣಂದಿರೇ ಆಗಬೇಕಾದವರು ಆಕೆಯನ್ನು ನೇಣು ಹಾಕಿದ್ದಾರೆ. ಸಣ್ಣಗೆ ಚೀರಿದ ಸುವರ್ಣಳ ಜೀವ ಕೊನೆಯುಸಿರೆಳೆದಿದೆ.

ಸಂಜೆ 4.30ರ ಹೊತ್ತಿನಲ್ಲಿ ಬೆಳಕಿನಲ್ಲೇ ಇದೆಲ್ಲಾ ನಡೆಯುವಾಗ ಸುಮಾರು 100ರಿಂದ 150 ಜನರು ಅಲ್ಲಿ ನಿಂತು ನೋಡಿದ್ದಾರೆ. ಎಲ್ಲರಿಗೂ ಘಟನೆಯ ಬಗ್ಗೆ ಸಹಮತವಿರದಿದ್ದರೂ, ಮುನ್ನುಗ್ಗಿ ಹೊಡೆಯುತ್ತಿದ್ದ ನೇಣು ಹಾಕಿದ 15-20 ಜನರನ್ನು ಯಾರೂ ತಡೆದಿಲ್ಲ. ದಲಿತ ಹುಡುಗನೊಬ್ಬನನ್ನು ಒಳಗಿನಿಂದ ಪ್ರೀತಿಸಿದ ಕಾರಣಕ್ಕೆ ದಿಟ್ಟೆಯಾಗಿದ್ದ ಸುವರ್ಣ ಎಲ್ಲರ ಕಣ್ಣೆದುರಿಗೇ ಸತ್ತು ಹೋಗಿದ್ದಾಳೆ.

ಎಸ್‌ಐ ಮುನಿಯಪ್ಪನಿಂದ ಡಿವೈಎಸ್ಪಿ ಉತ್ತಪ್ಪನವರೆಗೆ ಎಲ್ಲರೂ ಅಪರಾಧಿಗಳೇ

ಈ ಘಟನೆ ನಡೆಯುತ್ತಿರುವಾಗ ಪೊಲೀಸರೂ ಇದ್ದರು ಎಂದರೆ ಆಶ್ಚರ್ಯವಾಗಬಹುದು. ಆದರೆ ಅದನ್ನು ಹಾಗೆಂದೇ ಹೇಳಬೇಕು. ಘಟನೆ ನಡೆದ ಸ್ಥಳದಲ್ಲಿ ಪೊಲೀಸರು ಇರಲಿಲ್ಲ ಎಂಬುದೇನೋ ನಿಜ. ಆದರೆ ಗೋವಿಂದರಾಜುವನ್ನು ಮನೆಯಿಂದ ಹೊಡೆದುಕೊಂಡು ಹೋದ ತಕ್ಷಣ, ಆತನ ಗ್ರಾಮ ಪಂಚಾಯತಿ ಸದಸ್ಯ ತಿಮ್ಮಪ್ಪ ಅಲ್ಲಿಂದ ಕೇವಲ ...ದೂವರೆ ಕಿ.ಮೀ. ದೂರದಲ್ಲಿದ್ದ ಕೊಪ್ಪ ಪೊಲೀಸ್ ಠಾಣೆಗೆ ...ಕಲು ಹತ್ತಿ ಓಡಿದ್ದಾರೆ. ಅಲ್ಲಿ ಊರಿನಲ್ಲಿ ನಡೆಯುತ್ತಿರುವ ...ನ್ಯಮಾನವನ್ನು ಹೇಳಿ, ಕೂಡಲೇ ಹಳ್ಳಿಗೆ ಬಂದು ರಕ್ಷಣೆ ...ಡಬೇಕೆಂದು ಕೋರಿದ್ದಾರೆ. ನಾವು ಬರ್ತೀವಿ, ನೀನು ...ೋಗು ಎಂದು ಹೇಳಿದ ಪೊಲೀಸರು ಏನು ...ಾಡಿದರೆಂಬುದು ನಿಗೂಢವಾಗಿದೆ. ಏಕೆಂದರೆ, ಊರಿನ ...ಕ್ಕಲಿಗ ಸಮುದಾಯದವರು ಈ ವರದಿಗಾರನಿಗೆ ...ಳಿದ್ದೇನೆಂದರೆ 'ನೇಣು ಹಾಕಿದ ನಂತರ ಕೂಡಲೇ ಸುಟ್ಟು ...ಕಿ ಎಂದು ಹೇಳಿದವರು ಪೊಲೀಸರು!'.

...ಠಾಣೆಯಿಂದ ಊರಿನ ಕಡೆ ಹೋಗುತ್ತಿದ್ದ ತಿಮ್ಮಪ್ಪನಿಗೆ ...ೋನ್ ಬಂದಿದೆ. ನಿಮ್ಮ ಮನೆಯಲ್ಲೇ ಸುವರ್ಣಳನ್ನು ...ಣು ಹಾಕಿದ್ದಾರೆ ಎಂದು ಹೇಳಿದ್ದನ್ನು ಕೇಳಿ ...ಬರಿಯಾಗಿ ಆತ ಮತ್ತೆ ಕೊಪ್ಪದ ಪೊಲೀಸ್ ಠಾಣೆಗೆ ...ದ್ದಾರೆ. ಅಷ್ಟು ಹೊತ್ತಿಗಾಗಲೇ ಠಾಣೆಯಲ್ಲಿ ಸಬ್ ...ಸ್ಪೆಕ್ಟರ್ ಮುನಿಯಪ್ಪ ಇದ್ದರು! ಅವರಿಗೆ ತಿಮ್ಮಪ್ಪ ...ನೆಯ ವಿಚಾರವನ್ನೂ ಹೇಳಿ, ಘಟನೆ ಈ ರೀತಿ ತಿರುವು ...ದುಕೊಂಡಿರುವುದಕ್ಕೆ ಗಾಬರಿಯಾಗಿದ್ದಾರೆ. ಎಸ್‌ಐ ...ನಿಯಪ್ಪ ಆ ಕೂಡಲೇ ಮಾಡಿದ ಕೆಲಸವೇನೆಂದರೆ, ...ಮ್ಮಪ್ಪನ ಪುಸ್ತಕದಲ್ಲಿ ತನ್ನ ಫೋನ್ ನಂಬರ್ ...ದುಕೊಟ್ಟು, ತಿಮ್ಮಪ್ಪನ ಫೋನ್ ನಂಬರ್ ತಾನು ...ದುಕೊಂಡು 'ನೀನು ...ಲ್ಲಾದರೂ ತಲೆಮರೆಸಿಕೊಂಡು ...ರಟುಹೋಗು, ಅಗತ್ಯಬಿದ್ದರೆ ...ನೇ ಫೋನ್ ಮಾಡುತ್ತೇನೆ' ...ದು ಹೇಳಿಕಳಿಸಿದ್ದಾರೆ.


ಎಸ್‌ಪಿ ಕೌಶಲೇಂದ್ರ ಕುಮಾರ್


...ಪ್ರಭುತ್ವ ದೇಶದ ಪೊಲೀಸ್ ...ಠೆಯಲ್ಲಿ ಎಸ್‌ಐ ಈ ರೀತಿ ...ಳಿದರೆ ಬಡಪಾಯಿ ದಲಿತ ...ಮ್ಮಪ್ಪ ಏನು ಮಾಡಬೇಕು. ...ದು ಊರು ಬಿಟ್ಟ ತಿಮ್ಮಪ್ಪ ಮತ್ತೆ ...ಡ್ಯ ಜಿಲ್ಲೆಯ ಕಡೆ ತಲೆ ಹಾಕಿದ್ದು ...ಮು ತಿಂಗಳ ನಂತರ. ಇಡೀ ...ಟನೆಯ ಬಗ್ಗೆ ಮದ್ದೂರು ...ವೈಎಸ್ಪಿ ಉತ್ತಪ್ಪನವರಿಗೂ ಅಂದೇ ...ಹಿತಿ ಹೋಗಿದ್ದರೂ ಏನೂ ಪ್ರಯೋಜನವಾಗಿಲ್ಲ.

...ನೇಣಿನಿಂದ ಇಳಿಸಿ ಸುವರ್ಣಳನ್ನು ಸೀದಾ ಸ್ಮಶಾನಕ್ಕೆ ...ಮುಕೊಂಡು ಹೋಗಿ ಸುಟ್ಟು ಹಾಕಿದ್ದಾರೆ. ಅಲ್ಲಿ ಶವ ...ಯುತ್ತಿರುವಾಗ ಪೊಲೀಸ್ ಜೀಪ್ ಊರೊಳಕ್ಕೆ ...ೋಗಿದೆ. ಆದರೆ ಘಟನೆ ನಡೆದ ಜಾಗಗಳಿಗಾಗಲೀ, ಶವ ...ಯುತ್ತಿದ್ದ ಜಾಗಕ್ಕಾಗಲೀ ಹೋಗಿಲ್ಲ, ಊರಿನಲ್ಲಿ ಒಂದು ...ತ್ತ ಹಾಕಿ ವಾಪಸ್ ಹೋಗಿದೆ. ಅದೇ ರಾತ್ರಿ ಹಳ್ಳಿಗೆ ಒಂದು ...ಲ್ಲಾ ಸಶಸ್ತ್ರ (ಡಿಆರ್) ಪೊಲೀಸ್ ವ್ಯಾನ್ ಬಂದಿದೆ. ಅದು ...ತ್ತಿನಿಂದ 19ನೇ ತಾರೀಕಿನವರೆಗೆ ಊರೊಳಗೇ ಇದೆ. ...ರರ್ಥವೇನು? ಜಿಲ್ಲಾ ಸಶಸ್ತ್ರ ಪಡೆಯ ವ್ಯಾನ್‌ಅನ್ನು ...ೋಜಿಸುವ ಅಧಿಕಾರವುಳ್ಳ, ಅದು ನಿಯೋಜಿತವಾದರೆ ...ಹಿತಿ ರವಾನೆಯಾಗುವ ಎಲ್ಲಾ ಅಧಿಕಾರಿಗಳಿಗೂ ...ನಲ್ಲಿ ನಡೆದ ಘಟನೆಯ ಮಾಹಿತಿಯಿತ್ತು. ಆದರೆ ...ವರಿ 4ರಂದು ತಿಮ್ಮಪ್ಪ ಸಂಘಟನೆಯ ಮುಖಂಡರೊಡನೆ ...ಡ್ಯ ಎಸ್‌ಪಿಯನ್ನು ಭೇಟಿ ಮಾಡಿ, ಜನವರಿ 5ರಂದು ...ಪ್ಪ ಠಾಣೆಯಲ್ಲಿ ದೂರು ದಾಖಲಿಸುವವರೆಗೆ ಯಾವುದೇ ...ತದ್ದಮೆ ದಾಖಲಾಗಿಲ್ಲ.

...ಜನವರಿ 4ರಂದು ಮಂಡ್ಯ ಎಸ್‌ಪಿಯವರನ್ನು ...ಟನೆಯ ಮುಖಂಡರು ಮತ್ತು ತಿಮ್ಮಪ್ಪ ಲಿಖಿತ ...ರಿನೊಡನೆ ಹೋಗಿ ಮಾತಾಡಿಸಿದಾಗ, ಅವರು ಹೇಳಿದ ...ವಲ ಮಾತು 'ಅದು ಆತ್ಮಹತ್ಯೆ' ಎಂದು. ಐಪಿಎಸ್ ...ಮಾಡಿರುವ ಎಸ್‌ಪಿ ಕೌಶಲೇಂದ್ರ ಕುಮಾರ್ ಅವರಿಗೆ ...ಹತ್ಯೆ ಕೂಡಾ ಅಸ್ವಾಭಾವಿಕ ಸಾವು ಎಂಬುದೂ, ಅದೂ ... ತನಿಖೆಗೊಳಪಡಬೇಕೆಂಬುದೂ ಗೊತ್ತಿಲ್ಲವೇ? ...ದರೆ ಅಂತಹ ತನಿಖೆಯನ್ನು ಏಕೆ ಮಾಡಲಿಲ್ಲ? ಆ ...ನಲ್ಲಿ 13 ದಿನದವರೆಗೆ ಡಿಆರ್ ವ್ಯಾನ್ ಇರುವಷ್ಟು ಆ ...ನಲ್ಲಿ ನಡೆದದ್ದೇನು? ಅದಕ್ಕೆ ಕಾರಣರಾದವರ ಮೇಲೆ ...ಕೊಂಡ ಕ್ರಮವೇನು? ಇದಕ್ಕೆ ಉತ್ತರಿಸಬೇಕಾದ ...ಪೊಲೀಸ್ ಇಲಾಖೆ ಮೇಲಿಲ್ಲವೇ? ಅಥವಾ ಈ ...ಜ ಹಾಕಿರುವ ಸಾಂಪ್ರದಾಯಿಕ ಚೌಕಟ್ಟನ್ನು ಮೀರುವ ...ಮಗಳಿಗೆ ಬದುಕುವ ಹಕ್ಕಿಲ್ಲವೇ? ಅಂತಹ ಸಾವಿಗೆ ...ದ ಕಾನೂನು ಅನ್ವಯವಾಗುವುದಿಲ್ಲವೇ?

...ಈ ಎಲ್ಲಾ ಪ್ರಶ್ನೆಗಳನ್ನು ಎದುರಿಸುವ ಸಂದರ್ಭವೇ ...ಲೀಸರಿಗೆ ಬರಲಿಲ್ಲ, ಏಕೆಂದರೆ ಗೋವಿಂದರಾಜುವಿನ ...ಕುಟುಂಬ ಊರು ಬಿಟ್ಟು, ಊರೂರು ಸುತ್ತುತ್ತಿದ್ದರು. ಊರಿನಲ್ಲಿ ಮಿಕ್ಕವರಾರೂ ದನಿಯೆತ್ತಿ ಈ ವಿಚಾರವನ್ನು ಮಾತಾಡುವುದಾಗಲೀ ಅಥವಾ ಪೊಲೀಸರಲ್ಲಿ ದೂರು ನೀಡುವುದಾಗಲೀ ಮಾಡುವ ಸಾಧ್ಯತೆ ಇರಲಿಲ್ಲ, ದೂರು ಬರದೇ ನಾವು ಕ್ರಮ ಕೈಗೊಳ್ಳುವುದು ಹೇಗೆ ಎಂದು ಇಂದು ಪೊಲೀಸರು ಹೇಳುತ್ತಿದ್ದಾರೆ. ಅಂತಹ ಇಲಾಖೆ ಮತ್ತು ಅಸಹಾಯಕ ಅಬಲವಾಡಿಯ ಜನರು, ಇದರ ಮಧ್ಯೆ ಸುವರ್ಣಳಂತಹ ಎಳೆ ಹುಡುಗಿಯ ಆರ್ತನಾದಕ್ಕೆ ಏನು ಬೆಲೆಯಿರಲು ಸಾಧ್ಯ?


ದವಲನ ರಾಮಕೃಷ್ಣನ ಬೆನ್ನಿಗೆ ನಿಂತಿರುವ ದಳಪತಿಗಳು ಯಾರು?


ಚೆಲುವರಾಯಸ್ವಾಮಿ

ಇದ್ದುದರಲ್ಲಿ ದಕ್ಷರೂ, ಪ್ರಾಮಾಣಿಕರೂ ಎಂದು ಹೆಸರು ಇರುವ ಎಸ್‌ಪಿ ಕೌಶಲೇಂದ್ರ ಕುಮಾರ್‌ರ ನೇತೃತ್ವದ ಮಂಡ್ಯ ಜಿಲ್ಲಾ ಪೊಲೀಸ್ ತೀರಾ ಇಷ್ಟು ಎಕ್ಕುಟ್ಟಿಹೋಗಿದೆಯಾ ಅಥವಾ ಇದರ ಹಿಂದೆ ಇನ್ನೇನಾದರೂ ಇದೆಯಾ ಎಂದು ಹುಡುಕಲು ಅಷ್ಟೇನೂ ಕಷ್ಟವಿಲ್ಲ. ಮದ್ದೂರು ತಾಲೂಕಾದರೂ, ಕೊಪ್ಪ ಹೋಬಳಿ ಬರುವುದು ನಾಗಮಂಗಲ ವಿಧಾನಸಭಾ ಕ್ಷೇತ್ರಕ್ಕೆ. ಅಂದರೆ ಹಾಲಿ ಸಂಸದ ಚೆಲುವರಾಯಸ್ವಾಮಿಯವರ ಕ್ಷೇತ್ರ. ಇದೇ ಚೆಲುವರಾಯಸ್ವಾಮಿ ಸುವರ್ಣಳ ದೇಹ ಬೂದಿಯಾದ ಎರಡು ದಿನಕ್ಕೆ ಕೊಪ್ಪಕ್ಕೆ ಹೋಗಿ ಕೊಂದವರಿಗೆ ಅಭಯ ನೀಡಿ ಬಂದಿರುವುದನ್ನು ಅಬಲವಾಡಿಯ ಮತ್ತು ಕೊಪ್ಪದ ಜನರೆಲ್ಲರೂ ಬಲ್ಲರು. ಆ ಭಾಗದ ಪ್ರಭಾವಿ ಜೆಡಿಎಸ್ ನಾಯಕನಾದ ದವಲನ ರಾಮಕೃಷ್ಣನ ಬೆಂಬಲಕ್ಕೆ ನಿಲ್ಲಬೇಕೆನ್ನುವುದು ಅವರ ಸಹಜ ಲೆಕ್ಕಾಚಾರ. ಇಂದು (ಜನವರಿ 11) ಈ ವರದಿಗಾರ ಊರಿನ ಜನರನ್ನು ಮಾತಾಡಿಸಲು ಅಬಲವಾಡಿಗೆ ಹೋಗಿದ್ದಾಗ, ಕೊಪ್ಪದ ಕೆ.ಟಿ.ಶ್ರೀಕಂಠೇಗೌಡರ ಮನೆಯಲ್ಲಿ ಸಭೆ ಸೇರಿರುವ ವರ್ತಮಾನ ಬಂದಿತು. ಕೆಟಿಎಸ್ ಸಹಾ ಜೆಡಿಎಸ್‌ನ ಮಾಜಿ ಎಂಎಲ್‌ಸಿ. ಕಳೆದ ವರ್ಷ ಚಿಕ್ಕಳಲೆಯಲ್ಲಿ ಇವರ ಭಾಮೈದುನನ ನೇತೃತ್ವದಲ್ಲೇ ನಡೆದ ಕಾಂಗ್ರೆಸ್‌ನ ಕಾರ್ಯಕರ್ತರೊಬ್ಬರ ಕೊಲೆ ಇನ್ನೂ ಜನರ ಮನಸ್ಸಿನಿಂದ ಮಾಸಿಲ್ಲ.

ಇಂತಹ ಪ್ರಭಾವಿಗಳ ಸಹಾಯಕ್ಕೆ ಈ ಭಾಗದ ಕೆಲವು ದಲಿತ ಪುಢಾರಿಗಳೂ ಸೇರಿಬಿಟ್ಟರೆ ಅಲ್ಲಿಗೆ ಸತ್ಯಕ್ಕೆ ಸಮಾಧಿಯೂ ಅಗತ್ಯವಿಲ್ಲದೇ ಬೂದಿ ಆಗದೇ ಹೋಗುತ್ತದೆಯೇ? ಅದೇ ಇಲ್ಲಿಯೂ ಆಗಿದೆ. ಈ ಭಾಗದಲ್ಲಿನ ಕೆಲವು ದಲಿತ ಪುಢಾರಿಗಳನ್ನು ಮೊದಲೇ ಬುಕ್ ಮಾಡಿಕೊಂಡಿದ್ದ ದವಲನ ಕುಟುಂಬ, ಈಗ ಸುದ್ದಿ ರಾಜ್ಯಾದ್ಯಂತ ಹರಡುತ್ತಿದ್ದ ಹಾಗೆ, ಇನ್ನಷ್ಟು ದಲಿತರನ್ನೇ ಎತ್ತಿಕಟ್ಟಿ ಈ ವಿಷಯಕ್ಕೊಂದು ಗತಿ ಕಾಣಿಸಲು ಯೋಚಿಸುತ್ತಿದ್ದಾರೆ. ಅದೇ ಇಂದು ಕೆಟಿಎಸ್ ಮನೆಯಲ್ಲಿ ನಡೆದ ಸಭೆಯ ಸಾರಾಂಶವಾಗಿದೆ.

ಆದರೆ ಆ ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ಕೆಲವರ ಮನಸ್ಸು ಕಲಕಿದೆ. ಅವರಂತಹವರಿಗೆ ಇದು ದಲಿತರ ಪ್ರಶ್ನೆ ಅಲ್ಲ, ಇದು ದಿಟ್ಟ ಹೆಣ್ಣುಮಗಳೊಬ್ಬಳು, ಪಾಳೇಗಾರಿಕೆ ಸಮಾಜ ಹಾಕಿಕೊಟ್ಟ ಗೆರೆಯನ್ನು ದಾಟಲು ಹೋದದ್ದಕ್ಕೆ ಆದ ದುರಂತವೆಂಬಂತೆ ಕಂಡಿದೆ.


ಶ್ರೀಕಾಂತೇಗೌಡ

ಅವರೂ ಹೆಣ್ಣು ಮಕ್ಕಳನ್ನು ಹೊಂದಿರುವವರಾಗಿ ಹೇಗಾದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಬಯಸಿ, ಸಭೆಯ ನಂತರ ದುಃಖ ತೋಡಿಕೊಂಡರು.

ಮಂಡ್ಯ ಜಿಲ್ಲೆಯ ಪ್ರಗತಿಪರರಲ್ಲಿ ಹಲವರು, ಮಹಿಳಾ ಸಂಘಟನೆಗಳು, ದಲಿತ ಸಂಘಟನೆಗಳು ಸಭೆ ನಡೆಸಿ ಇಡೀ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಒತ್ತಾಯಿಸಿವೆ. ವಿವಿಧ ಸಂಘಟನೆಗಳು ಪತ್ರಿಕಾ ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಮುಖ್ಯ ಪಕ್ಷಗಳ ಯಾವೊಬ್ಬ ರಾಜಕಾರಣಿಯೂ ಇದುವರೆಗೆ ಮಾತಾಡಿಲ್ಲ, ಸಾಲುಸಾಲಾಗಿ ಫ್ಲೆಕ್ಸ್‌ಗಳಲ್ಲಿ ವಿಜೃಂಭಿಸುತ್ತಿರುವ ಈ ಮಾನಗೇಡಿಗಳಲ್ಲಿ ಯಾರನ್ನೂ ಈ ಸಾವು ಕಲಕಿಲ್ಲ; ಹೆಚ್ಚೆಂದರೆ ಘಟನೆ ನಡೆದೇ ಇಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂದು ಅಡ್ಡಗೋಡೆಯ ಮೇಲೆ ಮಾತಾಡಬಹುದು ಅಷ್ಟೇ. ಗೃಹ ಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಅಶೋಕ್ ತನಿಖೆಗೆ ಮುಂಚೆಯೇ ಅದನ್ನು ಆತ್ಮಹತ್ಯೆ ಎಂದು ಹೇಳಿ ತನ್ನ ಇಲಾಖೆ ಯಾವ ದಿಕ್ಕಿನಲ್ಲಿ ಕೆಲಸ ಮಾಡಬೇಕೆಂದು ಸೂಚಿಸಿದ್ದಾರೆ!

ಊರು ಬಿಟ್ಟರೂ ಬಿಡದ ಪಾಳೇಗಾರರಿಂದ ಬಚಾವಾಗಲು ದೂರು ಕೊಟ್ಟ ತಿಮ್ಮಪ್ಪ

ಊರು ಬಿಟ್ಟು, ತಾನು ಪಾಲಿಗೆ ಮಾಡಿದ್ದ ಭತ್ತದ ಬೆಳೆಯನ್ನೂ ಬಿಟ್ಟು ದೊಡ್ಡಬಳ್ಳಾಪುರದ ಹತ್ತಿರದ ಸಂಬಂಧಿಗಳ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ತಿಮ್ಮಪ್ಪನನ್ನು ಹುಡುಕುತ್ತ ಅಬಲವಾಡಿಯ ಕೊಲೆಗಡುಕರಲ್ಲಿ ಕೆಲವರು ಸುತ್ತಾಡಿದ್ದಾರೆ. ಅವರು ತಾನು ತಂಗಿದ್ದ ಊರಿಗೂ ಬಂದು ಹೋದ ವರ್ತಮಾನ ಕೇಳಿ, ಈ ರೀತಿ ತನ್ನದೇ ಊರಿನಿಂದ ಅಲೆದಾಡಿಕೊಂಡು ಇರಬಾರದು ಅನ್ನಿಸಿ, ತಿಮ್ಮಪ್ಪ ತನಗೆ ಪರಿಚಯವಿದ್ದ ಬಿಎಸ್‌ಪಿ ಮುಖಂಡರೊಬ್ಬರ ಹತ್ತಿರ ಕಷ್ಟ ಹೇಳಿಕೊಂಡಿದ್ದಾರೆ. ಅವರು ಮಂಡ್ಯದ ಬಿಎಸ್‌ಪಿ ಮುಖಂಡ ಕೃಷ್ಣಮೂರ್ತಿಯವರ ಹತ್ತಿರ ಕಳಿಸಿದ್ದರಿಂದ ಇಡೀ ಪ್ರಕರಣ ಬೆಳಕಿಗೆ ಬಂದಿದೆ.

ಮೇಲೆ ಹೇಳಿರುವಂತೆ ತನ್ನ ಮೊದಲ ಪ್ರತಿಕ್ರಿಯೆ ನೀಡಿದ ಎಸ್‌ಪಿ ನಂತರ ದೂರು ಕೊಡಿ ಎಂದು ಹೇಳಿದ್ದಾರೆ. ದೂರು ದಾಖಲಾಗಲು ಎಸ್‌ಪಿಯವರ ಸಹಾಯ ಇತ್ತಾದರೂ, ಡಿವೈಎಸ್‌ಪಿ ಉತ್ತಪ್ಪ ಅಷ್ಟು ಸಲೀಸಾಗಿ ದೂರು ದಾಖಲಾಗಲು ಬಿಟ್ಟಿಲ್ಲ. ಇಂತಹ ಗಂಭೀರ ಪ್ರಕರಣ ನಡೆದಿದ್ದರೂ, ಅಬಲವಾಡಿಯ ಹಲವರು ಮುಖಂಡರನ್ನು ಠಾಣೆಗೆ ಕರೆಸಿ ತಿಮ್ಮಪ್ಪರನ್ನು ಹೆದರಿಸುವ, ಒತ್ತಡ ತರುವ ಪ್ರಯತ್ನ ಮಾಡಿದ್ದಾರೆ. ಉತ್ತಪ್ಪರ ಎದುರಿಗೇ ಕೋಟಿ ರಾಮಲಿಂಗಯ್ಯ ಎಂಬ ಊರಿನ ಕಂಟ್ರಾಕ್ಟರ್ 'ಅವನ ಮಗಳನ್ನು ಅವನೇ ನೇಣು ಹಾಕಿದ. ನಿನಗೇನಪ್ಪ ತೊಂದರೆ? ನಿಮಗೆ ಊರಿನಲ್ಲಿ ರಕ್ಷಣೆ ಬೇಕು, ಅಷ್ಟೇ ಅಲ್ಲವೇನಪ್ಪಾ? ಆ ಜವಾಬ್ದಾರಿ ನನಗಿರಲಿ' ಎಂದು ಹೇಳಿದ್ದಾನೆ. ತನ್ನ ಮಗಳನ್ನು ತಾನೇ ನೇಣು ಹಾಕಿದ ಎಂದು ಡಿವೈಎಸ್ಪಿ ಎದುರಿಗೇ ಮಾತಾಡುತ್ತಾರೆಂದರೆ, ಹಾಗಾದರೆ ಉತ್ತಪ್ಪರಿಗೂ ಅವರಿಗೂ ಇರುವ ಸಂಬಂಧ ಎಂಥದ್ದು?

ನಡೆಯಬಾರದಿದ್ದ ಘಟನೆಯ ಹಿಂದೆ ಮತ್ತು ಮುಂದೆ

ಈ ಎಲ್ಲಾ ಪ್ರಶ್ನೆಗಳಿಗೆ ಕೇವಲ ಮಂಡ್ಯ ಪೊಲೀಸರು ಮಾತ್ರ ಉತ್ತರ ಕೊಡಬೇಕೆಂದು ನಿರೀಕ್ಷಿಸುವ ಹಾಗಿಲ್ಲ, ಏಕೆಂದರೆ ಎಲ್ಲದರ ಆಚೆ ಇದು ಈ ನಾಡಿನ ಎಲ್ಲಾ ಮಾನವೀಯ ಮನಸ್ಸುಳ್ಳವರ ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ. ಇಂದು ಈ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ದಲಿತರು ಇಂಥದೇ ಪರಿಸ್ಥಿತಿಯಲ್ಲೇನೂ ಬದುಕುತ್ತಿಲ್ಲ, ದಲಿತ ಚಳವಳಿ ತಂದುಕೊಟ್ಟ ಸ್ವಾಭಿಮಾನವು ತಮ್ಮಷ್ಟಕ್ಕೆ ತಾವು ಬದುಕುವಷ್ಟು ಪರಿಸ್ಥಿತಿಯನ್ನು ತಂದಿದೆ. ಆದರೆ ಅಲ್ಲಲ್ಲಿ ಅಬಲವಾಡಿಗಳು ಇದ್ದೇ ಇವೆ. ಅದರ ಜೊತೆಗೆ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ, ಬಹಿಷ್ಕಾರಗಳು, ದೌರ್ಜನ್ಯಗಳು ಹೆಚ್ಚಾಗುತ್ತಲೇ ಇವೆ. ಮಂಡ್ಯ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಂತಹ ಕನಿಷ್ಠ 10 ದೊಡ್ಡ ಪ್ರಕರಣಗಳು ನಡೆದಿವೆ. ಇದೇಕೆ? ಇದಕ್ಕೂ ಬಿಜೆಪಿ ಪ್ರತಿಪಾದಿಸುತ್ತಿರುವ ರಾಜಕಾರಣಕ್ಕೂ ಸಂಬಂಧವಿಲ್ಲವೇ?

ಅದಕ್ಕಿಂತ ಮುಖ್ಯವಾಗಿ ಸುವರ್ಣಳಂತಹ ಹೆಣ್ಣುಮಗಳ ಸ್ವಾತಂತ್ರ್ಯದ ಚೌಕಟ್ಟು ಇಷ್ಟೊಂದು ಸೀಮಿತವೇ? ಈಕೆಯ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗದೇ, ಈ ವ್ಯವಸ್ಥೆಯು ಇದಕ್ಕೊಂದು ತೇಪೆ ಹಚ್ಚುವುದಕ್ಕೆ ಸಮಾಧಾನಪಟ್ಟುಕೊಂಡರೆ ಅದು ನೀಡುವ ಸಂದೇಶ ಎಂತಹದ್ದು ಎಂಬುದನ್ನು ನಾವು ಕೇಳಿಕೊಳ್ಳಬೇಕಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ನಾವುಗಳೆಲ್ಲಾ ಎಚ್ಚರಿಕೆಯಿಂದ ಚಿಂತಿಸಬೇಕಾದ ಮತ್ತೊಂದು ಮಹತ್ವದ ಸಂಗತಿಯೂ ಇದೆ. ಬಹುತೇಕ ಸಣ್ಣ, ಅತೀ ಸಣ್ಣ ಹಿಡುವಳಿ ಹೊಂದಿರುವ ಒಕ್ಕಲಿಗ ಸಮುದಾಯದ ರೈತಾಪಿಯೂ ಕಷ್ಟದಲ್ಲೇ ಜೀವನ ನಡೆಸುತ್ತಿದೆ. ಕಬ್ಬಿಗೆ ರೇಟು ಸಿಕ್ಕರೆ ಕೂಲಿ ಗಿಟ್ಟುತ್ತದೆ, ಇಲ್ಲದಿದ್ದರೆ ಬೆಳೆದುಕೊಂಡ ಭತ್ತ ಮನೆಯಲ್ಲಿ ಉಣ್ಣಲಷ್ಟೇ ಸಾಕಾಗುತ್ತದೆ ಎಂಬ ಸ್ಥಿತಿ ಅವರದ್ದು. ಇಂತಹ ಕಡೆ ಅಷ್ಟೇ ಸಣ್ಣ ಹಿಡುವಳಿ ಹೊಂದಿರುವ ಅಥವಾ ಭೂಮಿಯೇ ಇರದ ದಲಿತ ಸಮುದಾಯದ ಜೊತೆ ಒಂದಾಗುವ ಸಮಾನ ತಳಹದಿಯ ಹುಡುಕಾಟ ನಡೆಯಬೇಕಿದೆ. ಇಂತಹ ಘಟನೆಗಳು ಈ ತಳಹದಿಯನ್ನು ದುರ್ಬಲಗೊಳಿಸಲು ಬಿಡಬಾರದು. ಎಲ್ಲರ ಪ್ರತಿನಿಧಿಯಾಗಬೇಕಾದ ಚೆಲುವರಾಯಸ್ವಾಮಿ, ಶ್ರೀಕಂಠೇಗೌಡರು ಸ್ಪಷ್ಟವಾದ ಸ್ವಾರ್ಥ ರಾಜಕಾರಣ ಮಾಡುತ್ತಾರೆ. ಊರಿಗೆ ಭೇಟಿ ಕೊಟ್ಟಿದ್ದ ಕೇಂದ್ರ ಎಸ್‌ಸಿ, ಎಸ್‌ಟಿ ಆಯೋಗದ ಸದಸ್ಯ ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಊರಿನ ಒಕ್ಕಲಿಗರ ಜೊತೆ ಮಾತಾಡದೇ ಹಾಗೇ ಮರಳುತ್ತಾರೆ. ಇವು ಜನರ ಮನಸ್ಸುಗಳನ್ನು ವಿಭಜಿಸುತ್ತವೆ. ದ್ವೀಪಗಳನ್ನಾಗಿಸುತ್ತವೆ. ಎಲ್ಲರನ್ನೂ ಬೆಸೆಯಬೇಕಾದ ಕೆಲಸ ಆಗುವುದರ ಜೊತೆಗೆ, ಈ ನಾಡಿನ ಹೆಣ್ಣುಮಕ್ಕಳು ದಿಟ್ಟತನದಿಂದ ಬದುಕಲು ಬೇಕಾದ ಕಾರ್ಯಕ್ರಮ ಇವತ್ತು ಎಲ್ಲಾ ಪ್ರಜ್ಞಾವಂತರ ಪ್ರಣಾಳಿಕೆ ಆಗಲಿ. ಸುವರ್ಣಳ ಬೂದಿಯು ನಮ್ಮೆದುರಿಗಿಟ್ಟಿರುವ ಕರ್ತವ್ಯ ಇದು. ❖

ಸಂಕ್ರಾಂತಿ ನಂತರ ನಾನು ಹೊಸಾ ಮನುಷ್ಯ

ಥತ್ತೇರಿ ▸ಯಾಹೂ

ಸಂಕ್ರಾಂತಿ ನಂತರ ಸಂಪೂರ್ಣ ಬದಲಾಗುತ್ತೇನೆಂದು ಹೆದರಿಸಿರುವ ಎದಿಯೂರಪ್ಪನವರು ಯಾವ ರೂಪದಲ್ಲಿ ಬದಲಾಗುತ್ತಾರೆಂಬುದನ್ನು ತಿಳಿದು, ನಮ್ಮ ಓದುಗರಿಗೆ ತಿಳಿಸಬೇಕಾದ್ದು ನಮ್ಮ ಜವಾಬ್ದಾರಿಯಲ್ಲವೆ?" ಆದಕ್ಕಾಗಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಇದು ಯಾರು ಬರೆದ ಕತೆಯೋ, ನನಗಾಗಿ ಬಂದ ವ್ಯಥೆಯೋ, ಕೊನೆ ಹೇಗೊ ಅರಿಯಲಾರೆ, ಮರೆಯಾಗಿ ಹೋಗಲಾರೆ, ಇದು......"

"ಹಲೋ ಯಾರು?"

"ನಾನು ಸಾರ್ ಯಾಹು, ಹೊಸ ವರ್ಷದ ಶುಭಾಶಯಗಳು ಸಾರ್."

"ನಿಮಗೂ ಹೊಸ ವರ್ಷದ ಸುಭಾಶಯಗಳು ಯಾಹು ಅವ್ರುರೆ. ಏನ್ ಸಮಾಚಾರ?"

"ಎಲ್ಲಿದ್ದಿರಿ ಸಾರ್?"

"ಮನೆಲೆ ಇದ್ದಿನಿ."

"ಯಾರ ಮನೆಲಿ ಸಾರ್?"

"ಶಿವಮೊಗ್ಗದಲ್ಲಿ ನನ್ನ ಸ್ವಂತ ಮನೆಲಿ ಇದ್ದಿನಿ ಕಂದ್ರಿ."

"ಒಂದು ಬಹುಮುಖ್ಯವಾದ ವಿಷಯ ಕೇಳಬೇಕು, ಕೇಳಲಾ ಸಾರ್?"

"ಕೇಳಿ ಪರವಾಗಿಲ್ಲ."

"ಸಂಕ್ರಾಂತಿ ನಂತರ ಸಂಪೂರ್ಣ ಬದಲಾಗ್ತಿನಿ ಅಂತ ಹೇಳಿದ್ದೀರಲ್ಲಾ, ಯಾವ ತರದ ಬದಲಾವಣೆ ಸಾರ್?"

"ಸಂಕ್ರಾಂತಿ ನಂತರ ನೋಡಿ."

"ಒಂದೂ ಚೂರು ಕ್ಲೂ ಕೊಡಕ್ಕಾಗಲ್ಲವ ಸಾರ್?"

"ಸಂಕ್ರಾಂತಿ ನಂತರ ಹೆಚ್ಚು ಮಾತಾಡಲ್ಲ."

"ಬಾಂಬೆ ವೈದ್ಯರು ಹೇಳಿದ್ದಾರ ಸಾರ್?"

"ವಿನಾಕಾರಣ ಯಾಕೆ ಮಾತನಾಡಬೇಕು ಅಂತ ನಾನೇ ತೀರ್ಮಾನ ತಗೊಂಡಿದ್ದಿನಿ."

"ಬಹಳ ಒಳ್ಳೆ ತೀರ್ಮಾನ ಸಾರ್. ಆರೋಗ್ಯಕರವಾದ ತೀರ್ಮಾನ. ಅದರಲ್ಲೂ ಸಮಾಜದ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಬಹುಮುಖ್ಯ ತೀರ್ಮಾನ ಇದು."

"ಹಾಗಂತಿರಾ?"

"ಹೌದು ಸಾರ್. ಆಡಿದ ಮಾತೆಲ್ಲ ಅಸಂಬದ್ಧವಾಗುವಾಗ ಮತ್ತೆ ಆಡಿದ ಮೂರು ಮಾತಲ್ಲಿ ಎರಡು ಸುಳ್ಳು ಈಚೆಗೆ ಬರುವಾಗ, ನಿಮ್ಮ ತರ ತೀರ್ಮಾನ ತಗೋಳೋದು ಬಹಳ ಒಳ್ಳೆ ಕೆಲಸ."



"ನಾನು ತಗೊಂಡಿರೊ ತೀರ್ಮಾನ ನೀವು ಹೇಳೊ ಕಾರಣಕ್ಕಾಗಿ ಅಲ್ಲ ಕಂದ್ರಿ. ನನ್ನ ಪರವಾಗಿ ಆ ರೇಣುಕಾಚಾರಿ, ಬೇಳೂರು ಗೋಪಾಲಕೃಷ್ಣ ಸುರೇಶ್ ಗೌಡ, ಈ ತರದೊರು ಮಾತನಾಡ್ತರೆ, ಸೂಕ್ತ ಸಂದರ್ಭ ಬಂದಾಗ ಡಿ.ಬಿ. ಚಂದ್ರೇಗೌಡ್ರೂ ಮಾತಾಡ್ತರೆ."

"ಆ ಚಂದ್ರೇಗೌಡ್ರಿಗೇನು ಬಂತು ಸಾರ್ ಅಂಗಾಗ್ಯವುರಲ್ಲ?"

"ಪಾಪ ವಯಸ್ಸಾಯ್ತು, ಇನ್ನೇನು ಮಾಡ್ತರೆ."

"ನಾನೇಳಿದ್ದು ಆವರ ವಯಸ್ಸಿನ ವಿಷಯ ಅಲ್ಲ ಸಾರ್. ಹೋಗ್ಲಿ ಬಿಡಿ, ನೀವು ಮತ್ತೆ ಕರ್ನಾಟಕ ತಿರುಗಿ ಪಾರ್ಟಿ ಕಟ್ತಿನಿ ಅಂತಿರಲ್ಲಾ, ಆಗ ಮಾತಾಡಬೇಕಲ್ಲವಾ ಸಾರ್?"

"ಆಗ ಎಷ್ಟು ಬೇಕೊ ಅಷ್ಟು ಮಾತಾಡ್ತಿನಿ."

"ನೀವು ಪುನಃ ಯಾಕ್ ಸಾರ್ ಪಾರ್ಟಿ ಕಟ್ತಿರಿ? ಅದರಿಂದ ಏನು ಪ್ರಯೋಜನ?"

"ಕರ್ನಾಟಕ ಅಭಿವೃದ್ಧಿಯಾಗಬೇಕು, ಜನಗಳು ಸುಖ ಸಂತೋಷ ನೆಮ್ಮದಿಯಿಂದ ಇರಬೇಕು."

"ನೀವು ಅಧಿಕಾರದಿಂದ ಇಳಿದ ಕೂಡ್ಲೆ ಅಂತದ್ದೊಂದು ಸ್ಥಿತಿ ಕಡೆ ಕರ್ನಾಟಕ ಹೊರಟದೆಯಂತಲ್ಲಾ ಸಾರ್?"

"ನನ್ನ ವಿರೋಧಿಗಳ ಮಾತಿಗೆ ಕಿವಿಗೊಡಬೇಡಿ."

"ನಿಮ್ಮ ವಿರೋಧಿಗಳ್ಯಾರು ಸಾರ್?"

"ಅದ್ನ ಬಾಯಿಬಿಟ್ಟು ಹೇಳಬೇಕಾ?"

"ಸಾರಿ ಸಾರ್. ಆತ ನಿಮ್ಮನ್ನಷ್ಟೇ ಅಲ್ಲ ನಿಮ್ಮ ಮಗನನ್ನೂ ದ್ವೇಷ ಮಾಡ್ತನೆ ಸಾರ್. ನಿಮ್ಮ ಮಗ ಎಂ.ಪಿ. ಚುನಾವಣೆಗೆ ನಿಂತಾಗ ಸೋಲಿಸೋದಕ್ಕೆ ಟ್ರೈ ಮಾಡಿದ್ದ."

"ಅವನು ಈ ಸರ್ತಿ ಗೆದ್ದು ಬರ್ಲಿ ನೋಡ್ತಿನಿ."

"ಸೋಲುಸ್ತಿರ ಸಾರ್?"

"ಸೋಲಿಸದಲ್ಲ, ನಾನು ಪಾರ್ಟಿ ಪ್ರಸಿಡೆಂಟಾಗಿ ಟಿಕೆಟ್‌ನೆ ಕೊಡಲ್ಲ, ಕೊಟ್ರು ಬಂಡಾಯದ ಬಿಜೆಪಿ ಅಭ್ಯರ್ಥಿ ಸೃಷ್ಟಿ ಮಾಡಿ ಸೋಲುಸ್ತಿವಿ, ಮನೆಗೆ ಕಳುಸ್ತಿವಿ."

"ಬಹಳ ಒಳ್ಳೆ ಕೆಲಸ ಸಾರ್. ಸಮಾಜದ ಒಳಿತಿಗಾಗಿ ಮಾಡೋ ಕೆಲಸದಲ್ಲಿ ಇದು ಬಹಳ ಮುಖ್ಯವಾದದ್ದು."

"ನಿಜ ಕಂದ್ರಿ. ಇವ್ನನ್ನು ಇಲ್ಲಿವರಿಗೂ ಬಿಟ್ಟಿದ್ದೇ ಅಲ್ಲ, ಕೆಲಸಕ್ಕೆ ಬಾರದ ಕಾತೆ ಕೊಟ್ಟು ಬಲಿಹಾಕಬೇಕಾಗಿತ್ತು. ಏನು ಮಾಡ್ತಿರಿ. ಹೈಕಮಾಂಡ್ ಹಿಡಿಕೊಂಡು ಬಚಾವಾದ."

"ಮಹಾ ಬುದ್ಧಿವಂತ ಸಾರ್ ಅವ್ನು. ನಿಮ್ಮನ್ನ ಮನೆ ಯಜಮಾನ ಅಂತನೆ. ತಂದೆ ಸಮಾನ ಅಂತನೆ. ಕಾಲಿಗೂ ಬೀಳ್ತನೆ. ಪಾಪ ನೀವು ಆದನ್ನೆಲ್ಲಾ ನಂಬಿದ್ರಿ ಅಲ್ಲವಾ?"

"ನಾನ್ಯಾವತ್ತು ನಂಬಿಲ್ಲ ಕಂದ್ರೀ. ಆದ್ರೆ ಆ ಸದಾನಂದ ಗೌಡನ್ನ ನಂಬಿದ್ದೆ. ಅವ್ನು ಹಿಂಗೆ ಮಾಡ್ತನೆ ಅಂತ ಗೊತ್ತಿರಲಿಲ್ಲ. ಈ ದಕ್ಷಿಣ ಕನ್ನಡದ ಜನ ನಂಬಬಾರದು ಅಂತ ಯಲ್ಲಾರು ಹೇಳತಿದ್ರು. ಆದ್ರೆ ನಾನು ಶೋಭನ್ನ ನೋಡಿ ಪಾಪ ಎಷ್ಟು ಒಳ್ಳೆ ಹುಡುಗಿ ಅಂತ ತಿಳಕೊಂಡು ದಕ್ಷಿಣ ಕನ್ನಡದ ಎಲ್ರೂ ಇದೇ ತರ ಅಂತ ತಿಳಕೊಂಡಿದ್ದೆ. ಆಗ ನನ್ನ ಜೊತೆ ಇದ್ದೋನು ಈಗ ಈಶ್ವರಪ್ಪನ ಜೊತೆ ಸೇರಿಕೊಂಡ."

"ದ್ರೋಹಿ ಸಾರ್ ಅವ್ನು. ನೀವು ಬಂದ ಕೂಡ್ಲೆ ಎದ್ದು ಕುರ್ಚಿ ಬಿಟ್ಟುಕೊಡಬಾರ್ದ? ದಕ್ಷಿಣ ಕನ್ನಡದವರು ಎಂದೂ ಆತ್ಮೀಯ ಗೆಳೆಯರಾಗಲ್ಲ ಅಂತ ನಮಗೆ ಲಂಕೇಶ್ ಹೇಳಿದ್ರು ಸಾರ್. ನೀವು ಹೋಗೊ ಮೊದ್ಲು ನಮ್ಮನ್ನಾದ್ರು ಕೇಳಬೇಕಾಗಿತ್ತು. ಅದೇ ಜಗದೀಶ್ ಶೆಟ್ಟರ್ ಮಾಡಿ ಹೋಗಿದ್ರೆ, ಎಣ್ಣೆಗಾಣಸ ವಾರಸುದಾರನಿಗೆ ವಯಿಸಿದಂಗೆ ಮರುಮಾತನಾಡದೆ ಬಿಟ್ಟು ಕೊಡತಿದ್ದ. ಪಾಪ ಅವ್ನನ್ನ ನೋಡಿದ್ರೆ ದರವೇಶಿ ನೋಡಿದಂಗಾಯ್ತದೆ. ನೀವು ಕೊಟ್ಟ ಯಾವ ಕಾತೆಗೂ ಜೀವ ಕೊಡಲ್ಲ, ಶೋಭ ಕರಂದ್ಲಾಜೆ ಕಾತೆನೂ ಹಾಳು ಮಾಡಿದ. ಅವ್ನನ್ನಾದ್ರು ನೀವು ಕುರ್ಚಿ ನೋಡಿಕಳಕ್ಕೆ ಬಿಟ್ಟು ಹೋಗಬವ್ರುದಿತ್ತು ಸಾರ್."

"ತಪ್ಪು ಮಾಡಿದೆ ಕಂದ್ರಿ."

"ತಪ್ಪಿನ ಅರಿವು ಮೂಡಿಸಿಗಳದೂ ಕೂಡ ಹೊಸ ಮನುಷ್ಯ ಆಗೋದರ ಮೊದಲ ಹೆಜ್ಜೆ ಸಾರ್. ಸಂಕ್ರಾಂತಿ ನಂತರ ಆತ್ಮಾವಲೋಕನಾ ನಡಿಲಿ."

"ನೀವು ಹೇಳೋದು ನಿಜ."

"ಆಮೇಲೆ ನಿಮ್ಮ ಪಕ್ಕ ಶೋಭಾ ಕರಂದ್ಲಾಜೆ ಇದ್ರೆ ಸರಿ ಸಾರ್. ಒಂಥರಾ ದಶರಥಾ ಕೈಕೆ ತರ ಕಾಣ್ತೆರಿ. ಯಾರು ಸಾರ್ ಆ ಭಾರತಿಶೆಟ್ಟಿ. ಆಯಮ್ಮನ ಜೊತೆ ಕುಂತಕೊಬೇಡಿ. ಅವ್ಳೊಂಥರ ಮಂಥರೆ ತರ ಕಾಣ್ತಳೆ."

"ಆಯ್ತು ಇನ್ನಮೇಲೆ ಆಕೆ ಜೊತೆ ಕಾಣಿಸಿಕೊಳಲ್ಲ."

"ಆಮೇಲೆ ಹೊಸ ಮನುಷ್ಯ ಆಗಬೇಕಾದ್ರೆ ಅಷ್ಟು ಸುಲಭ ಅಲ್ಲ ಸಾರ್. ಕೆಟ್ಟ ಮನುಷ್ಯ ಆಗಿದ್ದಾಗ ಗಳಿಸಿದ್ದ ದಕ್ಕಿಸಿಕೋಬೇಕು. ಕೆಟ್ಟ ಜನಗಳ ಸಹವಾಸ ಬಿಡಬೇಕು. ಅಕ್ರಮ ಆಸ್ತಿ ಬಿಡಬೇಕು. ಅಕ್ರಮ ಸಮಂಧ ಬಿಡಬೇಕು. ಇದನ್ನಲ್ಲ ಅದ್ಯಂಗೆ ಬಿಡ್ತಿರೀ?"

"ರಿ, ನೀವು ಹೇಳೊ ತರ ನಾನು ಮಾಡಿದಾದ್ರೆ ಯಾವುದಾದ್ರು ಮಠ ಮಾಡಿಕೊಂಡು ಸ್ವಾಮಿಯಾಗಬೇಕಾಯ್ತದೆ."

"ಸಾರಿ ಸಾರ್. ಸುತ್ತೂರು, ಚುಂಚನಗಿರಿ, ಸಿರಿಗೆರೆ, ಬಾಳೆಹೊನ್ನೂರು ಸ್ವಾಮಿಗಳು ನೋಡಿದ್ರೆ ಈಗಿರೊ ನೀವೇ ವಾಸಿ. ದಯವಿಟ್ಟು ಸ್ವಾಮಿ ಆಯ್ತಿನಿ ಅನ್ನಬೇಡಿ."

"ಮತ್ತೆ ಇನ್ನಾವತರ ಹೊಸ ಮನುಷ್ಯ ಆಗಬೇಕು ಹೇಳ್ರಿ."

"ಹ್ಯಾಗಿದ್ರೂ ಸದಾನಂದ ಗೌಡ ನೀವು ಹೇಳಿದಂಗೆ ಕೇಳ್ತನೆ ಸಾರ್. ಅವ್ನನ್ನಿಡಕಂಡು, ನಿಮ್ಮ ಕಾಲದಲ್ಲಿ ಮಾಡಿರೊ ತಪ್ಪುಗಳನೆಲ್ಲಾ ಸರಿ ಮಾಡ್ರಿ. ಆಗ ಬಂಗಾರಪ್ಪ ಮಾಡಿದ್ದ ತಪ್ಪನೆಲ್ಲಾ ಮೊಯ್ಲಿ ಸರಿ ಮಾಡಿದ್ರು. ಅಂಗಾರ ಮಾಡ್ರಿ ಸಾರ್."

"ಅದು ಈ ಜನುಮದಲ್ಲಿ ಸಾಧ್ಯ ಇಲ್ಲ."


"ಥೂತ್ತೇರಿ!!!"

ಅಷ್ಟಮಠಗಳಿಂದ ಹನುಮಂತನಿಗೆ ಅವಮಾನ!

ಪರ್ಯಾಯ ಮಠಗಳು ಮತ್ತೊಂದು ವಿವಾದವನ್ನು ಹುಟ್ಟುಹಾಕಿವೆ. ಪದೇಪದೇ ಮಠಾಧೀಶರ ಇಂಥಾ ಅವಾಂತರಗಳನ್ನು ನೋಡಿದರೆ ಭಕ್ತಾದಿಗಳು ನೆಮ್ಮದಿಯಿಂದ ಪೂಜೆ ಸಲ್ಲಿಸುವುದು ಈ ಮಠಾಧೀಶರಿಗೆ ಸುತರಾಂ ಇಷ್ಟವಿಲ್ಲವೆಂದು ಕಾಣುತ್ತೆ. ಆದ್ದರಿಂದ ಒಂದಿಲ್ಲೊಂದು ನೆಪದಲ್ಲಿ ಕ್ಯಾತೆ ತೆಗೆದು ಕೂರುತ್ತಿದ್ದಾರೆ. ಈ ಬಾರಿಯ ವಿವಾದ ಅಷ್ಟ ಮಠಗಳ ಇತಿಹಾಸದಲ್ಲೇ ವಿನೂತನವಾದದ್ದು. ಆದ್ದರಿಂದ ಅದು ಸುಲಭವಾಗಿ ಬಗೆಹರಿಯುವ ಲಕ್ಷಣಗಳು ಕಾಣುತ್ತಿಲ್ಲ.

ಉಡುಪಿಯ ಅಷ್ಟ ಮಠಗಳಿಗೆ ಕೇಂದ್ರಸ್ಥಾನದಂತೆ ಶ್ರೀಕೃಷ್ಣದೇವಸ್ಥಾನವಿದೆ. ಕನಕದಾಸನನ್ನು ಹೊರದೂಡಿದ ಪರಂಪರೆಯಿರುವ ಈ ದೇವಸ್ಥಾನದ ಪೂಜಾ ಕಾರ್ಯಗಳ ಜವಾಬ್ದಾರಿಯನ್ನು ಸರದಿಯಂತೆ ಎಲ್ಲಾ ಮಠಗಳು ನೆರವೇರಿಸುತ್ತಿವೆ. ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಪರ್ಯಾಯ ಉತ್ಸವದಲ್ಲಿ ಈ ಅಧಿಕಾರ ಹಸ್ತಾಂತರವೂ ಅನೂಚಾನವಾಗಿ ನಡೆದುಬಂದಿರುವ ಸಂಪ್ರದಾಯ. ಅದರಂತೆ ಇದೇ ತಿಂಗಳ 18ರಂದು ನಡೆಯಲಿರುವ ಪರ್ಯಾಯ ಉತ್ಸವದಲ್ಲಿ ಸೋದೆ ಮಠದ ಸ್ವಾಮಿಗಳು ಪೀಠ ಏರುವ ಉತ್ಸಾಹದಲ್ಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಎಂಟೂ ಮಠಗಳ ಸ್ವಾಮಿಗಳು ಹಾಜರಿರುವುದು ಅನಾದಿಕಾಲದಿಂದಲೂ ನಡೆದುಬಂದಿದೆ. ಆದರೆ ಈ ಸಲದ ಆಮಂತ್ರಣ ಪತ್ರಿಕೆಯಲ್ಲಿ ಪುತ್ತಿಗೆ ಮಠದ ಸ್ವಾಮಿಯ ಹೆಸರನ್ನು ಬಿಟ್ಟು ಉಳಿದ ಏಳು ಜನರ ಹೆಸರನ್ನು ಮಾತ್ರ ಅಚ್ಚು ಹಾಕಿಸಲಾಗಿದ್ದು ಇದು ಹೊಸ ವಿವಾದಕ್ಕೆ ಕಾರಣವಾಗಿದೆ.

ಪುತ್ತಿಗೆ ಮಠದ ಸ್ವಾಮಿ ಸುಗುಣೇಂದ್ರ ತೀರ್ಥಸ್ವಾಮಿ ಪಶ್ಚಿಮದೇಶಗಳ ಪ್ರವಾಸ ಮಾಡಿಬಂದಿದ್ದು, ಮಠದ ಸ್ವಾಮಿಗಳು 'ಸಾಗರೋಲ್ಲಂಘನ' ಮಾಡಬಾರದೆಂಬ ನಿಯಮವನ್ನು ಮುರಿದಿರುವುದರಿಂದ ಅವರು ಪರ್ಯಾಯದ ದರ್ಬಾರ್ ಮತ್ತು ಉತ್ಸವದ ಮೆರವಣಿಗೆಗಳಲ್ಲಿ ಭಾಗವಹಿಸುವಂತಿಲ್ಲ, ಇನ್ನಿತರ ಕಾರ್ಯಕ್ರಮಗಳಲ್ಲಿ ಬೇಕಾದರೆ ಅವರು ಭಾಗವಹಿಸಬಹುದು ಎಂದು ಸೋದೆ ಮಠದ ಆಡಳಿತ ಮಂಡಳಿಯವರು ಉದಾರ ಮನಸ್ಸಿನಿಂದ ವಿವರಿಸಿದ್ದಾರೆ. ಆದರೆ ಅಸಲಿ ವಿಷಯವೆಂದರೆ, ಈ ಕಾರ್ಯಕ್ರಮಕ್ಕೆ 'ಸಂಪ್ರದಾಯಭ್ರಷ್ಟ' ಪುತ್ತಿಗೆ ಸ್ವಾಮಿಯನ್ನು



ಕರೆಯುವುದಾದರೆ ನಾನು ಈ ಕಾರ್ಯಕ್ರಮವನ್ನೇ ಬಹಿಷ್ಕರಿಸುವುದಾಗಿ ಕೃಷ್ಣಾಪುರ ಮಠದ ಸ್ವಾಮಿಗಳು ಬೆದರಿಕೆ ಒಡ್ಡಿರುವ ಕಾರಣದಿಂದ ಅನಿವಾರ್ಯವಾಗಿ ಇಂಥ ನಿರ್ಧಾರ ಕೈಗೊಳ್ಳಬೇಕಾಗಿ ಬಂದಿದೆ ಎಂದು ಕೆಲಭಕ್ತರು ಹೇಳುತ್ತಿದ್ದಾರೆ.

'ಮಾಧ್ವಮತ'ದ ಸಂಸ್ಥಾಪಕರಾದ ಮಧ್ವಾಚಾರ್ಯರೇ ಈ ಅಷ್ಟಮಠಗಳನ್ನು ಸ್ಥಾಪಿಸಿದ್ದರು. ಮಾಧ್ವ ತತ್ವಸಾರ ಅಥವಾ ಇನ್ನಾವುದೇ ಬೋಧನೆಗಳಲ್ಲಿ ಎಲ್ಲಿಯೂ ಸಾಗರೋಲ್ಲಂಘನೆ ಮಾಡಬಾರದೆಂಬ ನಿಯಮದ ಉಲ್ಲೇಖವಿಲ್ಲ. ಆದ್ದರಿಂದ ಉಳಿದ ಸ್ವಾಮಿಗಳು ಕೂಡಲೆ ಮಧ್ಯಪ್ರವೇಶ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕು. ಇಲ್ಲವಾದರೆ ಇದುವರೆಗೂ ಅಷ್ಟಸ್ವಾಮಿಗಳು ಭಾಗವಹಿಸುತ್ತಿದ್ದ ಉತ್ಸವದ ಸಂಪ್ರದಾಯವನ್ನು ಸಪ್ತ ಸ್ವಾಮಿಗಳಿಗೆ ಇಳಿಸಿ ಪುರಾತನ ಸಂಪ್ರದಾಯವನ್ನು ಮುರಿದಂತಾಗುತ್ತದೆ. ಇದರ ಹೊಣೆಯನ್ನು ಈ ಸ್ವಾಮಿಗಳೇ ಹೊರಬೇಕಾಗುತ್ತದೆ ಎಂದಿರುವ ಮೂಡಬಿದ್ರಿಯ ಕೆಮ್ಮಾರು ಮಠದ ಸ್ವಾಮಿಗಳ ಮಾತಿನಲ್ಲಿ ಒಂದಷ್ಟು ಒಪ್ಪತಕ್ಕ ತರ್ಕವಿದೆಯಲ್ಲವೆ? ಮಧ್ವಾಚಾರ್ಯರು ನಿರೂಪಿಸಿದ ನಿಯಮಗಳನ್ನು ಪಾಲಿಸಬೇಕೇ ಹೊರತು ಬೇರೆ ನಿಯಮಗಳನ್ನಲ್ಲ ಎಂದು ಹಲವು ಭಕ್ತಾದಿಗಳು ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಮಾತು ಪೇಜಾವರರಾದಿಯಾಗಿ ಯಾವ ಸನ್ಯಾಸಿಯ ಕಿವಿಗೂ ಬಿದ್ದಂತಿಲ್ಲ.

ಪುತ್ತಿಗೆ ಮಠದ ಬೆಂಬಲಿಗರಾಗಿರುವ ವಿದ್ವಾಂಸರೊಬ್ಬರು ಮತ್ತೊಂದು ವಿಶಿಷ್ಟವಾದ ತರ್ಕವನ್ನು ಮುಂದಿಟ್ಟಿದ್ದಾರೆ. 'ಹಲವು ಮಠಾಧೀಶರು ಮಂಗಳೂರಿನಿಂದ ಮುಂಬೈಗೆ ಪ್ರಯಾಣಿಸುವಾಗ ವಿಮಾನದಲ್ಲೇ ಹಾರುತ್ತಾರೆ. ಆಗ ಅದೂ ಸಹ ಸಮುದ್ರದ ಮೇಲೆ ಹಾರುವುದರಿಂದ ಅದನ್ನು ಸಾಗರೋಲ್ಲಂಘನವೆಂದೇ ಪರಿಗಣಿಸಿ ಅವರನ್ನು ಸಹ ಅನರ್ಹರನ್ನಾಗಿಸುತ್ತಾರೆಯೇ?' ಎಂಬುದು ಅವರ ಪ್ರಶ್ನೆ. ಈ ಪ್ರಶ್ನೆ ನೇರವಾಗಿ ಪೇಜಾವರರನ್ನೇ ಗುರಿಯಾಗಿಸಿರುವುದು ಯಾರಿಗೂ ಅರ್ಥವಾಗದ್ದೇನಲ್ಲ. ಆದರೆ ಸದಾ ನಾನಾ ವಿತಂಡವಾದ, ಕುತರ್ಕಗಳಿಂದ ತನ್ನ ವಾದವನ್ನು ಸಮರ್ಥಿಸಿಕೊಳ್ಳುವ ಮಾನ್ಯ ಪೇಜಾವರರಿಗೆ ಈ ಬಡಪಾಯಿ ಪ್ರಶ್ನೆಗೆ ಉತ್ತರಿಸುವುದು ಕಷ್ಟದ ವಿಷಯವೇನಲ್ಲ ಬಿಡಿ.

'ಮಠಾಧೀಶರು ಮಠಗಳಲ್ಲೇ ಕಾಲಾಯಾಪನೆ ಮಾಡದೆ ತಮ್ಮ ತತ್ವಗಳ ಪ್ರಚಾರಕ್ಕಾಗಿ ಎಲ್ಲೆಡೆ ಪ್ರಚಾರ ಕೈಗೊಳ್ಳಬೇಕೆಂದು ಮಧ್ವಾಚಾರ್ಯರು ಬೋಧಿಸಿದ್ದಾರೆ. ಪುತ್ತಿಗೆ ಶ್ರೀಗಳು ಈ ತತ್ವವನ್ನು ಅನುಸರಿಸಿ ದೇಶವಿದೇಶಗಳಲ್ಲಿ ಸಂಚರಿಸಿ ಮಾಧ್ವ ತತ್ವವನ್ನು ಪ್ರಚಾರ ಮಾಡಿದ್ದರಲ್ಲಿ ಯಾವ ತಪ್ಪೂ ಇಲ್ಲ' ಎಂದು ವಿಶ್ವ ಮಾಧ್ವ ಸಂಘದ ಪ್ರತಿನಿಧಿಗಳು ಈ ಬಹಿಷ್ಕೃತ ಸ್ವಾಮಿಯ ಪರ ವಕಾಲತ್ತು ವಹಿಸಿದ್ದಾರೆ. ಈ ವಿವಾದ ಹಾದಿಬೀದಿ ರಂಪವಾಗುತ್ತಿರುವುದನ್ನು ಕಂಡು ಅಖಾಡಕ್ಕಿಳಿದ ಉಡುಪಿ ಶಾಸಕ ಹಾಗೂ ಮಡೆಸ್ನಾನಪ್ರಿಯ ಸಚಿವ ವಿ.ಎಸ್.ಆಚಾರ್ಯ ರಂಗಪ್ರವೇಶ ಮಾಡಿ ಸೋದೆ ಮಠದವರ ಮನವೊಲಿಸಲು ಕಸರತ್ತು ನಡೆಸಿ ವಿಫಲರಾಗಿದ್ದಾರೆಂಬ ಸುದ್ದಿ ಬಂದಿದೆ. 'ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ, ಉಳಿದದ್ದು ಸೋದೆ ಮಠದವರ ವಿವೇಚನೆಗೆ ಬಿಟ್ಟಿದ್ದು' ಎಂಬ ಅವರ ಮಾತುಗಳಲ್ಲಿ ಆತ್ಮವಿಶ್ವಾಸದ ಬದಲು ಹತಾಶೆ ಸ್ಪಷ್ಟವಾಗಿ ಎದ್ದು ಕಾಣುತ್ತಿದೆಯಲ್ಲವೆ? ಮಠಾಧೀಶರ ಈ ಅವಾಂತರವನ್ನು ಬಗೆಹರಿಸಲು ಹಿಂದೂತ್ವ ಸಂಘಟನೆಯ ನಾಯಕರು, ಬ್ರಾಹ್ಮಣ ಮುಖಂಡರು ಸತತ ಪ್ರಯತ್ನ ನಡೆಸುತ್ತಿದ್ದಾರೆಂಬುದು ಲೇಟೆಸ್ಟ್ ಸುದ್ದಿ. ಇಷ್ಟೆಲ್ಲಾ ನಡೆಯುತ್ತಿದ್ದರೂ ಸೋದೆ ಮಠದವರಾಗಲಿ, ಇತರ ಮಠಾಧೀಶರಾಗಲಿ ಮಣಿಯುವ ಲಕ್ಷಣ ಕಾಣುತ್ತಿಲ್ಲ. ಆದ್ದರಿಂದ ಈ ವಿವಾದವನ್ನು ನ್ಯಾಯಾಲಯಕ್ಕೆ ಕೊಂಡೊಯ್ದು ಬಗೆಹರಿಸಿಕೊಳ್ಳುವ ಮಾತುಗಳು ಕೇಳಿಬರುತ್ತಿವೆ. ಏನೇ ಆಗಲಿ, ಅಷ್ಟಮಠಗಳಿಗೆ ಇಂಥಾ ದುರ್ಗತಿ ಬರಬಾರದಿತ್ತು. ಜಗತ್ತಿಗೆಲ್ಲಾ ಬುದ್ಧಿವಾದ ಹೇಳಲು ಅತ್ಯುತ್ಸಾಹ ತೋರುವ ಪೇಜಾವರ ಸ್ವಾಮಿ ತನ್ನ ಮಠದ ಪಡಸಾಲೆಯಲ್ಲಿ ನಡೆಯುತ್ತಿರುವ ಇಂಥಾ ಕ್ಷುಲ್ಲಕ ವಿಚಾರವನ್ನು ತಮ್ಮ ಪಾಂಡಿತ್ಯ ಪ್ರಯೋಗದಿಂದ ಬಗೆಹರಿಸಲಾಗದೆ ಬೀದಿರಂಪ ಮಾಡಿಕೊಂಡಿರುವುದನ್ನು ನೋಡಿದರೆ ಇವರ ಪಾಂಡಿತ್ಯದ ಪೊಳ್ಳುತನ ಅರ್ಥವಾಗುತ್ತದೆ.


ಇಲ್ಲೊಂದು ಅತ್ಯಂತ ಧಾರ್ಮಿಕವಾದ ಪ್ರಶ್ನೆ ಎದುರಾಗುತ್ತದೆ. ಏನೆಂದರೆ ಶ್ರೀರಾಮ ತನ್ನ ಪತ್ನಿಯನ್ನು ಕಳೆದುಕೊಂಡು ವಿಲಪಿಸುತ್ತಿದ್ದಾಗ ಆತನ ಸಹಾಯಕ್ಕೆ ಬಂದ ಹನುಮಂತ ಸೀತೆಯನ್ನು ಕಂಡುಬರಲು ಸಾಗರೋಲ್ಲಂಘನ ಮಾಡಿ ಸೀತಾಮಾತೆಯ ಸಂದೇಶವನ್ನು ರಾಮನಿಗೆ ತಲುಪಿಸಿದ್ದು ರಾಮಾಯಣದ ಪ್ರಾಥಮಿಕ ತಿಳಿವಳಿಕೆ ಇರುವ ಎಲ್ಲರಿಗೂ ತಿಳಿದಿದೆ. ಅಂಥಾ ಹನುಮಂತನನ್ನು ಕೋಟ್ಯಾನುಕೋಟಿ ಭಕ್ತಾದಿಗಳು (ಅದರಲ್ಲೂ ಹೆಚ್ಚಾಗಿ ಶೂದ್ರರು) ಪೂಜಿಸುತ್ತಿದ್ದಾರೆ. ಹೀಗಿರುವಾಗ 'ಸಾಗರೋಲ್ಲಂಘನ' ತಪ್ಪೆಂದು ಸಾರುವ ಮೂಲಕ ಈ ಪರ್ಯಾಯ ಮಠಾಧಿಪತಿಗಳು ನಮ್ಮ ಹನುಮಂತ ದೇವರನ್ನೇ ಅವಮಾನಿಸಿದ್ದಾರೆ ಎಂಬುದು ಶೂದ್ರ ಭಕ್ತರ ಅಳಲು. ಬಹುಶಃ ಈ ಮಠಾಧಿಪತಿಗಳು ಹನುಮಂತನಿಗಿಂತಲೂ ತಾವೇ ಶ್ರೇಷ್ಠ ಎಂದುಕೊಂಡಿದ್ದರೂ ಆಶ್ಚರ್ಯವಿಲ್ಲ.

ಸದಾ ಕಂದಾಚಾರಗಳಲ್ಲಿ ಮುಳುಗಿರುವ ಈ ಮಠಾಧೀಶರ ಬುದ್ಧಿಗೆ ಮಂಕು ಕವಿದಿರುವುದಂತೂ ಸತ್ಯ. ಈ ಮಂಕನ್ನು ಹೋಗಲಾಡಿಸಲು ಇವರನ್ನು ಕುಕ್ಕೆಯ ಎಂಜಲೆಲೆಯ ಮೇಲೆ ಉರುಳಿಸುತ್ತೇವೆಂದು ವಿ.ಎಸ್. ಆಚಾರ್ಯನಂಥ ಪರಮ ಭಕ್ತರು ಇದೇ ಸಂದರ್ಭದಲ್ಲಿ ಹರಕೆ ಹೊತ್ತುಕೊಳ್ಳುವುದು ಸೂಕ್ತ ಎಂಬುದು ನಮ್ಮ ವಿನಮ್ರ ಸಲಹೆ. ಒಂದೇ ಒಂದು ಬಾರಿ ಟ್ರೈ ಮಾಡಿ ನೋಡಲಿ. ಏನಂತೀರಿ?

ವೈದ್ಯಕೀಯ ಶಿಕ್ಷಣ


ರಾಮಚಂದ್ರಗೌಡರ ಹಾದಿಯಲ್ಲಿ ರಾಮದಾಸ್

ಯಡಿಯೂರಪ್ಪನವರಿಗಿಂತ ಮುಂಚೆ ಅವರ ಸಚಿವ ಸಂಪುಟದಲ್ಲಿದ್ದವರಲ್ಲಿ ...ಮ್ಮ ಅದಕ್ಷತೆ, ಹಗರಣಗಳಿಗೆ ತಲೆದಂಡ ಕೊಡಬೇಕಾಗಿ ಬಂದಿದ್ದು ವೈದ್ಯಕೀಯ ...ಣ ಸಚಿವ ರಾಮಚಂದ್ರಗೌಡರು. ಬೋಧಕೇತರ ಸಿಬ್ಬಂದಿ ನೇಮಕಾತಿಯೂ ...ಸಿದಂತೆ ಹಲವು ಸಮಸ್ಯೆಗಳಲ್ಲಿ ಗೌಡರು ನೇರವಾಗಿ ಸಿಕ್ಕಿಬಿದ್ದು ರಾಜೀನಾಮೆ ...ಟ್ಟಿದ್ದರು. ಆಗ ವೈದ್ಯಕೀಯ ಶಿಕ್ಷಣ ಇಲಾಖೆಯ ಮಂತ್ರಿಯಾಗಿ ಬಂದು ಕೂತಿದ್ದು ...ಸೂರಿನ ಮಟು ರಾಮದಾಸ್. ಅದುವರೆಗೆ ಯಾವ ಆಡಳಿತಾತ್ಮಕ ಹುದ್ದೆಯಲ್ಲೂ ...ರದ ರಾಮದಾಸ್‌ರಿಂದ ಯಾರೂ ಹೆಚ್ಚೇನೂ ನಿರೀಕ್ಷಿಸಿರಲಿಲ್ಲ. ಆದರೆ ...ಮದಾಸ್ ಪ್ರಮಾಣ ವಚನ ಸ್ವೀಕರಿಸಿದ ದಿನದಿಂದಲೇ ಮೆಡಿಕಲ್ ಕಾಲೇಜುಗಳ ...ಲೆ ದಿಢೀರ್ ದಾಳಿ ಶುರು ಹಚ್ಚಿಕೊಂಡರು. ಅಂತಹ ದಾಳಿಗಳ ಸಂದರ್ಭದಲ್ಲಿ ...ಮದಾಸ್ ಮಾಡಿದ ಅಬ್ಬರ, ಮೆರೆದ ಪರಾಕ್ರಮಗಳು ಬಬ್ರುವಾಹನನ ರೀತಿ ...ನ್ನು ಕಂಡದ್ದರಿಂದ, ಏನಾದರೂ ಬದಲಾ...ಕಿ ಸಾಧ್ಯವಾಗಬಹುದು ಎಂದು ಕೆಲವರ ...ಸಿದ್ದು ಸುಳ್ಳಲ್ಲ. ಆದರೆ ಈ ದಾಳಿಗಳು ...ಮದಾಸ್‌ರ ಇಮೇಜ್ ಬಿಲ್ಡಿಂಗ್ ಪ್ರಯತ್ನ ...ಗೂ ಕಮಾಯಿಗೆ ಮಾಡಿಕೊಂಡ ದಾರಿ ...ಷ್ಟೇನೇ ಇರಬಹುದು ಎಂಬ ಅನುಮಾನ ...ಗ ಎಲ್ಲರಲ್ಲೂ ಕಾಡತೊಡಗಿದೆ. ಇದಕ್ಕೆ ...ರಿ ಸಚಿವರು ಇಲಾಖೆಗೆ ಯಾವ ಚಿಕಿತ್ಸೆ ...ನ್ನೂ ನೀಡದೇ ಇರುವುದೇ ಕಾರಣ ...ಗಿದೆ.


ರಾಮದಾಸ್

...ಹಾಗೆ ನೋಡಿದರೆ, ವೈದ್ಯಕೀಯ ಶಿಕ್ಷಣ ...ಖೆಯೇನು ಗೃಹ ಖಾತೆಯೂ ಅಲ್ಲ, ...ಯವೂ ಅಲ್ಲ, ನೀರಾವರಿಯೂ ಅಲ್ಲ. ...ಸೂರು ಜಿಲ್ಲಾ ಉಸ್ತುವಾರಿ, ತನ್ನ ...ದಂಥ, ಬಿಜೆಪಿಯೊಳಗಿನ ಒಳಜಗಳ ...ವನ್ನೂ ಮಾಡಿಕೊಂಡೇ ನಿಭಾಯಿಸ...ಬಹುದಾದಷ್ಟು ಸಣ್ಣ ಇಲಾಖೆ. ಆದರೆ ಇಷ್ಟು ... ಇಲಾಖೆಯೊಂದರಲ್ಲೇ ನೂರಾರು ...ನಗಡಿಗಳು, ಇಡೀ ರಾಜ್ಯಕ್ಕಾಗಬಹು...ದಷ್ಟು ಕಿತಾಪತಿ ನಡೆಯುತ್ತಿವೆ. ...ದ್ಯಕೀಯ ಇಲಾಖೆಗೆ ಇರುವ ಒಬ್ಬ ...ಎಸ್ ಕಾರ್ಯದರ್ಶಿ, ಒಂದು ಅಲೋಪತಿ ವೈದ್ಯಕೀಯ ಶಿಕ್ಷಣ ನಿರ್ದೇಶನಾ...ಯ, ವಿವಿಧ ಉಪವಿಭಾಗಗಳು, ವಿವಿಧ ಮೆಡಿಕಲ್ ಕಾಲೇಜುಗಳ ...ರ್ದೇಶಕರುಗಳು ಇಷ್ಟೆಲ್ಲಾ ಜನರಿದ್ದೂ ಓರ್ವ ಸಚಿವಸಂಪುಟ ದರ್ಜೆಯ ಮಂತ್ರಿಗೆ ...ಗೆ ವಹಿಸಿರುವ ಇಲಾಖೆಯನ್ನೂ ನೆಟ್ಟಗೆ ಮಾಡಕೊಳ್ಳಲಿಕ್ಕಾಗುತ್ತಿಲ್ಲ ಎಂದರೆ ...ನ್ನು ಈ ರಾಜ್ಯದ ದೌರ್ಭಾಗ್ಯವೆನ್ನಬೇಕೋ, ಇನ್ನೇನೆನ್ನಬೇಕೋ ತಿಳಿಯುತ್ತಿಲ್ಲ.


...ಮಂಡ್ಯ ಮೆಡಿಕಲ್ ಕಾಲೇಜು ಒಂದರ ಉದಾಹರಣೆ ನೋಡಿದರೆ ಸಾಕು, ...ಸಂಗತಿ ಮನದಟ್ಟಾಗುತ್ತದೆ. ರಾಮಚಂದ್ರಗೌಡರು ಪದವಿ ಕಳೆದುಕೊಂಡಿದ್ದು ...ರ್ಗಗಳು, ಲ್ಯಾಬ್ ಟೆಕ್ನಿಷಿಯನ್‌ಗಳು, ಅಟೆಂಡರ್‌ಗಳ ನೇಮಕಾತಿಯಲ್ಲಿ. ಆದರೆ ...ಕ್ಕಿಂತ ದೊಡ್ಡದೊಂದು ಹಗರಣ ಇಲ್ಲಿ ನಡೆದಿತ್ತು. ಪ್ರತಿ ತಿಂಗಳು ಲಕ್ಷದ ಹತ್ತಿರ ...ಳ ಪಡೆಯುವ ಪ್ರೊಫೆಸರ್‌ಗಳು, ದೊಡ್ಡ ದೊಡ್ಡ ಡಾಕ್ಟರುಗಳೇ ಸುಳ್ಳು ...ಫಿಕೇಟ್‌ಗಳ ಆಧಾರದ ಮೇಲೆ ಇಲ್ಲಿ ಹುದ್ದೆ ಗಿಟ್ಟಿಸಿದ್ದು ಸಾಕಷ್ಟು ಹಿಂದೆಯೇ ...ಗೆ ಬಂದಿತ್ತು. ಈ ಕುರಿತು 'ಪತ್ರಿಕೆ'ಯಲ್ಲೂ ವರದಿಯಾಗಿ, ...ಕಾಯುಕ್ತರಲ್ಲೂ ದೂರು ದಾಖಲಾಗಿ, ಮಂಡ್ಯದ ...ತಿಪರರಲ್ಲಿ ಕೆಲವರು ಈ ಹಗರಣದ ಬೆನ್ನು ಬಿದ್ದಿದ್ದರಿಂದ ...ರ ಸತ್ಯಾಸತ್ಯತೆ ಬಯಲಾಗಿತ್ತು. ಲೋಕಾಯುಕ್ತ ತನಿಖಾ...ರಿಯು ಪತ್ತೆಹಚ್ಚಿದ ವಿವರಗಳನ್ನು ನೋಡಿ ವೈದ್ಯಲೋಕ ... ಬಿದ್ದಿತ್ತು. ಕಾಲೇಜೇ ಇಲ್ಲದಿದ್ದಾಗಲೂ ಅಲ್ಲಿ ಕೆಲಸ ...ಡಿದ್ದೇವೆ ಎಂದು ಸುಳ್ಳು ಸರ್ಟಿಫಿಕೇಟ್‌ಗಳನ್ನು ಪಡೆದಿದ್ದ ...ಶಯರು, ಮಹಿಳಾಮಣಿಗಳು ಸಿಕ್ಕಿಬಿದ್ದಿದ್ದರು. ನಾಲ್ಕು ...ರ್ಷಗಳ ಕಾಲದ ತನಿಖೆಯ ನಂತರ ಅಂತಿಮವಾಗಿ ...ಕಾಯುಕ್ತ ಸಂತೋಷ್ ಹೆಗ್ಡೆಯವರು ವರದಿ ನೀಡಿದಾಗ ...ಗೋಡೆ ಮೇಲೆ ದೀಪವಿಟ್ಟಂತೆ 'ಇದು ತನ್ನ ವ್ಯಾಪ್ತಿಗೆ ...ರುವುದಿಲ್ಲ' ಎಂದು ಷರಾ ಬರೆದಿದ್ದರು.


ರಾಮಶೆಟ್ಟಿ

...ಆದರೂ ಈ ವಿಚಾರದಲ್ಲಿ ಸಂಬಂಧಪಟ್ಟ ಇಲಾಖೆ ...ರ್ಜರಿ ಇತ್ಯಾದಿ 420 ಕೃತ್ಯಗಳನ್ನು ಮಾಡಿದ್ದವರ ಮೇಲೆ ಕ್ರಮ ಕೈಗೊಳ್ಳ...ಬಹುದು ಎಂದು ಹೆಗ್ಡೆಯವರು ಸೂಚಿಸಿದ್ದರು. ಆದರೆ ರಾಮಚಂದ್ರಗೌಡರು ಮತ್ತು ಇಲಾಖೆಯ ಕಾರ್ಯದರ್ಶಿಗಳು ಆ ಶಿಫಾರಸ್ಸನ್ನು ತಾವು ಕೂರುವ ಜಾಗದಡಿ ಇದನ್ನು ಹಾಕಿ ಕೂತರೇ ವಿನಃ ಮತ್ತೇನೂ ಮಾಡಲಿಲ್ಲ. ಇದನ್ನು ಬಿಡಪಟ್ಟಿಗೆ ಬಿಡಲು ಸಿದ್ಧರಿಲ್ಲದ ಮಂಡ್ಯದ ಪ್ರಗತಿಪರರು ಪುಸ್ತಕವೊಂದನ್ನು ಅಚ್ಚು ಹಾಕಿದ್ದಲ್ಲದೇ ಖಾಸಗಿ ಕ್ರಿಮಿನಲ್ ಮೊಕದ್ದಮೆ ಹೂಡಲು ಮುಂದಾದರು.

ಆಗ ರಾಮದಾಸ್ ಹೂಂಕರಿಸಿ, ಇದು ತನ್ನ ಭುಜಬಲ ಪರಾಕ್ರಮಕ್ಕೆ ಹಾಕಿದ ಸವಾಲು ಎಂಬಂತೆ 'ನಾನೇ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ' ಎಂದು ಪ್ರಕಟಿಸಿದರು. ಅದಕ್ಕಾಗಿ ಎನ್.ನಾರಾಯಣ್ ಎಂಬ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಿ, ಸದರಿ ಪ್ರಕರಣದ ಕುರಿತು ವರದಿ ಸಲ್ಲಿಸಲು ಕೇಳಿದರು. ಎನ್.ನಾರಾಯಣ್ ಅವರು ಇಡೀ ಪ್ರಕರಣದ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಪರಿಶೀಲಿಸಿದರು. ಲೋಕಾಯುಕ್ತ ತನಿಖಾಧಿಕಾರಿಯವರು 'ನಿಮ್ಮ ವಿವರಣೆಗಳೇನಾದರೂ ಇದ್ದರೆ ಸಲ್ಲಿಸಿ' ಎಂದು ಕೇಳಿ ಆರೋಪಿ ವೈದ್ಯರಿಗೆ ಅವಕಾಶ ಮಾಡಿಕೊಟ್ಟು ಪಡೆದುಕೊಂಡಿದ್ದ ಎಲ್ಲಾ ದಾಖಲೆ/ವಿವರಗಳನ್ನೂ ಪರಿಶೀಲಿಸಿ ಅಂತಿಮವಾಗಿ 2011ರ ಏಪ್ರಿಲ್ 11ರಂದು ಸರ್ಕಾರಕ್ಕೆ ವರದಿ ನೀಡಿದರು. ಮಂಡ್ಯದ ಪ್ರಗತಿಪರರು ಆರೋಪ ಮಾಡಿದ್ದ ಬಹುತೇಕ ವೈದ್ಯರುಗಳು ತಪ್ಪನ್ನೆಸಗಿದ್ದಾರೆಂದು ತಮ್ಮ ವರದಿಯಲ್ಲಿ ಕಾಣಿಸಿದ್ದರು.

ಇದನ್ನು ಪಡೆದುಕೊಂಡ ಕೂಡಲೇ (ಮೇ 25) ರಾಮದಾಸ್ ಪತ್ರಿಕಾಗೋಷ್ಠಿಯನ್ನು ನಡೆಸಿ ಆ ಎಲ್ಲಾ ವೈದ್ಯರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತಿದ್ದೇವೆಂದು ಘರ್ಜಿಸಿದರು. ಆಗಾಗ ಪತ್ರಿಕೆ ಮತ್ತು ಟಿವಿಗಳಲ್ಲಿ ರಾಮದಾಸ್‌ರು ಕಾಣಿಸಿಕೊಳ್ಳದಿದ್ದರೆ ಅವರಿಗೆ ನಿದ್ರಾಹೀನತೆ, ಅನ್ನ ಸೇರದೇ ಇರುವುದು ಇತ್ಯಾದಿ ಸಮಸ್ಯೆಗಳುಂಟಾಗುತ್ತವೆ ಎಂದು ಕಾಣುತ್ತದೆ. ಏಕೆಂದರೆ ಇಂತಹ ಪತ್ರಿಕಾಗೋಷ್ಠಿಯಲ್ಲಿ ರಾಮದಾಸರು ಘರ್ಜಿಸಿದ ನಂತರ ಏಳು ತಿಂಗಳು ಕಳೆದರೂ ಇದುವರೆಗೂ ಅಂತಹ ಕ್ರಿಮಿನಲ್ ಮೊಕದ್ದಮೆ ದಾಖಲಾಗಿಲ್ಲ. ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆ, ಮಂಡ್ಯ ಮೆಡಿಕಲ್ ಕಾಲೇಜು ಆಸ್ಪತ್ರೆ ಇತ್ಯಾದಿಗಳ ಮೇಲೆ ರಾಮದಾಸರು ನಡೆಸಿದ ದಾಳಿಗಳ ಪರಿಣಾಮವೂ ಅಷ್ಟೆ. 'ರಾಮದಾಸ್‌ರಿಂದ ದಾಳಿ' ಎಂಬ ಸುದ್ದಿಗಳು ರಾಮದಾಸ್‌ರಿಗೆ ಕಾಲಕಾಲಕ್ಕೆ ನಿದ್ದೆ ಬರುವುದಕ್ಕೆ ಮತ್ತು ಹೊಟ್ಟೆ ಹಸಿಯುವುದಕ್ಕೆ ಅನುಕೂಲವಾಯಿತೇ ಹೊರತು ಮತ್ತೇನೂ ಆಗಲಿಲ್ಲ. ವೈದ್ಯಕೀಯ ಶಿಕ್ಷಣಕ್ಕಾಗಲೀ, ಆಯಾ ಆಸ್ಪತ್ರೆಗಳ ದುಸ್ಥಿತಿಗಾಗಲೀ ಯಾವುದೇ ಕಾಯಕಲ್ಪವಾದದ್ದು ಕಣ್ಣಿಗೇನೂ ಕಾಣುತ್ತಿಲ್ಲ.


ಗುರುಶಂಕರ್

ಮಂಡ್ಯದಂತೆಯೇ, ಹುಬ್ಬಳ್ಳಿಯ ಕಿಮ್ಸ್‌ನ ಹಗರಣಕ್ಕೆ, ಬಳ್ಳಾರಿಯ ವಿಮ್ಸ್‌ನ ಕರ್ಮಕಾಂಡಕ್ಕೆ, ಮೈಸೂರಿನ ಮರಳು ಸಮಸ್ಯೆಗೆ ಎಲ್ಲಕ್ಕೂ ಏಕಸದಸ್ಯ ಆಯೋಗದ ನೇಮಕಾತಿಗಳ ಘೋಷಣೆಗಳನ್ನು ಮಾನ್ಯ ಸಚಿವರು ಟಿವಿ, ಪತ್ರಿಕೆಗಳ ಎದುರು ಘೋಷಿಸಿಬಿಡುತ್ತಾರೆ. ಆದರೆ ಆನಂತರ ಏನನ್ನೂ ಮಾಡುವುದಿಲ್ಲ. ಇದೆಲ್ಲದರ ಪರಿಣಾಮವಾಗಿ ಆಯಾ ಹಗರಣಗಳ ಆರೋಪಿಗಳು ಬಂದು ಕಪ್ಪಕಾಣಿಕೆಗಳನ್ನು ಸಲ್ಲಿಸಲು ಅನುಕೂಲವಾಗುತ್ತಿದೆ ಎಂಬ ಮಾತು ಇಲಾಖೆಯಲ್ಲಿ ಈಗ ಜನಜನಿತವಾಗಿದೆ.

ಲೋಕಾಯುಕ್ತ ತನಿಖಾಧಿಕಾರಿ ದೂರನ್ನು ತನಿಖೆ ಮಾಡಿದ್ದಾರೆ, ಸಂಬಂಧಪಟ್ಟ ಆರೋಪಿಗಳಿಗೂ ಅವಕಾಶ ಕೊಟ್ಟು ಅವರ ಆಕ್ಷೇಪಣೆಗಳನ್ನೂ ಪಡೆದುಕೊಂಡಿದ್ದಾರೆ, ಸಾಕಷ್ಟು ದಾಖಲೆಗಳನ್ನು ಪಡೆದುಕೊಂಡಿದ್ದಾರೆ. ಇದರ ಆಧಾರದ ಮೇಲೆ ಸರ್ಕಾರ ಬೇಕಾದರೆ ಕ್ರಮ ಕೈಗೊಳ್ಳಬಹುದು ಎಂದು ಲೋಕಾಯುಕ್ತರು ಸೂಚಿಸಿದ್ದಾರೆ. ಮಂತ್ರಿ ಮತ್ತು ಇಲಾಖೆಯ ಕಾರ್ಯದರ್ಶಿಗಳು ಇವನ್ನು ಪರಿಶೀಲಿಸಿದ್ದಾರೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರು ಮತ್ತೆ ತನಿಖೆ ನಡೆಸಿ ವರದಿ ನೀಡಿದ್ದಾರೆ. ಇಷ್ಟೆಲ್ಲಾ ಆದಮೇಲೂ ಯಾವುದೇ ಕ್ರಮ ಆಗಿಲ್ಲವೆಂದರೆ ಅದರರ್ಥ, ರಾಮದಾಸ್ ಅವರು ಮಾಡುವ ಅಬ್ಬರದ ಹಿಂದೆ ಇಲಾಖೆಯನ್ನು ಸರಿಪಡಿಸುವುದಕ್ಕಿಂತ ಬೇರೇನೋ ಉದ್ದೇಶವಿದೆ ಎಂದು ತಾನೇ. ಬಹುಶಃ ಈ ಕಾರಣಕ್ಕೋ ಏನೋ ಮಂಡ್ಯದ ಪ್ರಗತಿಪರರು ಯಾವುದಕ್ಕೂ ಕಾಯದೇ ಈಗಾಗಲೇ ಐವರು ನಕಲಿ ವೈದ್ಯರ ವಿರುದ್ಧ ಖಾಸಗಿ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ.

ಎಂಸಿಐ ಕಾರಣಕ್ಕೆ ಅತ್ಯಗತ್ಯವಿದೆ ಎಂದು ಹೇಳಿ ಬಹುತೇಕ ಎಲ್ಲಾ ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲೂ ಹಲವು ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದರೆ ವಾಸ್ತವದಲ್ಲಿ ಎಂಸಿಐನ ನಿಯಮಾವಳಿಗಳಿಗೆ ವಿರುದ್ಧವಾಗಿಯೇ ಇಂತಹ ನೇಮಕಾತಿಗಳು ನಡೆಯುತ್ತಿವೆ. ಇದು ಹುಬ್ಬಳ್ಳಿ-ಧಾರವಾಡದಲ್ಲಿ ದೊಡ್ಡ ಸಮಸ್ಯೆಯನ್ನೇ ಸೃಷ್ಟಿಸಿದೆ (ಬಾಕ್ಸ್ ನೋಡಿ). ಬಳ್ಳಾರಿ ಹಾಗೂ ಹಾಸನಗಳಲ್ಲೂ ಇದೇ ಪುನರಾವರ್ತನೆಯಾಗಿದೆ. ಹಾಸನದಲ್ಲಿ ಹೊಸದಾಗಿ ನೇಮಕವಾದ ನಿರ್ದೇಶಕ ಡಾ.ರವಿಕುಮಾರ್ ಸುಳ್ಳು (ನಕಲಿ) ಸರ್ಟಿಫಿಕೇಟ್ ತಂದಿರುವವರಾಗಿದ್ದಾರೆ.

ಇಂತಹ ಅಕ್ರಮಗಳಿಗೆ ತಾನು ಒಪ್ಪುವುದಿಲ್ಲ ಎಂದು ಪಟ್ಟು ಹಿಡಿಯಬೇಕಾದ ಇಲಾಖೆಯ ಕಾರ್ಯದರ್ಶಿ ಗೋಪಾಲಕೃಷ್ಣೇ ಗೌಡರು ರಾಮದಾಸ್ ಹೇಳಿದ ಕಡೆಯೆಲ್ಲಾ ಸಹಿ ಗುದ್ದುತ್ತಾ ಗುಮಾಸ್ತರ ರೀತಿ ಕೆಲಸ ಮಾಡುತ್ತಿದ್ದಾರೆ. ರಾಮದಾಸ್‌ರಿಗೆ ಸಂದಾಯವಾಗುತ್ತಿರುವ ಹಣದಲ್ಲಿ ಒಂದು ಸಣ್ಣ ಪಾಲು ಇವರಿಗೂ ದಕ್ಕುತ್ತಿರುವುದಕ್ಕೇ ಗೌಡರು ಹೀಗಿದ್ದಾರೆ ಎಂದು ಇಲಾಖೆಯ ಗೋಡೆಗಳು ಪಿಸುಗುಟ್ಟುತ್ತಿವೆ. ಉದಾಹರಣೆಗೆ ಇತ್ತೀಚಿನ ಎಐಸಿಟಿಇ ಪರಿಷ್ಕೃತ ವೇತನ ನೀಡುವ ಬಗ್ಗೆ ಒಂದು ತೀರ್ಮಾನವನ್ನು ಇಲಾಖೆಯು ತೆಗೆದುಕೊಂಡಿತು. 80 ಸಾವಿರ ಸಂಬಳ ಪಡೆಯುತ್ತಿದ್ದ ಪ್ರೊಫೆಸರ್‌ಗಳು ಈಗ ಬರೋಬ್ಬರಿ 1 ಲಕ್ಷದ 25 ಸಾವಿರ ಮಾಸಿಕ ಸಂಬಳ ಪಡೆದುಕೊಳ್ಳುತ್ತಿದ್ದಾರೆ. ಈ ಅನುಕೂಲಕ್ಕಾಗಿ ಎಲ್ಲಾ ಸಿಬ್ಬಂದಿಯೂ ತಮ್ಮ ಒಂದೊಂದು ತಿಂಗಳ ಸಂಬಳ(ಹಲವಾರು ಕೋಟಿಗಳು)ವನ್ನು ಇಲಾಖೆಗೆ ತಲುಪಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಅಷ್ಟೇ ಅಲ್ಲ, ಈ ಹೊಸ ವೇತನ ನೀಡುವಾಗ ಎಲ್ಲಾ ಸರ್ಕಾರೀ ಮೆಡಿಕಲ್ ಕಾಲೇಜು ವೈದ್ಯರೂ ಖಾಸಗಿ ಪ್ರಾಕ್ಟೀಸ್ ಮಾಡದಂತೆ ನಿಬಂಧನೆ ಹಾಕುತ್ತೇವೆಂದು ರಾಮದಾಸ್ ಈ ಹಿಂದೆ ಗುಡುಗಿದ್ದರು. ಆದರೆ ಈಗ ಅಂತಿಮವಾಗಿ ಆದೇಶವಾದಾಗ ಅಂತಹದ್ದೇನೂ ನಿಬಂಧನೆ ಹಾಕಿಲ್ಲ. ಸರ್ಕಾರಿ ಕೆಲಸದ ವೇಳೆಯಲ್ಲೇ ಹೊರಗೆ ಹೋಗಿ ಖಾಸಗಿ ಪ್ರಾಕ್ಟೀಸ್ ಮಾಡುವುದನ್ನೂ ತಡೆಗಟ್ಟಲು ಇವರಿಗೆ ಸಾಧ್ಯವಾಗಿಲ್ಲ ಎಂದಮೇಲೆ ಇನ್ನು ಉಳಿದ ಸಮಯದಲ್ಲಿ ಇವರು ಮಾಡುವುದನ್ನು ತಡೆಯಲು ನಿರೀಕ್ಷಿಸಲಾದೀತೆ?

ರಾಮದಾಸ್ ಇದೇ ರೀತಿ ಮುಂದುವರೆದರೆ, ಅವರೂ ಸದ್ಯದಲ್ಲೇ ರಾಮಚಂದ್ರಗೌಡರ ಹಾದಿಯನ್ನು ಹಿಡಿಯುವುದರಲ್ಲಿ ಅನುಮಾನವಿಲ್ಲ. ಈಗಲಾದರೂ ತನಗೆ ಸಿಕ್ಕಿರುವ ಅವಕಾಶವನ್ನು ಸೂಕ್ತವಾಗಿ ಉಪಯೋಗಿಸಿಕೊಂಡು, ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ನೆಟ್ಟಗೆ ಮಾಡಿದರೆ ರಾಮದಾಸ್ ಮಾಡುತ್ತಿರುವ ಸುದ್ದಿಯ ಪ್ರಮಾಣಕ್ಕೂ, ಕೆಲಸಕ್ಕೂ ತಾಳೆಯಾಗುತ್ತದೆ.

• ವರದಿಗಾರ

ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಮುಂದುವರೆದ ಭ್ರಷ್ಟಾಚಾರ

...ವಿಮ್ಸ್‌ನ ಹೊಸ ನಿರ್ದೇಶಕ ಡಾ.ಗುರುಶಂಕರ್ ಬರುತ್ತಾ ಬರುತ್ತಾ ಇದ್ದಾಗಲೇ ಮೇಯಲು ಶುರು ಹಚ್ಚಿಕೊಂಡಿದ್ದನ್ನು ಈ ಹಿಂದೆಯೇ ...ತ್ರಿಕೆ'ಯಲ್ಲಿ ಬರೆಯಲಾಗಿತ್ತು. ಗುರುಶಂಕರ್ ಜನಶಕ್ತಿಯ ಜಿಲ್ಲಾಧ್ಯಕ್ಷ ಕೃಷ್ಣಪ್ರಕಾಶ್ ವಿರುದ್ಧ ಹಾಕಿದ್ದ ಸುಳ್ಳು ಅಟ್ರಾಸಿಟಿ ಕೇಸು ಆತನಿಗೇ ...ಟ್ಟಾ ಹೊಡೆದ ನಂತರವಾದರೂ ತನ್ನಿಂದ ಮತ್ತೇನೂ ಸಾಧ್ಯವಿಲ್ಲ ಎಂದು ಅರಿತು ತನ್ನ ಪಾಡಿಗೆ ಕಾಲೇಜನ್ನು ಸರಿಪಡಿಸಿಕೊಳ್ಳುವ ಕಡೆ ಆತ ...ಸ ನೀಡಬಹುದಿತ್ತು. ಆದರೆ ಅದನ್ನು ಬಿಟ್ಟು ಮೇಯುವ ಕೆಲಸವನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗುತ್ತಲೇ ಇದ್ದಾರೆ.

...ಲೋಕಾಯುಕ್ತ ರೈಡ್‌ನಲ್ಲಿ ಸಿಕ್ಕಿಬಿದ್ದು ಅಮಾನತಾಗಿರುವ ರಾಂಶೆಟ್ಟಿ ಈಗಲೂ ಅನಧಿಕೃತವಾಗಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ...ಸದಾಗಿ ಬಂದಿರುವ ಪ್ರಾಮಾಣಿಕ ಮುಖ್ಯ ಆಡಳಿತಾಧಿಕಾರಿ ಗೋವಿಂದರಾಜು ಅವರಿಂದಲೂ ಇದನ್ನು ತಡೆಯಲಾಗಿಲ್ಲ. ಈಗಲೂ ...ನಿತ್ಯವೂ ಕಾಲೇಜಿಗೆ ಬರುವ ರಾಂಶೆಟ್ಟಿ ಕ್ಯಾಂಪಸ್‌ನಲ್ಲೇ ಇರುವ ಎಎನ್‌ಎಸ್ ಕನ್‌ಸ್ಟ್ರಕ್ಷನ್ಸ್ ಕಚೇರಿಯಲ್ಲಿ 'ಮಿಮ್ಸ್ ವಸೂಲಿ ಕೇಂದ್ರ'ದ ...ಕೃತ ವಸೂಲಿದಾರರಾಗಿದ್ದಾರೆ.

...ಸಿ.ಟಿ. ಸ್ಕ್ಯಾನ್ ಟೆಂಡರ್ ವಿಚಾರಕ್ಕೆ ಸಂಬಂಧಪಟ್ಟಂತೆ ಖರೀದಿ ಸಮಿತಿಯ ಪೂರ್ವಭಾವಿ ಸಭೆ ನಡೆಸದೇ ಏಕಾಏಕಿ ಟೆಂಡರ್ ...ಮು ಡಾ.ಗುರುಶಂಕರ್ ಅಪ್ಪನಪಾರಕ್ಕೆದಾರಿ ಮಾಡಿಕೊಂಡಿದ್ದಾರೆ. ಸಂಬಂಧಪಟ್ಟ ವಿಭಾಗಗಳಿಂದ ಯಾವುದೇ ಇಂಡೆಂಟ್ ಇಲ್ಲದಿದ್ದರೂ, ...ಗೆ ಲಂಚ ಸಿಗುವ ಕಂಪೆನಿಗಳ ಜೊತೆ ಶಾಮೀಲಾಗಿ ಕೊಟೇಷನ್ ಮೂಲಕ ಖರೀದಿಗೆ ಮುಂದಾಗುತ್ತಿದ್ದಾರೆ. ಈ ಗುರುಶಂಕರ್‌ರನ್ನು ...ನ ಮನೆಗೆ ಕಳಿಸದೇ ಇದ್ದರೆ, ಆತ ಮಿಮ್ಸ್‌ಅನ್ನು ಮುಳುಗಿಸುವುದರಲ್ಲಿ ಹಿಂದಿನ ನಿರ್ದೇಶಕಿ ಡಾ.ಪುಷ್ಪಾ ಸರ್ಕಾರ್‌ರನ್ನು ಮೀರಿಸುವ ...ಸಾಧ್ಯತೆಗಳಿವೆ. ಈ ರೀತಿ ಮುಳುಗಿಸುವುದಕ್ಕೆ ನಕಲಿ ಸರ್ಟಿಫಿಕೇಟ್ ವೈದ್ಯರಾದ ಡಾ.ಸಂದೀಶ್ ಹಾಗೂ ಇತರರು ಬೆನ್ನೆಲುಬಾಗಿ ...ದ್ದಾರೆ.

ಧಾರವಾಡದ ನರರೋಗ ಸಂಸ್ಥೆಗೆ ನಕಲಿ ಸರ್ಟಿಫಿಕೇಟು ನಿರ್ದೇಶಕ

ಡಾ.ವಿನೋದ್ ಕುಲಕರ್ಣಿ ಎಂಬಾತ ಹುಬ್ಬಳ್ಳಿಯಲ್ಲಿ ಸಾಕಷ್ಟು ವರ್ಷಗಳಿಂದಲೂ ಖಾಸಗಿ ಪ್ರಾಕ್ಟೀಸ್ ನಡೆಸುತ್ತಿರುವ ವೈದ್ಯ. ಆತ ಅಲ್ಲೇ ಫುಲ್‌ಟೈಂ ಕೆಲಸ ಮಾಡುತ್ತಿದ್ದುದನ್ನು ಇಡೀ ಹುಬ್ಬಳ್ಳಿಯ ಜನ ನೋಡಿದ್ದಾರೆ. ಆದರೆ ಅದ್ಯಾವ ಮಾಯದಲ್ಲೋ ತಾನು ಹುಬ್ಬಳ್ಳಿಯ ಕಿಮ್ಸ್ ಸೇರಿದಂತೆ 3-4 ಮೆಡಿಕಲ್ ಕಾಲೇಜುಗಳಲ್ಲಿ ಫುಲ್‌ಟೈಂ ಕೆಲಸ ಮಾಡುತ್ತಿದ್ದೆ ಎಂಬ ಸರ್ಟಿಫಿಕೇಟ್‌ಗಳ ಆಧಾರದ ಮೇಲೆ ಧಾರವಾಡದ ದಿಮ್ಹಾನ್ಸ್‌ನ ನಿರ್ದೇಶಕನಾಗಿ ನೇಮಕಗೊಂಡಿದ್ದಾರೆ.

ಇದಕ್ಕೆಲ್ಲಾ ಮಂಡ್ಯದ ನಕಲಿ ವೈದ್ಯರುಗಳೇ ಸ್ಫೂರ್ತಿಯಾಗಿದ್ದು, ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುತ್ತೇನೆಂದು ಹೇಳಿದ್ದ ರಾಮದಾಸರೇ ಈಗ ಹೊಸ ನಕಲಿ ವೈದ್ಯರ ನೇಮಕಾತಿಯನ್ನೂ ಮಾಡುತ್ತಿದ್ದಾರೆ. ಕೇವಲ ಒಂದು ತಿಂಗಳ ಹಿಂದೆ ಇದೇ ರೀತಿ ಅಗತ್ಯವಾದ ಅನುಭವ ಇಲ್ಲದ, ಸುಳ್ಳು ಸರ್ಟಿಫಿಕೇಟ್ ತಂದಿರುವ ಡಾ.ರವಿಕುಮಾರ್‌ರನ್ನು ಹಾಸನ ಮೆಡಿಕಲ್ ಕಾಲೇಜಿಗೆ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ರಾಮದಾಸ್ ಅಧಿಕಾರಕ್ಕೆ ಬಂದ ಹೊಸದರಲ್ಲೇ ಡಾ.ಗಂಗಾಧರ್ ಎಂದು ಇದೇ ರೀತಿಯ ನಕಲಿ ಗಿರಾಕಿಯನ್ನು ಶಿವಮೊಗ್ಗ ಕಾಲೇಜಿಗೆ ಪ್ರಾಂಶುಪಾಲರಾಗಿ ನೇಮಕ ಮಾಡಲಾಗಿತ್ತು.

ಡಾ.ದೇವಾನಂದ್ ಎಂಬ ಬಳ್ಳಾರಿಯ ಹೊಸ ನಿರ್ದೇಶಕ ಸಹಾ ಇದೇ ಪಟ್ಟಿಗೆ ಸೇರುತ್ತಾರೆ.

ಇದನ್ನೆಲ್ಲಾ ರಾಮದಾಸ್ ಹಿಡ್ಕೊಂಡು, ವೈದ್ಯಕೀಯ ಶಿಕ್ಷಣಕ್ಕೆ ಚಿಕಿತ್ಸೆ ನೀಡುತ್ತಾರೆಯೇ?

ರಿಲಯನ್ಸ್ ಎಂಬ ಲೂಟಿಕೋರ ಸಾಮ್ರಾಜ್ಯ ಭಾಗ 2

ಪೂನಾದ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯದಲ್ಲಿ 2007ರ ನವಂಬರ್ 27ರಂದು ಕ್ರಿಮಿನಲ್ ದೂರು ಸಂಖ್ಯೆ 4134/2007 ಪ್ರಕರಣವೊಂದು ದಾಖಲಾಗಿದೆ. ಹೂಡಿಕೆದಾರರ ಬಂಡವಾಳವನ್ನು ಲಪಟಾಯಿಸಲು ಕ್ರಿಮಿನಲ್ ಒಳಸಂಚು ಮತ್ತು ವಿಶ್ವಾಸದ್ರೋಹವೆಸಗಿ ಷೇರು ಪೇಟೆಯ ವಹಿವಾಟಿನಲ್ಲಿ ತೊಡಗಿಸಿಕೊಂಡಿರುವ ಚಾಣಾಕ್ಷರಿಗೂ ಸಲೀಸಾಗಿ ಪಂಗನಾಮ ಎಳೆದ ಈ ಅವ್ಯವಹಾರ ಎಂಥವರನ್ನು ದಂಗುಬಡಿಸುತ್ತದೆ. ಈ ಬಗ್ಗೆ ರಿಲಯನ್ಸ್ ಕ್ಯಾಪಿಟಲ್ ಮತ್ತು ರಿಲಯನ್ಸ್ ಎನರ್ಜಿ ಎರಡೂ ಕಂಪನಿಗಳ ಚೇರ್ಮನ್ ಆಗಿರುವ ಅನಿಲ್ ಅಂಬಾನಿ ಹಾಗೂ ಈ ಕಂಪನಿಯ ಲೂಟಿಕೋರ ಪ್ರಭುಗಳ ಮೇಲೆ ಕೇಸು ದಾಖಲಿಸುವಷ್ಟು ಪ್ರಬುದ್ಧವಾಗಿ ಬೆಳೆದಿರುವುದು ಭಾರತಾಂಬೆಯ ಸುದೈವ. ಆದರೆ ನಮ್ಮ ಪ್ರಜಾಪ್ರಭುತ್ವ ಇಂಥ ವೈಟ್‌ಕಾಲರ್ ಅಪರಾಧಗಳನ್ನು ಶಿಕ್ಷಿಸುವ ಹಂತ ತಲುಪಲು ಇನ್ನೆಷ್ಟು ದಶಕ ಬೇಕಾಗಬಹುದು ಎಂಬುದು ಯಕ್ಷಪ್ರಶ್ನೆ.

ಅಂಬಾನಿಗಳು ತಮ್ಮ ದುರ್ಲಾಭಕ್ಕಾಗಿ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ, ಷೇರುಗಳನ್ನು ಅಪಮೌಲ್ಯಗೊಳಿಸಿ ಹೇಗೆ ದೋಚುತ್ತಾರೆಂಬುದಕ್ಕೆ ಮೇಲಿನ ಉದಾಹರಣೆ ಸಾಕ್ಷಿಯಾಗಿದೆ. ಇದು ಒತ್ತಟ್ಟಿಗಿರಲಿ.

ಈಗ ಷೇರು ಮೌಲ್ಯವನ್ನು ಯಾರಾದರೂ ಕೃತಕವಾಗಿ ಏರಿಕೆ ಮಾಡುತ್ತಾರೆ ಎಂದಿಟ್ಟುಕೊಳ್ಳಿ. ಹಾಗೆ ಗರಿಷ್ಠ ಪಕ್ಷ ಎಷ್ಟು ಪಟ್ಟು ಏರಿಕೆ ಮಾಡಲು ಸಾಧ್ಯ? 2 ಪಟ್ಟು? 3 ಪಟ್ಟು? ಊಹೂಂ... 10 ಪಟ್ಟು? ಇಲ್ಲಾ, ನಾವು ಹಾಗೆ ಊಹಿಸಲು ಸಾಧ್ಯವೇ ಇಲ್ಲ. ಅಂಬಾನಿ ತರಹದ ದೇಶೋದ್ಧಾರಕರ ಕೈಚಳಕದ ಮುಂದೆ ಹರ್ಷದ್ ಮೆಹ್ತಾ ಯಾವ ಲೆಕ್ಕಕ್ಕೂ ಇಲ್ಲ. ತಮ್ಮ ದುಷ್ಟ ಯೋಜನೆಗಳಿಗಾಗಿ ಇವರು ಷೇರುಮೌಲ್ಯವನ್ನು ಒಂದೇಕ್ಷಣದಲ್ಲಿ 1000 ಪಟ್ಟು ಹೆಚ್ಚಿಸಿಬಿಡುತ್ತಾರೆ. ಏನೇ ಆಗಲಿ, ಅವರಿಗೆ ದುರ್ಲಾಭವಷ್ಟೆ ಮುಖ್ಯ. ಈ ಕೆಳಗಿನ ಉದಾಹರಣೆ ನೋಡಿ.

ದೇಶದ ಟ್ಟಾರೆ ದೂರ ಸಂಪರ್ಕ ವ್ಯವಹಾರವನ್ನು

> "2 ಜಿ ಹಗರಣದ ನಿಜವಾದ ಫಲಾನುಭವಿಗಳನ್ನು ಸಿಬಿಐ ಪತ್ತೆ ಮಾಡಬೇಕು. ಅವರು ಕೋಟ್ಯಾಧಿಪತಿಗಳೇ ಆಗಿರಲಿ ಅಥವಾ ಫೋರ್ಬ್ಸ್ ಶ್ರೀಮಂತರ ಪಟ್ಟಿಯಲ್ಲಿರುವ ಗಣ್ಯರೇ ಆಗಿರಲಿ, ಈ ಸಂಚಿನಲ್ಲಿ ಅವರ ಪಾತ್ರವನ್ನು ಗುರುತಿಸಬೇಕು."

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕೋಟಿಗೇರಿಸಿದರು. ಒಂದೇ ಏಟಿಗೆ ಸಾವಿರ ಪಟ್ಟು ಅಧಿಕ ಮೌಲ್ಯ! ಇಷ್ಟೆಲ್ಲಾ ನಡೆದದ್ದು 2007ರ ಮಾರ್ಚ್ 1 ರಂದು. ಮರುದಿನವೇ ಅಂದರೆ ಮಾರ್ಚ್ 2 ರಂದೇ ಬೇನಾಮಿ ಸ್ವಾನ್ 2ಜಿ ಲೈಸೆನ್ಸ್ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತು. ಲೈಸೆನ್ಸ್ ಪಡೆದುಕೊಳ್ಳುವಲ್ಲಿಯೂ ಯಶಸ್ವಿಯಾಯಿತು.

ಯೋಜನೆಗಳನ್ನು ರೂಪಿಸುವುದರಲ್ಲಿ ಅವುಗಳನ್ನು ನಿಖರವಾಗಿ ಅನುಷ್ಠಾನಕ್ಕೆ ತರುವ ವಿಷಯದಲ್ಲಿ ಇಡೀ ದೇಶದಲ್ಲಿ ಅಂಬಾನಿ ಅಂಡ್ ಸನ್ಸ್‌ಗಳಿಗೆ ಸಾಟಿಯಾಗುವವರು ಯಾರೂ ಇಲ್ಲವೆಂಬ ಸತ್ಯವು ಈಗಾಗಲೇ ಜಗಜ್ಜಾಹೀರಾಗಿದೆಯಷ್ಟೆ. ಅದನ್ನು ಕೆಲವರು ಮರೆತುಬಿಡುವ ಸಾಧ್ಯತೆ ಇರುವುದರಿಂದ ಮತ್ತೊಮ್ಮೆ ನೆನಪಿಸಬೇಕಾಗಿ ಬಂತು.

ಪೆಟ್ರೋಲಿಯಂ ದೊರೆಗಳು

ಇಲ್ಲಿಗೆ ಸುಮಾರು ಒಂದು ದಶಕದ ಹಿಂದೆ "ಕಾರ್ಗಿಲ್ ಯುದ್ಧ" ನಡೆದದ್ದು ಎಲ್ಲರಿಗೂ ನೆನಪಿದೆ. ಇನ್ನೇನು ಭಾರತ-ಪಾಕಿಸ್ತಾನ ನಡುವೆ ಮತ್ತೊಂದು ದೊಡ್ಡ ಯುದ್ಧವೇ ಸಂಭವಿಸಲಿದೆಯೇನೋ ಎಂಬ ಉನ್ಮಾದವನ್ನು ದೇಶಾದ್ಯಂತ ಬಹಳ ವ್ಯವಸ್ಥಿತವಾಗಿ ಹರಡಲಾಗಿತ್ತು. ಎಲ್ಲ ರಾಜಕೀಯ ಪಕ್ಷಗಳು ಇದೇ ಉರಿಯಲ್ಲಿ ತಮ್ಮ ಬೇಳೆಬೇಯಿಸಿಕೊಳ್ಳಲು ಕಸರತ್ತು ನಡೆಸುತ್ತಿದ್ದವು. ಸೈನ್ಯದ ಸಮವಸ್ತ್ರದಲ್ಲಿದ್ದ ನಮ್ಮ ರೈತ-ಕಾರ್ಮಿಕರ ಸಾವಿರಾರು ಮಕ್ಕಳು ನಿರ್ಜನವಾದ ಕಾರ್ಗಿಲ್ ಗಡಿ ಕಾಯುವ ಕಾಯಕದಲ್ಲಿ ಪ್ರಾಣಾರ್ಪಣೆ ಮಾಡಿದರು. ಹುತಾತ್ಮ ಯೋಧರ ಶವಪೆಟ್ಟಿಗೆ ಹೆಸರಲ್ಲಿ ಹಣ



ಷೇರು ಮಾರುಕಟ್ಟೆ ಗೋಲ್‌ಮಾಲ್


ಕೆಲವು ಅಧಿಕಾರಿಗಳ ವಿರುದ್ಧ ರಿಲಯನ್ಸ್ ಕ್ಯಾಪಿಟಲ್ ಕಂಪನಿಯ ಸುಮಾರು 13 ಲಕ್ಷ ಷೇರುದಾರರ ಪರವಾಗಿ ಮತ್ತೊಬ್ಬ ಷೇರುದಾರ ವಿ.ಎಮ್.ರಾಸ್ತೆ ಎಂಬುವವರು ದಾಖಲಿಸಿದ ಈ ಕ್ರಿಮಿನಲ್ ಮೊಕದ್ದಮೆಗೆ ಸಂಬಂಧಿಸಿದ ಅಪರಾಧಗಳ ತನಿಖೆ ನಡೆಸುವಂತೆ ನ್ಯಾಯಾಲಯ ಆದೇಶಿಸಿದೆ.

ರಿಲಯನ್ಸ್ ಕ್ಯಾಪಿಟಲ್ ಎಂಬ ಹೆಸರೇ ಸೂಚಿಸುವಂತೆ ಬಂಡವಾಳ ಹೂಡಿಕೆ ಹಾಗೂ ಷೇರು ವಹಿವಾಟಿನಲ್ಲಿ ತೊಡಗಿಸಿಕೊಂಡಿರುವ ಕಂಪನಿ. ಇದು ರಿಲಯನ್ಸ್ ಎನರ್ಜಿ ಕಂಪನಿಯ ಸುಮಾರು 1.32 ಕೋಟಿ ಷೇರುಗಳನ್ನು ಹೊಂದಿತ್ತು. ಈ ಷೇರುಗಳನ್ನು 2007ರ ಮೇ ತಿಂಗಳ ಒಂದು ಶುಭ ಮುಹೂರ್ತದಲ್ಲಿ ಅಂಬಾನಿಗಳ ಒಡೆತನದ ಮತ್ತೊಂದು ಕಂಪನಿಗೆ ಪ್ರತಿ ಷೇರಿಗೆ 512.30 ರೂಪಾಯಿ ದರದಂತೆ "ಮಾರಾಟ" ಮಾಡಿಬಿಟ್ಟಿತು. ಆದರೆ ಮಾರಾಟದ ಸಮಯದಲ್ಲಿ ರಿಲಯನ್ಸ್ ಎನರ್ಜಿಯ ಪ್ರತಿ ಷೇರಿನ ಮೌಲ್ಯ ಅದರ ಮೂರು ಪಟ್ಟು ಅಂದರೆ 1662.50 ರೂಪಾಯಿ ಇತ್ತು. ಹೀಗೆ ಅಂಬಾನಿ ತನ್ನದೇ ಮಾಲಿಕತ್ವದ ಮೂರು ಕಂಪನಿಗಳ ನಡುವೆ ನಡೆಸಿದ ಈ ಗೋಲ್‌ಮಾಲ್ ದಂಧೆಯಿಂದಾಗಿ ರಿಲಯನ್ಸ್ ಕ್ಯಾಪಿಟಲ್‌ಅನ್ನು ನಂಬಿ ಹಣ ಹೂಡಿದ್ದ ಹೂಡಿಕೆದಾರರ ಸುಮಾರು 1500 ಕೋಟಿ ಹಣ ಮಂಗಮಾಯವಾಯಿತು. ಅದೇ ಮೊತ್ತ ಒಂದೇ ಏಟಿಗೆ ಅಂಬಾನಿ ಹಾಗೂ ಕುಟುಂಬದವರ ಕೈವಶವಾಗಿತ್ತು. ಇಂಥ "ಲಾಭ" ಗಳಿಸಿಕೊಟ್ಟ ಸಂಸ್ಥೆಯ ಹೆಸರು ಮತ್ತು ಅಕೌಂಟ್ ನಂಬರ್‌ಗಳು ಮಾತ್ರ ಬೇರೆಯಾಗಿದ್ದವು ಎಂಬುದಷ್ಟೆ ವ್ಯತ್ಯಾಸ.

ಸದ್ಯಕ್ಕೆ ಅಂಬಾನಿಗಳ ಮೇಲೆ ಕ್ರಿಮಿನಲ್ ಕೇಸು ದಾಖಲಾಗಿದೆ. ನಮ್ಮ ಪ್ರಜೆಗಳು ಈ 6 ದಶಕಗಳಲ್ಲಿ ತಮ್ಮ

ನಿರ್ವಹಿಸಲು ಅದನ್ನು 22 ವೃತ್ತಗಳಾಗಿ ವಿಭಾಗಿಸಲಾಗಿದೆ. ಅದರ ಪೈಕಿ 13 ವೃತ್ತಗಳಿಗೆ ಸಂಬಂಧಿಸಿದ 2 ಜಿ ಲೈಸೆನ್ಸ್ ಪಡೆದುಕೊಳ್ಳಲು ರಿಲಯನ್ಸ್ ಕಂಪನಿಯವರು ಸ್ವಾನ್ ಟೆಲಿಕಾಮ್ ಎಂಬ ಖೊಟ್ಟಿ ಕಂಪನಿಯೊಂದನ್ನು ಪ್ರಾರಂಭಿಸಿದ್ದನ್ನು ಹಿಂದಿನ ಸಂಚಿಕೆಯಲ್ಲಿ ನೋಡಿದ್ದೇವೆ. ಈಗಿರುವ ಸರ್ಕಾರಿ ಮಾನದಂಡಗಳ ಪ್ರಕಾರ ಲೈಸೆನ್ಸ್‌ಗೆ ಅರ್ಹತೆ ಗಳಿಸಿಕೊಳ್ಳಬೇಕಾದರೆ ಆ ಕಂಪನಿಗೆ ಕನಿಷ್ಠ 103 ಕೋಟಿ ರೂಪಾಯಿಗಳ ಈಕ್ವಿಟಿ ಬಂಡವಾಳ ಹಾಗೂ 1030 ಕೋಟಿಗಳಷ್ಟು ಒಟ್ಟಾರೆ ಮೌಲ್ಯವನ್ನು ಹೊಂದಿರಲೇಬೇಕು. ಅಲ್ಲದೆ ಈಗಾಗಲೇ ಟೆಲಿಕಾಮ್ ಕ್ಷೇತ್ರದಲ್ಲಿರುವ ಯಾವುದೇ ಕಂಪನಿಯು ಲೈಸೆನ್ಸ್ ಪಡೆದುಕೊಳ್ಳುವ ಕಂಪನಿಯಲ್ಲಿ ಶೇಕಡ 10 ಕ್ಕಿಂತಲೂ ಹೆಚ್ಚಿನ ಶೇರುಗಳನ್ನು ಹೊಂದಿರಬಾರದು. ಆದರೆ ಯಾವುದೇ ಔದ್ಯಮಿಕ ಹಿನ್ನೆಲೆಯಿಲ್ಲದ ಆಗತಾನೆ ಹುಟ್ಟಿದ್ದ ಡೂಪ್ಲಿಕೇಟ್ ಸ್ವಾನ್‌ಗೆ ಅಷ್ಟು ದೊಡ್ಡ ಮೊತ್ತದ ಹಣ ಹರಿಸುವುದು ಹೇಗೆ? ಬೇರೆಯವರಾಗಿದ್ದರೆ ಸಾಧ್ಯವೇ ಇಲ್ಲ ಎಂದು ಕೈಚೆಲ್ಲಿ ಬಿಡುತ್ತಿದ್ದರು. ಆದರೆ ಎಷ್ಟೇ ಆಗಲಿ ಅಂಬಾನಿ ಮಕ್ಕಳಲ್ಲವೇ? ಎಂಥ ಸಂದಿಗ್ಧ ಸನ್ನಿವೇಶದಲ್ಲೂ ಎದೆಗುಂದದೆ ಮುನ್ನುಗ್ಗುವ ಧೀರರೆಂದು ನಮ್ಮ ಮಾಧ್ಯಮಗಳು ಸುಮ್ಮಸುಮ್ಮನೆ ಹಾಡಿ ಹೊಗಳುತ್ತಿವೆ ಎಂದುಕೊಂಡಿರಾ? ಅನಿಲ್ ರೂಪಿಸಿದ ಒಳಸಂಚು ಹೇಗಿದೆ ನೋಡಿ.

ಕೇವಲ ಒಂದೇ ಒಂದು ಲಕ್ಷ ಮೂಲ ಬಂಡವಾಳದಿಂದ ಶುರುವಾದ ಬೇನಾಮಿ ಸ್ವಾನ್‌ನ ಷೇರುಗಳ ಮೊತ್ತವನ್ನು 110 ಕೋಟಿಗಳಿಗೇರಿಸಿ, ಅವುಗಳನ್ನು ತಲಾ 10 ರೂ. ಮೌಲ್ಯದ 10.9 ಕೋಟಿ ಈಕ್ವಿಟಿ ಷೇರುಗಳು (ಒಟ್ಟು ಮೊತ್ತ 109 ಕೋಟಿ) ಹಾಗೂ ತಲಾ 1 ರೂ. ಮೌಲ್ಯದ 99.2 ಲಕ್ಷ ಷೇರುಗಳನ್ನಾಗಿ (ಒಟ್ಟು 99.2 ಲಕ್ಷ ರೂ.) ವಿಭಜಿಸಲಾಯಿತು. ಸರ್ಕಾರದ ನಿಯಮದ ಪ್ರಕಾರ ಅನಿಲ್ ಅಂಬಾನಿಯವರು ಟೈಗರ್ ಎಂಬ ಮತ್ತೊಂದು ಬೇನಾಮಿ ಕಂಪನಿಯ ಮೂಲಕ ಮತ್ತು ತನ್ನ ಮಾಲಿಕತ್ವದ ರಿಲಯನ್ಸ್ ಟೆಲಿಕಾಮ್ ಮೂಲಕ 109 ಕೋಟಿಗಳನ್ನು ಹೂಡಿ ಈಕ್ವಿಟಿ ಷೇರುಗಳನ್ನು "ಪಡೆದುಕೊಂಡರು". ಆದರೆ ಬೇನಾಮಿ ಸ್ವಾನ್ ಅರ್ಹತೆ ಪಡೆದುಕೊಳ್ಳಬೇಕಾದರೆ ಇನ್ನೂ ಸುಮಾರು 900 ಕೋಟಿಗಳ ಮೌಲ್ಯ ಗಳಿಸಿಕೊಳ್ಳಬೇಕಲ್ಲ? ಅದಕ್ಕಾಗಿ ಸ್ವಾನ್‌ನ ಉಳಿದ 1 ರೂಪಾಯಿ ಮೌಲ್ಯದ 99.2 ಲಕ್ಷ ಷೇರುಗಳನ್ನು ತಲಾ 1000 ರೂಪಾಯಿ ಬೆಲೆಗೆ "ಕೊಂಡು" ಸ್ವಾನ್‌ನ ಮೌಲ್ಯವನ್ನು ಕ್ಷಣಾರ್ಧದಲ್ಲಿ 1000


ಜಾಮ್‌ನಗರ ರಿಫೈನರಿಯಲ್ಲಿ...

ಬಾಚುವ ಹೀನಕೃತ್ಯದಲ್ಲಿ ಹಲವು ಹಿರಿಯ ಸೇನಾಧಿಕಾರಿಗಳು ನಿರತರಾಗಿದ್ದರು. ಆ ಸಂದರ್ಭದಲ್ಲಿ ನಮ್ಮ ಅಂಬಾನಿಗಳು ಏನು ಮಾಡುತ್ತಿದ್ದರು? ಇದೇನು ಹುಚ್ಚು ಪ್ರಶ್ನೆ? ಅವರು ಏನಾದರೂ ಮಾಡಿಕೊಳ್ಳಲಿ ಬಿಡಿ ಎನ್ನಬೇಡಿ. ಇಲ್ಲಿ ಮತ್ತೊಂದು ರೀತಿಯ ಕರಾಮತ್ತು ಅಡಗಿದೆ.

ಇಡೀ ದೇಶಾದ್ಯಂತ ಪಾಕಿಸ್ತಾನದ ವಿರುದ್ಧ ಆಕ್ರೋಶ ಭುಗಿಲೆದ್ದಿದ್ದ ಅದೇ ಸಂದರ್ಭದಲ್ಲಿ ರಿಲಯನ್ಸ್ ಕಂಪನಿ ಪಾಕಿಸ್ತಾನದ ಸರ್ಕಾರದೊಂದಿಗೆ ತೆರೆಮರೆಯಲ್ಲಿ ಉನ್ನತಮಟ್ಟದ ಚರ್ಚೆ ನಡೆಸುತ್ತಿತ್ತು. ಶಾಂತಿ ಮಾತುಕತೆ ಎಂದುಕೊಳ್ಳಬೇಡಿ, ಇದಕ್ಕೆ ಅಂಥಾ ಯಾವ ಸಂಬಂಧವೂ ಇರಲಿಲ್ಲ. ಇದು ಪ್ಯೂರ್ ಬ್ಯುಸಿನೆಸ್ ಡೀಲ್ ಆಗಿತ್ತು.

ಕಾರ್ಗಿಲ್ ಗಡಿಯಲ್ಲಿ ಗುಂಡಿನ ಸದ್ದು ನಿಲ್ಲುತ್ತಿದ್ದಂತೆಯೇ ಗುಜರಾತಿನ ಕರಾವಳಿ ಪಟ್ಟಣವಾದ ಜಾಮ್‌ನಗರದಲ್ಲಿ ಜಗತ್ತಿನಲ್ಲೇ ದೊಡ್ಡದಾದ ಪೆಟ್ರೋಲಿಯಂ ರಿಫೈನರಿಯನ್ನು ಅತಿಶೀಘ್ರದಲ್ಲೆ ಸ್ಥಾಪಿಸುವುದಾಗಿ ರಿಲಯನ್ಸ್ ಕಂಪನಿ ಘೋಷಿಸಿತು. ಅದಕ್ಕೆ ಬೇಕಾದ ಕಚ್ಚಾ ತೈಲವನ್ನು ಪೈಪ್‌ಲೈನ್‌ಗಳ ಮೂಲಕ ಪಾಕಿಸ್ತಾನವನ್ನು ಹಾದು ಗುಜರಾತ್ ತಲುಪುವ ಯೋಜನೆಗೆ ಅಸ್ತಿಭಾರ ಹಾಕಲಾಯಿತು. ಯುದ್ಧದ ಸಂದರ್ಭದಲ್ಲೂ ಪಾಕಿಸ್ತಾನದೊಂದಿಗೆ ನಡೆಸಿದ ಬ್ಯಸಿನೆಸ್ ಡೀಲ್ ಇದು.


ರಿಲಯನ್ಸ್‌ನ ಪ್ರಾಣಿ ಪ್ರೀತಿ

ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜಕೀಯ ಮುಖಂಡರು ಹಾಗೂ ಭ್ರಷ್ಟ ಅಧಿಕಾರಿಗಳು ಕ್ರೋಢೀಕರಿಸಿರುವ ಕಪ್ಪುಹಣ ಹಾಗೂ ನಾಯಿನರಿಗಳ ಬೇನಾಮಿ ಹೆಸರಿನಲ್ಲಿ ಆಸ್ತಿ ಪಾಸ್ತಿ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಆದರೆ ಜಗತ್ತಿನಾದ್ಯಂತ ಖ್ಯಾತಿ ಗಳಿಸಿದ ರಿಲಯನ್ಸ್ ಉದ್ಯಮ ಸಂಸ್ಥೆ ಅಂತಹುದೆ ಕೀಳುಮಟ್ಟದ ಕೃತ್ಯದಲ್ಲಿ ತೊಡಗಿದೆಯೆಂದರೆ ಬಹಳ ಮಂದಿ ನಂಬಲಿಕ್ಕಿಲ್ಲ. ಆದರೆ ಏನು ಮಾಡುವುದು? ಸತ್ಯ ಇಷ್ಟೊಂದು ಕಟುವಾಗಿದೆ.

ತಮ್ಮ ಅವ್ಯವಹಾರಗಳನ್ನು ಮರೆಮಾಚಲೆಂದು ರಿಲಯನ್ಸ್ ಕೂಟ ಪ್ರಾಣಿ ಪಕ್ಷಿಗಳ ಹೆಸರಿನಲ್ಲಿ ಬೇನಾಮಿ ಕಂಪನಿಗಳನ್ನು ಸೃಷ್ಟಿಸುವ ಹೀನಚಾಳಿಯನ್ನು ರೂಢಿಸಿಕೊಂಡಿದೆ. ಸ್ವಾನ್ (ಹಂಸ), ಟೈಗರ್ (ಹುಲಿ), ಪ್ಯಾರಟ್ (ಗಿಳಿ), ಜೀಬ್ರಾ (ಜೀಸರಗತ್ತೆ), ಜಿರಾಫೆ, ಪೆಂಗ್ವಿನ್ ಮುಂತಾದ ಹೆಸರುಗಳಲ್ಲಿ ತನ್ನದೇ ಬೇನಾಮಿ ಕಂಪನಿಗಳನ್ನು ಹುಟ್ಟುಹಾಕಿದೆ. 2006ರ ಮಾರ್ಚ್‌ನಿಂದ ಜುಲೈ ನಡುವೆ ಹುಟ್ಟಿಕೊಂಡ ಈ ಕೆಳಗಿನ 6 ಕಂಪನಿಗಳನ್ನು ನೋಡಿ.

1) ಸ್ವಾನ್ ಇನ್ಫ್ರೋನೆಟ್ (ನಂತರ ಪ್ಯಾರಟ್ ಕಾಂಟೆಲಿಸಲ್ಟೆಂಟ್ಸ್ ಎಂದು ಮರುನಾಮಕರಣ ಮಾಡಲಾಗಿದೆ)
2) ಪೆಂಗ್ವಿನ್ ಇಂಟರ್‌ನ್ಯಾಷನಲ್ ವೆಂಚರ್ಸ್ ಪ್ರೈ ಲಿ.(ನಂತರ ರಿಲಯನ್ಸ್ ಯುಟಿಲಿಟಿ ಇಂಜಿನಿಯರ್ಸ್ ಎಂದು ಮರುನಾಮಕರಣ ಮಾಡಲಾಗಿದೆ.)
3) ಸ್ವಾನ್ ಅಡ್ವೈಸರಿ ಸರ್ವೀಸಸ್ ಪ್ರೈ ಲಿ.(ನಂತರ ಜೀಬ್ರಾ ಕನ್ಸಲ್ಟೆಂಟ್ಸ್ ಪ್ರೈ ಲಿ. ಎಂದು ಹೆಸರು ಬದಲಾಯಿಸಲಾಗಿದೆ)
4) ಜಿರಾಫೆ ಕನ್ಸಲ್ಟೆನ್ಸಿ ಪ್ರೈ ಲಿ.(ನಂತರ ಸಿದ್ಧಾರ್ಥ ಕನ್ಸಲ್ಟನ್ಸಿ ಎಂದು ಹೆಸರು ಬದಲಾಯಿಸಲಾಗಿದೆ)
5) ಟೈಗರ್ ಟ್ರೇಡರ್ಸ್
6) ಸ್ವಾನ್ ಕ್ಯಾಪಿಟಲ್ ಪ್ರೈ ಲಿ. (ನಂತರ 2 ಜಿ ಉದ್ದೇಶಕ್ಕಾಗಿ ಸ್ವಾನ್ ಟೆಲಿಕಾಮ್ ಎಂದು ಬದಲಾಯಿಸಲಾಯಿತು.)

ಈ ಎಲ್ಲಾ ಕಂಪನಿಗಳೂ ಪ್ರಾಥಮಿಕ ಬಂಡವಾಳ ತಲಾ ಒಂದು ಲಕ್ಷದಿಂದ ಪ್ರಾರಂಭವಾಗಿದೆ. ಆ ಒಂದು ಲಕ್ಷವೂ ಕೂಡ ರಿಲಯನ್ಸ್ ಕಂಪನಿಯ ಅಧಿಕಾರಿಗಳ ಅಕೌಂಟ್‌ನಿಂದಲೇ ಜಮಾ ಆಗಿದೆ. ಈ ಎಲ್ಲಾ ಕಂಪನಿಗಳೂ ಅನಿಲ್ ಅಂಬಾನಿ ಗ್ರೂಪ್‌ನ ಕಾರ್ಪೋರೇಟ್ ಆಫೀಸಿನ ವಿಳಾಸವನ್ನೇ ಹೊಂದಿವೆ.



ಈ ಕಂಪನಿಗಳು ತಮ್ಮ ಷೇರುಗಳ ಒಡೆತನವನ್ನು ಬದಲಾಯಿಸಿಕೊಂಡಿದ್ದು ಬಿಟ್ಟರೆ ಬೇರೆ ಹೇಳಿಕೊಳ್ಳುವಂತಹ ಯಾವ ವ್ಯವಹಾರದಲ್ಲೂ ತೊಡಗಿಲ್ಲ. ಷೇರು ವಿನಿಮಯದ ಮೂಲಕ ಈ ಕಂಪನಿಗಳ ಒಡೆತನ ಹೇಗೆ ಬದಲಾಗಿದೆ ನೋಡಿ. ಪ್ಯಾರಟ್, ಜೀಬ್ರಾ ಮತ್ತು ಟೈಗರ್‌ಗಳ ಒಡೆತನ ಯಾರ ಕೈಯಲ್ಲಿದೆ ಎಂಬ ಗಿಮ್ಮಿಕ್ಕು ನೋಡಿ.

ಜೀಬ್ರಾದ ಮೇಲೆ ಪ್ಯಾರಟ್ ಮತ್ತು ಟೈಗರ್ ಜಂಟಿ ಒಡೆತನ, ಪ್ಯಾರಟ್ ಮೇಲೆ ಜೀಬ್ರಾ ಮತ್ತು ಟೈಗರ್ ಜಂಟಿ ಒಡೆತನ, ಟೈಗರ್ ಮೇಲೆ ಪ್ಯಾರಟ್ ಮತ್ತು ಜೀಬ್ರಾ ಜಂಟಿ ಒಡೆತನ. ಇದೇನು ಹುಡುಗಾಟ ಅಂತಾ ಕೇಳ್ತೀರಾ? ಕ್ಷಮಿಸಿ. ಇದೆಲ್ಲಾ ಕಂಪನಿಗಳ ಮೂಲವನ್ನು ಮರೆಮಾಚಿ ಸರ್ಕಾರದ ಹಾಗೂ ಜನರ ಕಣ್ಣಿಗೆ ಮಣ್ಣೆರಚಲಿಕ್ಕಾಗಿ ಮಾತ್ರ! ಅಂಬಾನಿಗಳ ಇಂಥಾ ಐನಾತಿ ಲೆಕ್ಕಾಚಾರವನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ ಸುಡೊಕು ಬಿಡಿಸುವುದು ಸುಲಭ ತಾನೇ? "ವಿಜನರಿ", "ದೂರದರ್ಶಿ", "ಪಥ ಪ್ರವರ್ತಕ" ಎಂಬ ಬಿರುದುಗಳು ಪುಗಸಟ್ಟೆ ಸಿಕ್ಕಿದ್ದಲ್ಲವೇ ಅಲ್ಲ.

ಾದನಂತರ ಯುದ್ಧೋನ್ಮಾದವನ್ನು ಕೆರಳಿಸುತ್ತಿದ್ದ ಆಗ
ವಲಿಯ ಗದ್ದುಗೆ ಏರಿದ್ದ ಬಿಜೆಪಿಯ ಕಣ್ಮಣಿ
ಜಪೇಯಿಯವರೆ ಸ್ವತಃ ಶಾಂತಿಯ ಹೆಸರಿನಲ್ಲಿ
ಹೋರ್‌ಗೆ ಬಸ್ ಪ್ರಯಾಣ ಕೈಗೊಂಡಿದ್ದು ಈಗ
ಿಹಾಸ. ಇದರಿಂದ ದೇಶದ ರಾಜಕೀಯ
ಿನಿರೂಪಣೆಯ ದಿಕ್ಕನ್ನು ನಿರ್ದೇಶಿಸುವ ಶಕ್ತಿಗಳು
ಥವರು ಎಂಬುದು ತಿಳಿದುಬರುತ್ತೆ. ಗುಜರಾತ್‌ನ
ಮ್‌ನಗರದಲ್ಲಿ ರಿಲಯನ್ಸ್ ರಿಫೈನರಿ (ಆರಂಭದಲ್ಲಿ
ೋಷಿಸಿದ ಪ್ರಕಾರ 14,250 ಕೋಟಿ ವೆಚ್ಚ) ಗಟ್ಟಿಯಾಗಿ
ನ್ನೂರಿ ನಿಲ್ಲುತ್ತಿದೆ. ಈಗ ಭಾರತ ಉಪಖಂಡದಲ್ಲಿ
ಿ ನೆಲೆಸುವುದು ಎಲ್ಲರಿಗಿಂತ ಹೆಚ್ಚಾಗಿ ಅಂಬಾನಿಗಳಿಗೆ
ೂರು ಆಗತ್ಯವಿದೆ. ಅವರು ದೇಶಕ್ಕೆ ಸಲ್ಲಿಸುತ್ತಿರುವ
ಥ ಪರೋಕ್ಷ ಸೇವೆಗಾಗಿ ನಾವು ಅವರನ್ನು
ನಂದಿಸೋಣ.

ಕೃಷ್ಣ-ಗೋದಾವರಿ ಹಗರಣ


ಆಂಧ್ರ ಪ್ರದೇಶದ ಕೃಷ್ಣಾ-ಗೋದಾವರಿ ನದಿ ಪಾತ್ರದಲ್ಲಿ
ಾರವಾದ ತೈಲ ನಿಕ್ಷೇಪಗಳಿರುವುದನ್ನು ವಿಜ್ಞಾನಿಗಳು ಪತ್ತೆ
ಚ್ಚಿದರು. ದೇಶದ ತೈಲ ಕೊರತೆ ಬಹುಮಟ್ಟಿಗೆ
ಿಹಾರವಾಗುತ್ತದೆ ಎಂದೇ ಭಾವಿಸಲಾಗಿತ್ತು. ಆದರೆ
ತ್ಸದ್ಧಿ ಅರ್ಥಶಾಸ್ತ್ರ ನಿಪುಣ ಶುದ್ಧಹಸ್ತ ಇತ್ಯಾದಿ
ುದುಗಳನ್ನು ಹೊಂದಿರುವ ನಮ್ಮ ಘನ ಪ್ರಧಾನಮಂತ್ರಿ
ನಮೋಹನ ಸಿಂಗ್ ಸರ್ಕಾರ ಪೆಟ್ರೋಲ್ ಉತ್ಪಾದನೆಗೆ
ೋಜನೆಗಳನ್ನು ರೂಪಿಸುವ ಗೋಜಿಗೆ ಹೋಗದೆ ನಮ್ಮ
ಸರ್ಗಿಕ ಸಂಪತ್ತನ್ನು ಮುಖೇಶ್ ಅಂಬಾನಿ ಒಡೆತನದ
ಯನ್ಸ್ ಇಂಡಸ್ಟ್ರೀಸ್‌ಗೆ ಅಡ್ಡಾದುಡ್ಡಿ ಬೆಲೆಗೆ ಗುತ್ತಿಗೆ
ಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ
ಟ್ರೋಲಿಯಂ ಸಚಿವ ಮುರಳಿ ದೇವ್ರಾ
ಬಾನಿಗಳೊಂದಿಗೆ ಶಾಮೀಲಾಗಿರುವ ಬಗ್ಗೆ ವ್ಯಾಪಕ
ೆಗಳು ಕೇಳಿಬಂದಿವೆ.

"ಪೆಟ್ರೋಲಿಯಮ್ ಸಚಿವಾಲಯವು ರಿಲಯನ್ಸ್
ಡಸ್ಟ್ರೀಸ್ ಜೊತೆ ಶಾಮೀಲಾಗಿ ದೇಶದ ಬೊಕ್ಕಸಕ್ಕೆ ಭಾರೀ
ವುಂಟುಮಾಡಿದ್ದಾರೆ" ಎಂದು ಈ ದೇಶದ ಮತ್ತೊಬ್ಬ
ಉದ್ಯಮಿ ನೇರವಾಗಿ ಆರೋಪಿಸಿದ್ದರು. ಅಂಥಾ
ಪ್ರೇಮಿ ಉದ್ಯಮಿ ಯಾರಿರಬಹುದು ಎಂಬ ಕುತೂಹಲ
ಾಡುವುದು ಸಹಜ. ಆದರೆ ಆ ಉದ್ಯಮಿ ಬೇರೆ ಯಾರೂ
, ಮುಖೇಶ್ ಅಂಬಾನಿಯವರ ಅನುಜ ಸ್ವತಃ ಅನಿಲ್
ಂ ಬಾ ನಿ ಯ ವ ರೇ.
ಯರ್ಯವಾಗುತ್ತಿದೆಯಲ್ಲವೇ?
ಖೇಶನ ಲೂಟಿಯ ಪ್ರಮಾಣವನ್ನು
ತು ಸ್ವಂತ ತಮ್ಮನಿಗೇ
ಸಲಾಗಲಿಲ್ಲವೆಂದರೆ ಪರಿಸ್ಥಿತಿ ಯಾವ
ತ ಮುಟ್ಟಿರಬಹುದು. ಆದರ ಕೆಲ
ರಗಳನ್ನು ನೋಡೋಣ.


ಈ ಅವ್ಯವಹಾರಗಳನ್ನು ನೋಡಿ
ಹಾರಿದ ಮಹಾ
ಪರಿಶೋಧಕರು ತನಿಖೆ
ೊಂಡರು. ಆ ತನಿಖೆಯಲ್ಲಿ
ರಬಿದ್ದ ಅಂಶಗಳು ಮುಖೇಶ್
ಾನಿಯ ಹಗಲು ದರೋಡೆಯನ್ನು
ೂ 'ಶುದ್ಧಹಸ್ತ'ದ ಪ್ರಧಾನಿಯ
ವಾಬ್ದಾರಿ ಕಿವುಡುತನವನ್ನು
ಜಾಹೀರು ಮಾಡುತ್ತವೆ. ಉತ್ಪಾದನಾ
ಪದದ ಉಲ್ಲಂಘನೆ ಒಂದರಿಂದಲೇ
ಬೊಕ್ಕಸಕ್ಕೆ 584 ಕೋಟಿ
ಪಾಯಿಗಳ ನಷ್ಟವಾಗಿದೆಯೆಂದು
ಿ ತನಿಖಾ ವರದಿ ಹೇಳುತ್ತದೆ.
ಕ್ಕಿಂತಲೂ ಮುಖ್ಯವಾದ ಮೋಸ
ಗಿರುವುದು ರಿಲಯನ್ಸ್‌ನ ಬಂಡವಾಳ
ಡಿಕೆಯ ಲೆಕ್ಕವನ್ನು 3-4 ಪಟ್ಟು
ಮಾಡಿ ತೋರಿಸಿರುವುದರಲ್ಲಿ.
4 ರಲ್ಲಿ 2.4 ಬಿಲಿಯನ್ ಡಾಲರ್
ಮಾರು 12000 ಕೋಟಿ ರೂಪಾಯಿ) ಆಗಿದ್ದ
ನ್ನು 2006 ಕ್ಕೆ ಅಂದರೆ ಕೇವಲ ಎರಡೇ ವರ್ಷದಲ್ಲಿ
ಬಿಲಿಯನ್ ಡಾಲರ್ (ಸುಮಾರು 44000
ಟಿ)ಗಳಿಗೆ ಏರಿಸಿ ಸುಳ್ಳುಲೆಕ್ಕ ತೋರಿಸಲಾಗಿದೆ. ಈ
ಲಕ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಿದ್ದ ಸಾವಿರಾರು
ಟಿಗಳಷ್ಟು ಭಾರೀ ಮೊತ್ತವನ್ನು ಮುಖೇಶ್ ಅಂಬಾನಿ
ಂ ಮಾಡಿದ್ದಾನೆ. ಹೇಗೆಂದರೆ ಕರಾರಿನ ಪ್ರಕಾರ
ರಕ್ಕೆ ಸಲ್ಲಿಸಬೇಕಿದ್ದ ಪೆಟ್ರೋಲಿಯಮ್
ದನೆಯಿಂದ ಬರುವ ಲಾಭದ ನಿರ್ದಿಷ್ಟ ಭಾಗವನ್ನು
ಸುಳ್ಳುಲೆಕ್ಕಗಳ ಮೂಲಕ ಲಪಟಾಯಿಸಲಾಗಿದೆ.
ೊಂದು ಕಡೆ ಈ ಸುಳ್ಳುಲೆಕ್ಕದ ಮೂಲಕ ಹೆಚ್ಚಿನ
ಬಂಡವಾಳವನ್ನು ಕ್ರೋಢೀಕರಿಸಿ ಷೇರು
ಕಟ್ಟೆಯನ್ನು ವಂಚಿಸಲಾಗಿದೆ. ಅದೇ ಸಂದರ್ಭದಲ್ಲಿ
ವರ್ಷಗಳಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಮೊತ್ತ
ಾರು 40,000 ಕೋಟಿಗಳಷ್ಟು ಏರಿಕೆಯಾಯಿತು.
ದನ್ನು ವಿವರಿಸಲು ನಮ್ಮ ಕನ್ನಡ ಶಬ್ದಕೋಶದಲ್ಲಿ

ಬಿಜೆಪಿ ಮತ್ತು ಅಂಬಾನಿಗಳು

ರಿಲಯನ್ಸ್ ಮತ್ತು ಅಂಬಾನಿಗಳು ರಾಷ್ಟ್ರದ ಸಂಪನ್ಮೂಲಗಳನ್ನು, ಜನರ ಬೆವರಿನ ಹಣವನ್ನು ಲೂಟಿ ಹೊಡೆದು ಈ ಮಟ್ಟಕ್ಕೆ ಬೆಳೆದದ್ದೇ ಭ್ರಷ್ಟ ಕಾಂಗ್ರೆಸ್‌ನೊಂದಿಗೆ ಅವರಿಗಿದ್ದ ಒಡನಾಟದಿಂದ. ಆದರೂ ದೇಶದಲ್ಲಿ ಬಿಜೆಪಿ ಪರ್ವ ಪ್ರಾರಂಭವಾದ ಮೇಲೆ ಅಂಬಾನಿಗಳ ಸಂಪತ್ತು ಯಾವುದೇ ಅಡೆತಡೆಯಿಲ್ಲದೆ ಅಗಾಧವಾಗಿ ಹೆಚ್ಚುತ್ತಾ ಹೋಯಿತು. "ದೇಶಭಕ್ತ"ರ ಪಕ್ಷದ ಅಗ್ರಗಾಮಿ ನಾಯಕರಾದ ಎಲ್.ಕೆ. ಅಡ್ವಾಣಿ, ನರೇಂದ್ರ ಮೋದಿ, ವಾಜಪೇಯಿಗಳೆಲ್ಲರೂ ಅಂಬಾನಿಗೆ ಗಳಸ್ಯಕಂಠಸ್ಯ ಎಂಬಂತೆ ಪರಮ ಆಪ್ತರು.



ಧೀರೂಭಾಯಿ ತೀರಿಕೊಂಡಾಗ ಉಪಪ್ರಧಾನಿಯಾಗಿದ್ದ ಅಡ್ವಾಣಿಯವರು ದೇಶದ ಇನ್ನೊಂದು ಮೂಲೆಯಲ್ಲಿ ಅಧಿಕೃತ ಪ್ರವಾಸದಲ್ಲಿದ್ದರು. ಸುದ್ದಿ ತಿಳಿದದ್ದೇ ತಡ ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಕೂಡಲೆ ಮುಂಬೈಗೆ ಧಾವಿಸಿದರು. ಅವರೊಂದಿಗೆ ನರೇಂದ್ರ ಮೋದಿ, ಕೇಶುಭಾಯಿ ಪಟೇಲ್ ಮುಂತಾದ ಗಣ್ಯರು ಕೂಡಿಕೊಂಡು ಮುಂಬೈನ ಬ್ರೀಚ್ ಕ್ಯಾಂಡಿ ಹಾಸ್ಪಿಟಲ್‌ನಲ್ಲಿ ಅಂಬಾನಿಯ ಅಂತಿಮ ದರ್ಶನ ಪಡೆದು ಪುನೀತರಾದರು. ಎಲ್ಲ ರಾಜಕೀಯ ಪಕ್ಷಗಳ




ಮೊದಲಸಾಲಿನ ನಾಯಕರೆಲ್ಲರೂ ತಪ್ಪದೇ ಹಾಜರಾದರು. ಈ ಸಂದರ್ಭದಲ್ಲಿ ಅಡ್ವಾಣಿ ಉದುರಿಸಿದ ಆಣಿಮುತ್ತುಗಳು ಹೀಗಿವೆ: "ಅಂಬಾನಿಯವರ ಸಾಧನೆಯಿಂದಾಗಿ ಈ ರಾಷ್ಟ್ರ ಬಹಳ ಅಭಿವೃದ್ಧಿಯಾಗಿದೆ. ಅದರಲ್ಲೂ ಗುಜರಾತ್ ರಾಜ್ಯ ವೈಭವೋಪೇತವಾಗಿ ಕಂಗೊಳಿಸುತ್ತಿದೆ. ಇಂಥಾ ಧೀರನ ಸಾವಿನಿಂದಾಗಿ ನನಗೆ ಅತೀವ ದುಃಖವಾಗಿದೆ". ಪ್ರಧಾನಿಯಾಗಿದ್ದ ಅಜಾತಶತ್ರು ವಾಜಪೇಯಿಯವರ ಮಾತನ್ನು ಗಮನಿಸಿ: "ಇಂದು ನಮ್ಮ ರಾಷ್ಟ್ರ ಸದಾ ಸ್ಫೂರ್ತಿಯ ಚಿಲುಮೆಯಾಗಿದ್ದ, ದೇಶವನ್ನು ಉನ್ನತಿಗೇರಿಸಿದ ಅಪ್ರತಿಮ ಉದ್ಯಮಿಯೊಬ್ಬರನ್ನು ಕಳೆದುಕೊಂಡಿದೆ. ಇದು ರಾಷ್ಟ್ರಕ್ಕೆ ತುಂಬಲಾರದ ನಷ್ಟ." ವಾಸ್ತವದಲ್ಲಿ ಇಂಥಾ ನಂಟೇ ಇವರ ರಾಷ್ಟ್ರ ಭಕ್ತಿಯ ಒಳಗುಟ್ಟು.

ದೇಶದ್ರೋಹ, ಹಗಲುದರೋಡೆ ಇತ್ಯಾದಿ ಶಬ್ದಗಳಷ್ಟೆ ಸಿಗುತ್ತವೆ. (ಕೆಳಗಿನ ನಕ್ಷೆ ನೋಡಿ.)

ಅಂಬಾರಿ ಏರಿ ಮೆರೆಯುತ್ತಿರುವ ಅಂಬಾನಿಗಳು

ತನ್ನ ಜೀವಮಾನದಲ್ಲೊಂದು ಸ್ವಂತ ಸೂರು ಮಾಡಿಕೊಳ್ಳಬೇಕೆಂದು ಪ್ರತಿಯೊಬ್ಬರೂ ಹಂಬಲಿಸುವುದು ಮನುಷ್ಯ ಸಹಜವಾದ ಬಯಕೆ. ಹಾಗೆಯೇ ಮುಖೇಶ್ ಅಂಬಾನಿ ಕೂಡಾ ತನ್ನ ಕುಟುಂಬದ ನಿವಾಸಕ್ಕಾಗಿ ಮುಂಬೈನಲ್ಲಿ ಮನೆಯೊಂದನ್ನು ನಿರ್ಮಿಸಿದ್ದಾನೆ. ಜಗತ್ತಿನ ಯಾವುದೇ ಅರಮನೆಯನ್ನು ನಾಚಿಸುವಂತಿರುವ ಆ ನವ ತಾಜ್‌ಮಹಲ್‌ನ ಬಗ್ಗೆ 'ಮನೆ'ಯೆಂಬ ಯಕಶ್ಚಿತ್ ಪದಬಳಕೆ ಮಾಡಿದ್ದಕ್ಕೆ ಕ್ಷಮೆ ಇರಲಿ. ಅದು ಅಂತಿಂಥಾ ಮಹಲ್ ಅಲ್ಲ, ಒಟ್ಟು 27 ಅಂತಸ್ತುಗಳ ಈ ಕಟ್ಟಡದ ಒಳವಿಸ್ತೀರ್ಣ 4 ಲಕ್ಷ ಚದರ ಅಡಿಗಳು. ಎತ್ತರ ಬರೋಬ್ಬರಿ 173 ಮೀಟರ್ ಅಂದರೆ ಸುಮಾರು 570 ಅಡಿಗಳು. ಇದರೊಳಗೆ ಒಂದು ಸ್ವಿಮಿಂಗ್‌ಪೂಲ್, 50 ಆಸನಗಳ ಒಂದು ಸಿನೆಮಾ ಥಿಯೇಟರ್, ಹ್ಯಾಂಗಿಂಗ್ ಗಾರ್ಡನ್, ಮುಂತಾದ ವ್ಯವಸ್ಥೆ ಇದೆ. ನೆಲ ಅಂತಸ್ತಿನಲ್ಲಿ 160 ವಾಹನಗಳ ನಿಲುಗಡೆ ಸೌಲಭ್ಯವಿದ್ದರೆ ಕಟ್ಟಡದ ಮೇಲುಛಾವಣಿಯ ಮೇಲೆ 3 ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಅಂಬಾನಿಗಳು ಈ ಮಹಲಿಗೆ 'ಆಂಟಲಿಯಾ' ಎಂಬ ಸುಂದರ ದ್ವೀಪದ ಹೆಸರನ್ನು ಇಟ್ಟಿದ್ದಾರೆ.



ಈ ಕಟ್ಟಡದಲ್ಲಿ ವಾಸಿಸುವವರು ಮುಖೇಶ್ ದಂಪತಿಗಳು, ಮೂರುಜನ ಮಕ್ಕಳು ಹಾಗು ಆತನ ಮುದಿತಾಯಿಯನ್ನೂ ಲೆಕ್ಕ ಹಿಡಿದರೆ ಒಟ್ಟು ಆರು ಮಂದಿ. ಅಲ್ಲಿನ ಕೆಲಸಗಾರರ ಸಂಖ್ಯೆ 600 ಕ್ಕೂ ಹೆಚ್ಚು. ಅದರ ನಿರ್ಮಾಣ ವೆಚ್ಚ ಸುಮಾರು 5 ರಿಂದ 6 ಸಾವಿರ ಕೋಟಿ ರೂಪಾಯಿಗಳು! ಇದು ಇಡೀ ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ವಾಸದ ಬಂಗಲೆಯೆಂದು ಪ್ರಖ್ಯಾತವಾಗಿದೆ.

ಅಂಬಾನಿಗಳ ವೈಭವದ ಪ್ರದರ್ಶನದ ಈ ಮನೆಯ ಬಗ್ಗೆ ಮತ್ತೊಬ್ಬ ಪ್ರಮುಖ ಉದ್ಯಮಿ ರತನ್ ಟಾಟಾ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸುವುದು ಉಚಿತ. "ಈ ಮಹಲು ಭಾರತ ದೇಶದ ಬಡವರ ಬಗ್ಗೆ ಇಲ್ಲಿನ ಶ್ರೀಮಂತರ ತಿರಸ್ಕಾರ ಭಾವಕ್ಕೆ ಒಂದು ಉದಾಹರಣೆಯಾಗಿದೆ. ನಮ್ಮ ಸುತ್ತಮುತ್ತ ಜನರು ಸೂರಿಲ್ಲದೆ, ಹಸಿವಿನಿಂದ ನರಳುತ್ತಿದ್ದಾಗ ಹಲವರ ವೈಭವದ ಪ್ರದರ್ಶನವು ವರ್ಗದ್ವೇಷವನ್ನು ಹೆಚ್ಚಿಸುತ್ತದೆ". ಸಮಾಜಶಾಸ್ತ್ರಜ್ಞ ದಿಪಂಕರ್ ಗುಪ್ತ ಹೇಳಿದ ಮಾತುಕೇಳಿ: "ಇಂಥಾ ವೈಭವದ ಮಹಲು ಭಾರತದಲ್ಲಿರುವ ಬಗ್ಗೆ ಕೆಲವು ಭಾರತೀಯರು ಹೆಮ್ಮೆ ಪಟ್ಟುಕೊಳ್ಳುತ್ತಿದ್ದಾರೆ. ಆದರೆ ಕೋಟ್ಯಾಂತರ ಮಕ್ಕಳು ಹಸಿವಿನಿಂದ ಸಾಯುತ್ತಿರುವ ದೇಶಕ್ಕೆ ಇದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಅದೇ ಮುಂಬೈನ ಕೊಳಗೇರಿಗಳಲ್ಲಿ ಮಿಲಿಯಾಂತರ ಜನರು ವಾಸಿಸುತ್ತಿರುವುದನ್ನು ನಾವು ಮರೆಯಲು ಹೇಗೆ ಸಾಧ್ಯ?"


ಅಂಬಾನಿಗಳು ಬಾಲ್ಯದಲ್ಲಿ ವಾಸವಿದ್ದ ಸಿಂಗಲ್ ಬೆಡ್‌ರೂಂನ ವಸತಿ ಸಮುಚ್ಚಯ



ನಮ್ಮ ತಾಯಿ ಭಾರತಾಂಬೆ ಈ ಪ್ರಶ್ನೆಗೆ ಆತ್ಮಸಾಕ್ಷಿಯಾಗಿ ಉತ್ತರ ನೀಡುವ ಚೈತನ್ಯ ಗಳಿಸಿಕೊಳ್ಳುವುದು ಹೇಗೆ? ಯಾವಾಗ?

ಆಂಟಿಲಿಯಾ ಮಹಲ್‌ಗೆ ಪೈಪೋಟಿಯಾಗಿ ಸ್ವತಃ ಅಂಬಾನಿ ಕಿರಿಯ ಪುತ್ರ ಅನಿಲ್ ಅಂಬಾನಿ ನಿರ್ಮಿಸುತ್ತಿರುವ ಮತ್ತೊಂದು ಮಹಲು ಮುಂಬೈನ ಬಾಂದ್ರಾ ಪ್ರದೇಶದಲ್ಲಿ ತಲೆ ಎತ್ತುತ್ತಿದೆಯಂತೆ. ಇನ್ನೊಬ್ಬ ಉದ್ಯಮಿ ಸಿಂಘಾನಿಯಾ ಥೇಟ್ ಆಂಟಲಿಯಾವನ್ನೇ ಹೋಲುವಂತಹ ಮಹಲನ್ನು ನಿರ್ಮಿಸುವ ಭರದಲ್ಲಿದ್ದಾನಂತೆ. ಹಮಾರಾ ಭಾರತ್ ಮಹಾನ್!

ಮಾಧ್ಯಮದ ಮೇಲೆ ಬಿಗಿ ಹಿಡಿತ

ಧೀರೂಭಾಯಿಯವರ ಕಾಲದಿಂದಲೂ ಮಾಧ್ಯಮಗಳನ್ನು ನಿಭಾಯಿಸುವ ಕಲೆ ಅಂಬಾನಿಗಳಿಗೆ ಚೆನ್ನಾಗಿ ಕರಗತವಾಗಿದೆ. ಅವರ ಜೀವನಚರಿತ್ರೆ ಬರೆದಿರುವ ಹಮೀಶ್ ಮ್ಯಾಕ್‌ಡೊನಾಲ್ಡ್ ಹೇಳುವ ಪ್ರಕಾರ ಧೀರೂಭಾಯಿ ತನ್ನ ಆಪ್ತವಲಯದಲ್ಲಿ ಹಲವಾರು ಪ್ರಖ್ಯಾತ ಪತ್ರಕರ್ತರನ್ನು ಇಟ್ಟುಕೊಂಡಿದ್ದ. ಈತನ ಅವ್ಯವಹಾರಗಳನ್ನು ಮುಚ್ಚಿಹಾಕುವ ಮತ್ತು ಆತನ ವ್ಯಕ್ತಿತ್ವವನ್ನು ಅತಿರಂಜಿತವಾಗಿ ಬಿಂಬಿಸುವ ಕಾಯಕವನ್ನು ಅವರು ಸದಾ ನಿಷ್ಠೆಯಿಂದ ಮಾಡುತ್ತಾ ಅಂಬಾನಿ ಕೃಪೆಗೆ ಪಾತ್ರರಾಗಿ ತಕ್ಕ ಪ್ರತಿಫಲಗಳನ್ನು ಪಡೆದುಕೊಳ್ಳುತ್ತಿದ್ದರಂತೆ. ಇಂಥಾ ಪತ್ರಕರ್ತರನ್ನು ಆ ಲೇಖಕ "ಡರ್ಟಿ ಡಜನ್" ಎಂದು ಕರೆದಿದ್ದಾನೆ. ಆ ಡರ್ಟಿ ಡಜನ್ ಪಟ್ಟಿಯಲ್ಲಿ ಹಲವು ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರೂ ಇದ್ದರು. ಆದೆಲ್ಲಾ ಹಿಂದಿನ ಮಾತು.

ಹಲವಾರು ಮಾಧ್ಯಮ ಸಂಸ್ಥೆಗಳಲ್ಲಿ ಬಂಡವಾಳ ಹೂಡಿರುವ ರಿಲಯನ್ಸ್ ಇತ್ತೀಚೆಗೆ ನೆಟ್‌ವರ್ಕ್18 ಎಂಬ ಸಂಸ್ಥೆಯಲ್ಲಿ ಬಂಡವಾಳ ಹೂಡಿದೆ ಎಂದು ವರದಿಗಳು ಬಂದಿವೆ. ಎಲ್ಲಕ್ಕಿಂತಲೂ ಮುಖ್ಯವಾದ ಡೀಲ್ ಎಂದರೆ ರಾಮೋಜಿರಾವ್ ಒಡೆತನದ ಈಟಿವಿ ಸಮೂಹವನ್ನು ಮುಖೇಶ್ ಅಂಬಾನಿ ಕೈವಶ ಮಾಡಿಕೊಂಡಿದ್ದು. ತೆಲುಗು ವಾಹಿನಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಭಾಷೆಗಳ ವಾಹಿನಿಗಳನ್ನು ಮುಖೇಶ್ 2008 ರಲ್ಲಿ 2600 ಕೋಟಿಗಳ ಬೃಹತ್ ಮೊತ್ತ ನೀಡಿ ಕೊಂಡುಕೊಂಡಿದ್ದಾನೆ. ಆದರೂ ಈ ವಿಷಯವನ್ನು ಬಹಿರಂಗಗೊಳಿಸದೆ ಅತ್ಯಂತ ಗುಪ್ತವಾಗಿರಿಸಿದ್ದರು. ಆದರೆ ಈಟಿವಿಯ ಪ್ರತಿಸ್ಪರ್ಧಿಯಾಗಿದ್ದ ವೈಎಸ್‌ಆರ್ ಕುಟುಂಬದವರು ಅಂಬಾನಿಗಳ ಪ್ರಾಕ್ಸಿ ಇನ್‌ವೆಸ್ಟ್‌ಮೆಂಟ್ ಬಗ್ಗೆ ಹೈದರಾಬಾದ್ ಹೈಕೋರ್ಟಿನಲ್ಲಿ ಇತ್ತೀಚೆಗೆ ದಾವೆ ಹೂಡಿದ ನಂತರವಷ್ಟೆ ಈ ವಿಷಯ ಹೊರಜಗತ್ತಿಗೆ ಗೊತ್ತಾಗಿದ್ದು.

ಇಂಥಾ ಅನಿವಾರ್ಯ ಸಂದರ್ಭದಲ್ಲಿ ಮಾನ್ಯ ಮುಖೇಶ್‌ರವರು ಈಟಿವಿಗೆ 2600 ಕೋಟಿಗಳನ್ನು ಹೂಡಿರುವ ಸಂಗತಿ ಯನ್ನು ಕೋರ್ಟಿನಲ್ಲಿ ಒಪ್ಪಿಕೊಂಡಿ ದ್ದಾನೆ. ಹೀಗೆ ಪ್ರಜಾಪ್ರಭುತ್ವದ ಕಾವಲುನಾಯಿಗಳಾಗಬೇಕಿದ್ದ ಮಾಧ್ಯಮಗಳು ಉಳ್ಳವರ ಮನೆ ಕಾಯಲು ನಿಲ್ಲುತ್ತಿರುವುದು ಈ ಕಾಲದ ದೊಡ್ಡ ದುರಂತವೇ ಸರಿ.

400 ಕೋಟಿ ಉಡುಗೊರೆ

ಮುಖೇಶ್ ಅಂಬಾನಿಯವರು ತನ್ನ ಮಡದಿ ನೀತಾ ಅಂಬಾನಿಯ ಹುಟ್ಟುಹಬ್ಬಕ್ಕೆ 250 ಕೋಟಿ ಬೆಲೆಬಾಳುವ ಜೆಟ್ ವಿಮಾನವೊಂದನ್ನು ಉಡುಗೊರೆಯಾಗಿ ಕೊಟ್ಟರು! ಇದನ್ನು ಕೇಳಿ ತಿಳಿದ ಅನಿಲ್ ಅಂಬಾನಿ ತನ್ನ ಪತ್ನಿ ಮಾಜಿ ಬಾಲಿವುಡ್ ತಾರೆ ಟೀನಾ ಅಂಬಾನಿಗೆ ಮದುವೆ ವಾರ್ಷಿಕೋತ್ಸವದ ಉಡುಗೊರೆಯಾಗಿ 400 ಕೋಟಿ ಬೆಲೆಬಾಳುವ ವೈಭವೋಪೇತ ದೋಣಿಯೊಂದನ್ನು ಕೊಡಲು ತೀರ್ಮಾನಿಸಿ ಇಟಲಿ ದೇಶದಿಂದ ಅದನ್ನು ತರಿಸಿಕೊಂಡರು. ಆದರೆ 3 ಕೋಟಿ ಆಮದು ಶುಲ್ಕ ಎಗರಿಸಲು ಅದನ್ನು ಸ್ಮಗಲ್ ಮಾರ್ಗದಲ್ಲಿ ತರಲು ಪ್ರಯತ್ನಿಸಿದಾಗ ತೆರಿಗೆ ಅಧಿಕಾರಿಗಳು ಆ ದೋಣಿಯನ್ನು ಸೀಜ್ ಮಾಡಿದರು. ಇದಕ್ಕೆ ಸಂಬಂಧಿಸಿ ಮೊಕದ್ದಮೆಯೊಂದು ದಾಖಲಾಯಿತು. ನಂತರ ಕೋರ್ಟಿನ ಹೊರಗಡೆ ಈ ವಿವಾದವನ್ನು ಬಗೆಹರಿಸಿಕೊಳ್ಳುವುದಾಗಿ ತಿಳಿಸಿ ಮೊಕದ್ದಮೆಯನ್ನು ವಾಪಸ್ ಪಡೆದಿದ್ದಾರಂತೆ.



ಇದೆಲ್ಲಾ ಬಿಸೀ ಇರಲಿ, ಒಂದು ಉಡುಗೊರೆಗೆ 400 ಕೋಟಿ ಖರ್ಚು ಮಾಡುವ ಅಂಬಾನಿ ಪುತ್ರ ಸರ್ಕಾರಕ್ಕೆ ಸಲ್ಲಿಸಬೇಕಾದ 3 ಕೋಟಿಯನ್ನು ಯಾಮಾರಿಸಲು ಮಾಡಿದ ಕಳ್ಳ ಪ್ರಯತ್ನ ಅತ್ಯಂತ ನಾಚಿಕೆಗೇಡಿನದು. ಇವರ ಜೀವಮಾನದುದ್ದಕ್ಕೂ ಇವರು ಮಾಡಿದ್ದು ಇಂಥದ್ದನ್ನೇ.


ಯಡ್ಡಿಯ ಬಾಯಿ ಮುಚ್ಚಿಸಲು ಅದೆಂಥಾ 'ಬಾಂಬ್' ಆರೆಸ್ಸೆಸ್ ಬಳಿಯಿತ್ತು?

ಸಂಕ್ರಾಂತಿ ಕ್ರಾಂತಿಯ ಯಡ್ಡಿಯ ವೀರಾವೇಶ ಏಕಾಏಕಿಯಾಗಿ ಆರೆಸ್ಸೆಸ್ ಬೈಠಕ್‌ನಲ್ಲಿ ಠುಸ್ಸೆಂದಿದ್ದೇಕೆ?

ಆರೆಸ್ಸೆಸ್ ಮೂಲಗಳೇ ಹೇಳುವಂತೆ ಯಡ್ಡಿಯ 'ಯುಟರ್ನ್'ಗೆ ಬೇರೆಲ್ಲಕ್ಕಿಂತಲೂ ಹೆಚ್ಚು ಕಾರಣವಾಗಿದ್ದು ಜೈಲುಭೀತಿ!

ಯಡ್ಡಿಯನ್ನು ಮಣಿಸಲು **once again** ಆರೆಸ್ಸೆಸ್ ಬಳಸಿದ್ದು ಜೈಲಿನ ಅಸ್ತ್ರವನ್ನು. ಇಪ್ಪತ್ತೋ, ಮೂವತ್ತೋ ಶಾಸಕರನ್ನು ಕಟ್ಟಿಕೊಂಡು ನೀವೇನಾದರೂ ಸರ್ಕಾರ ಉರುಳಿಸಿದ್ರಿ ಎಂದಿಟ್ಟುಕೊಳ್ಳಿ. ಆಗ ಸಹಜವಾಗೇ ರಾಜ್ಯಪಾಲರ ಕೈಗೆ ಆಯುಧ ಕೊಟ್ಟಂತಾಗುತ್ತದೆ. ಮೊದಲೇ ರಾಜ್ಯಪಾಲ ಭಾರದ್ವಾಜ್‌ಗೆ ನಿಮ್ಮ ಮೇಲೆ ಹಗೆಯಿದೆ. ನೀವು ಪಕ್ಷದಿಂದ ಹೊರಬದ್ದಿದ್ದೇ ತಡ ರಾಷ್ಟ್ರಪತಿ ಆಳ್ವಿಕೆ ಹೇರುತ್ತಾರೆ. ಒಮ್ಮೆ ರಾಷ್ಟ್ರಪತಿ ಆಳ್ವಿಕೆ ಘೋಷಣೆಯಾಯಿತೆಂದರೆ ರಾಜ್ಯಪಾಲ ಭಾರದ್ವಾಜ್ ಸರ್ವಾಧಿಕಾರಿಯಾಗುತ್ತಾರೆ. ಆಗ ನಿಮ್ಮ ಮೇಲಿನ ಈಗಿನ ಭ್ರಷ್ಟಾಚಾರದ ಕೇಸುಗಳಲ್ಲದೇ ಈಗಾಗಲೇ ಲೋಕಾಯುಕ್ತ ಕೋರ್ಟ್‌ನಲ್ಲಿ ಸರದಿಗಾಗಿ ಕಾಯುತ್ತಿರುವ ಇನ್ನೂ ಅನೇಕ ಭ್ರಷ್ಟಾಚಾರದ ಹಗರಣಗಳನ್ನು ಆಯ್ದು ರಾಜ್ಯಪಾಲರೇ ನಿಂತು ಸಿಬಿಐಗೆ ಒಪ್ಪಿಸಿದರೆಂದರೆ ನಿಮ್ಮ ಕತೆ ಮುಗಿದಂತೆಯೇ.

ಒಮ್ಮೆ ಸಿಬಿಐ ಯಾವುದಾದರೂ ಒಂದು ಹಗರಣ ಹಿಡಿದು ತನಿಖೆಗಿಳಿಯಿತೆಂದರೆ ಜನಾರ್ದನ ರೆಡ್ಡಿಯ ಹಾಗೆ ನಿಮ್ಮ ಜೊತೆ ನಿಮ್ಮ ಮಕ್ಕಳನ್ನೂ ಸೇರಿಸಿ ಜೈಲಿಗೆ ಹಾಕುತ್ತಾರೆ. ಲೋಕಾಯುಕ್ತ ಕೋರ್ಟಾದರೆ ಒಂದಿಪ್ಪತ್ತು ದಿನಗಳಲ್ಲಿ ಜಾಮೀನು ಸಿಗುತ್ತದೆ. ಆದರೆ ಸಿಬಿಐ ಹಾಗಲ್ಲ. ಸದ್ಯಕ್ಕೆ ಜೈಲಿಂದ ಬರುವ ಸಾಧ್ಯತೆಗಳೇ ಇಲ್ಲ. ಮೊದಲೇ ಕೇಂದ್ರದಲ್ಲಿರುವುದು ಕಾಂಗ್ರೆಸ್ಸು. ನಿಮ್ಮನ್ನು ರಾಜಕೀಯವಾಗಿ ಮುಗಿಸಲು ನೀವೇ ಹಳ್ಳತೋಡಿಕೊಂಡಂತಾಗುತ್ತದೆ. ಯಾವುದಕ್ಕೂ ಯೋಚನೆ ಮಾಡಿ. ರಾಜ್ಯಪಾಲ ಭಾರದ್ವಾಜ್ ಇದನ್ನೇ ಕಾಯುತ್ತಿದ್ದಾರಂತೆ. ಇದ್ದಷ್ಟು ದಿನ ಸದಾನಂದ ಗೌಡರೇ ಇರಲಿ. ನಿಮಗೂ ಒಳ್ಳೇದು ಬಿಜೆಪಿಗೂ ಅನುಕೂಲ. ನೀವೇ ನಿಂತು ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತಂದಿರಿ ಎಂದರೆ ಆಗ ನೀವೇ ಸಿಎಂ ಆಗಬಹುದು. ಈಗೇನಾದರೂ ದುಸ್ಸಾಹಸಕ್ಕೆ ಕೈಹಾಕಿದ್ರಿ ಎಂದರೆ ಸಿಬಿಐ, ಕಾಂಗ್ರೆಸ್, ರಾಜ್ಯಪಾಲರು ಎಲ್ಲರೂ ನಿಮ್ಮನ್ನು ಮುಗಿಸದೇ ಬಿಡೋಲ್ಲ, ಅದಕ್ಕೆ ನೀವೇ ಏಕೆ ಆಸ್ಪದ ಕೊಡೋದು? ಎಂದು ಬೇಂಡೇ, ಜಯದೇವ, ಕಲ್ಲಡ್ಕ ಭಟ್ಟರೆಲ್ಲಾ ಸೇರಿ ಹೆದರಿಸಿದ್ದೇ ತಡ ಥಂಡಾ ಹೊಡೆದ ಯಡ್ಡಿ ಮೆತ್ತಗಾದರಂತೆ!





• ರಾ. ಸೋಮನಾಥ್

ಆರೆಸ್ಸೆಸ್ ತೇಪೆ ಮೌನ ಮಾರ್ಚ್ ತನಕ!

ಹರಕಲು ದುಪಟಿಗೆ ಬದ್ದಿರುವುದು ಆರೆಸ್ಸೆಸ್ ತೇಪೆ. ಎಷ್ಟು ದಿನ ಬಾಳುವುದೋ ಗೊತ್ತಿಲ್ಲ, ಹೆಚ್ಚೆಂದರೆ ಮಾರ್ಚ್ ತನಕ ಹರಿಯದೆ ಹೋದರೆ ಅದೇ ಹೆಚ್ಚು. ಕೈಕಟ್ಟಿ ಕೂರುವ ಜಾಯಮಾನದ ಆಸಾಮಿ ಯಡ್ಡಿ ಅಲ್ಲವೇ ಅಲ್ಲ. ತೀರ ಸಹಿಸಿಕೊಂಡಿರಬೇಕೆಂದರೆ ಉತ್ತರದ ಐದು ರಾಜ್ಯಗಳ ಚುನಾವಣೆಯ ತನಕ ಹಾಗೆ ಕಾಲ ನೂಕಬಹುದು. ಅದು ಮಾರ್ಚ್‌ವರೆಗಿನ ಮೌನವಷ್ಟೆ. ಅಷ್ಟರೊಳಗೆ ಒಂದೋ ಮುಖ್ಯಮಂತ್ರಿ ಗಾದಿ ಅಥವಾ ರಾಜ್ಯ ಬಿಜೆಪಿ ಅಧ್ಯಕ್ಷ ಪದವಿ, ಎರಡರೊಳಗೊಂದು ಸಿಗಲಿಲ್ಲ ಎಂದರೆ ಯಡ್ಡಿಗೆ ಯಾರ ಹಂಗು?

ನಿನ್ನೆ ಅಂದರೆ ಜನವರಿ 11 ರ ನಡುರಾತ್ರಿವರೆಗಿನ ರಾಜಿ ಪಂಚಾಯ್ತಿಗೆ ನಿಗದಿಗೊಂಡಿದ್ದು ಯಡ್ಡಿಯ ಪರಮಾಪ್ತ ಮಾರ್ವಾಡಿ ಲೆಹರ್‌ಸಿಂಗ್ ಮನೆಯೆ. ಸಂಕ್ರಾಂತಿಯ ಗಡುವಿಗಿನ್ನು ಮೂರೇ ದಿನ ಬಾಕಿಯಿರುವಾಗಲೇ ರಾಜ್ಯಾಧ್ಯಕ್ಷ ಈಶ್ವರಪ್ಪ ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ಯಡ್ಡಿ ಮಧ್ಯೆ ತೇಪೆ ಹಾಕಲೇಬೇಕಿತ್ತು. ದಕ್ಷಿಣ ಭಾರತದ ಏಕೈಕ ಬಿಜೆಪಿ ಸರ್ಕಾರವನ್ನು ಉಳಿಸಿಕೊಳ್ಳಬೇಕೆಂದರೆ, ಸಂಘ ಪರಿವಾರದ ಅನೇಕಾನೇಕ ಗುಪ್ತ ಷಡ್ಯಂತ್ರಗಳೆಲ್ಲ ಸಾಕಾರಗೊಳ್ಳಬೇಕೆಂದರೆ, ಉತ್ತರದ ಐದು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯ ಮಾನ ಉಳಿಯಬೇಕೆಂದರೆ; ಆರೆಸ್ಸೆಸ್ ಪಾಲಿಗೆ ಉಳಿದಿರುವುದು ಇದೊಂದೇ.

ಎಲ್ಲ ಲೆಕ್ಕ ಹಾಕಿಯೇ ಸಂಘ ಸಂಚಾಲಕ ಮೈ.ಚ. ಜಯದೇವ ಛೂಬಿಟ್ಟಿದ್ದೇ. ರಾಜ್ಯ ಬಿಜೆಪಿಯ ಸೂತ್ರಧಾರ ಸಂತೋಷ್‌ಜಿಯನ್ನು. ಯಡ್ಡಿ ಮುಖ್ಯಮಂತ್ರಿಯಾದ್ದಷ್ಟೂ ಕಾಲ ಕಾಲೆಳೆಯುವುದನ್ನೇ ಕಾಯಕ ಮಾಡಿಕೊಂಡಿದ್ದ ಹುಟ್ಟಾ ಆರೆಸ್ಸೆಸ್ ಸಂತೋಷ್‌ಜಿ ಯಡ್ಡಿಯನ್ನು ಜೈಲಿಗಟ್ಟುವ ಕಾರ್ಯಾಚರಣೆಯಲ್ಲಿ ಮುಂಚೂಣಿಯಲ್ಲಿದ್ದ. ಈಗ ಯಡ್ಡಿಯೇ ಪಕ್ಷ ಬಿಟ್ಟುಹೋಗುವ ಕಾಲ ಸನ್ನಿಹಿತಗೊಂಡ ಮೇಲೆ ಏನಾದರೂ ಮಾಡಲೇಬೇಕಲ್ಲ, ಸಂಕ್ರಾಂತಿ ಬಂತೆಂದರೆ ಪರಿಸ್ಥಿತಿ ಇನ್ನಷ್ಟು ಹದಗೆಡುವುದು ಗ್ಯಾರಂಟಿ. ಅಷ್ಟರೊಳಗೆ ಯಡ್ಡಿಯನ್ನು ನಿಯಂತ್ರಿಸಬೇಕು. ಜೊತೆಗಿಟ್ಟುಕೊಂಡೇ ಕಾರ್ಯ ಸಾಧಿಸಬೇಕು.

ಅಖಾಡಕ್ಕಿಳಿದ ಸಂತೋಷ್‌ಜಿ

ಹಾಗಂತ ರಣತಂತ್ರವೊಂದನ್ನು ರೂಪಿಸಿಯೇ ಜನವರಿ 9 ರ ಸೋಮವಾರ ಸಂಜೆ ಸಂತೋಷ್ ನೇರವಾಗಿ ಯಡ್ಡಿ ಮನೆಗೇ ಬಂದಿದ್ದಾನೆ. ಈ ಹೊತ್ತಿಗಾಗಲೇ ಪಕ್ಷೇತರ ಮತ್ತು ಅನರ್ಹಗೊಂಡಿದ್ದ ಹನ್ನೊಂದು ಮಂದಿ ಶಾಸಕರು ಯಡ್ಡಿ ವಿರುದ್ಧ ತಿರುಗಿ ಬದ್ದಾಗಿತ್ತು, ಯಡ್ಡಿಯನ್ನು ಪಕ್ಷದಿಂದಲೇ ಉಚ್ಚಾಟಿಸುವಂತೆ ಬಿಜೆಪಿಯ ಹಿರಿಯ ನಾಯಕ ಬಿ.ಬಿ.ಶಿವಪ್ಪ ಮತ್ತು ರಾಂಭಟ್ ಸೇರಿಕೊಂಡು ಮೈಸೂರಿನಲ್ಲಿ ಸಭೆ ನಡೆಸಿ ಒತ್ತಾಯಿಸಿದ್ದೂ ಆಯಿತು. ಕಾಲ ತನ್ನ ವಿರುದ್ಧ ಚಲಿಸುತ್ತಿದೆ ಎಂಬುದು ಯಡ್ಡಿಗೆ ನಿಕ್ಕಿಯಾಗಿತ್ತು, ಬಂದ ಸಂತೋಷ್‌ಜಿಯ ಮುಖಕ್ಕೆ ಉಗಿದಂತೆಯೇ ಯಡ್ಡಿ ಹೇಳಿಬಿಟ್ಟರು. 'ಅಲ್ರೀ.... ಈ ಈಶ್ವರಪ್ಪ ದಿನ ಬೆಳಿಗ್ಗೆಯಾದರೆ ನನ್ನ ವಿರುದ್ಧ ಕತ್ತಿ ಮಸೀತಾನಲ್ಲ ನೀವಾದ್ರೂ ಬುದ್ಧಿ ಹೇಳಬಾರದಾ? ಸದಾನಂದ ಗೌಡನ್ನ ಸಿ.ಎಂ. ಮಾಡಿದ್ದೇ ನಾನು. ಕನಿಷ್ಠ ಕೃತಜ್ಞತೆ ಕೂಡ ಆತನಿಗಿಲ್ಲ ಅಂದರೆ ಈ ಪುರುಷಾರ್ಥಕ್ಕೆ ನಾನು ಪಕ್ಷಕ್ಕಾಗಿ ಹೆಣಗಬೇಕಿತ್ತಾ? ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಬೇರೆ ಯಾರಿಗೂ ಲಾಭ ಆಗಲೇ ಇಲ್ವಾ? ಹೈಕಮಾಂಡ್ ಲೀಡರ್‌ಗಳಿಂದ ಹಿಡಿದು ಪ್ರತಿಯೊಬ್ಬ ಆರೆಸ್ಸೆಸ್ ಕಾರ್ಯಕರ್ತರ ತನಕ ಯಾರ್ಯಾರಿಗೆ ಏನೆಲ್ಲ ಕೆಲಸ ಮಾಡಿಕೊಟ್ಟದ್ದೀನಿ ಅಂತ ಪಟ್ಟಿ ಕೊಡ್ಲಾ' ಎಂದಿದ್ದೇ ತಡ ಸಂತೋಷ್‌ಜಿ ಥಂಡಾ ಹೊಡೆದ.

'ಪಕ್ಷಕ್ಕಾಗಿ ನೀವು ಪಟ್ಟ ಪಾಡನ್ನು ಯಾರೂ ಅಲ್ಲಗಳೆಯುತ್ತಿಲ್ಲ, ಆದರೆ ಪರಿಸ್ಥಿತಿ ನಾವ್ಯಾರೂ ಭಾವಿಸಿದಂತಿಲ್ಲ, ಉತ್ತರ ಭಾರತದಲ್ಲಿ ಚುನಾವಣೆಯನ್ನು ಎದುರಿಸಬೇಕೆಂದರೆ ಸದ್ಯಕ್ಕೆ ಹೈಕಮಾಂಡ್ ನಿಮ್ಮ ಕೈಹಿಡಿಯುವ ಪರಿಸ್ಥಿತಿಯಲ್ಲಿಲ್ಲ, ದಯವಿಟ್ಟು ಅರ್ಥ ಮಾಡ್ಕೊಳ್ಳಿ. ನಿಮ್ಮನ್ನು ಮೂಲೆಗುಂಪು ಮಾಡೋಕೆ ನಾವು ಆಸ್ಪದ ಕೊಡೋಲ್ಲ, ಈ ಬಗ್ಗೆ ಸಂಘ ಒಂದು ಸ್ಪಷ್ಟ ನಿರ್ಧಾರಕ್ಕೆ ಬಂದಿದೆ. ಕುಂತು ಮಾತಾಡೋಣ. ಅಲ್ಲೂ ಪರಿಹಾರ ಆಗದೇ ಹೋದ್ರೆ ಆನಂತರ ಇದ್ದಿದ್ದೇ' ಎಂದ ಸಂತೋಷ್‌ಜಿಯ ಮಾತು ಯಡ್ಡಿ ಪಾಲಿಗೆ ಆಪ್ಯಾಯಮಾನ ಎನ್ನಿಸಿರಬೇಕು.

ಇದಕ್ಕೂ ಮುನ್ನ ಯಡ್ಡಿಯ ಹತಾಶೆಯಿತ್ತಲ್ಲ, ಬಹುಶಃ ತನ್ನ ರಾಜಕೀಯ ಬದುಕೇ ಸುಂಟರಗಾಳಿಗೆ ಸಿಕ್ಕಂತೆ ತಲ್ಲಣಿಸಿಹೋದರು ಯಡ್ಡಿ. ಹೆಚ್ಚೆಂದರೆ ಇಪ್ಪತ್ತೋ ಇಪ್ಪತ್ತೈದೋ ಶಾಸಕರಷ್ಟೇ ತನ್ನ ಬೆನ್ನಿಗೆ ನಿಲ್ಲುವುದು ಸ್ವತಃ ಯಡ್ಡಿಗೇ ಖಾತರಿಯಾಗಿತ್ತು, ಪಕ್ಷದ ಪ್ರಶ್ನೆ ಬಂತೆಂದರೆ ಯಲಹಂಕ ಶಾಸಕ ವಿಶ್ವನಾಥ್ ಆಗಲಿ, ಬೆಳ್ಳುಬ್ಬಿಯಾಗಲಿ, ಶೃಂಗೇರಿಯ ಜೀವರಾಜ್, ಕೊಡಗಿನ ಅಪ್ಪಚ್ಚು ರಂಜನ್; ಇತ್ಯಾದಿ ಬಿಜೆಪಿಯವರ್‍ಯಾರೂ ತನ್ನ ಜೊತೆ ಬರಲಾರರು. ಹೆಚ್ಚೆಂದರೆ ಉಮೇಶ್ ಕತ್ತಿ, ಬೊಮ್ಮಾಯಿ, ನಿರಾಣಿ, ಕಾರಜೋಳ, ಸವದಿಯಂಥವರು ಋಣಕ್ಕೆ ಬಿದ್ದು ಬರಬಹುದು. ಬೆಂಗಳೂರಿನ ಶಾಸಕರ ಪೈಕಿ ರಾಜರಾಜೇಶ್ವರಿ ನಗರದ ಎಂ. ಶ್ರೀನಿವಾಸ್ ಮತ್ತು ಶೋಭಾ ಕರಂದ್ಲಾಜೆಯ ಹೊರತಾಗಿ ಬೇರೆ ಯಾರೂ ತನ್ನ ಜೊತೆ ಉಳಿಯುವುದು ಕಷ್ಟ. ನಿನ್ನೆಮೊನ್ನೆಯ ತನಕ ಪಕ್ಕಾ ಬಂಟನಂತೆ ಓಡಾಡಿಕೊಂಡಿದ್ದ ಕೆ.ಆರ್. ಪುರಂ ಶಾಸಕ ನಂದೀಶ್ ರೆಡ್ಡಿ ತಾನು ಜೈಲು ಪಾಲಾಗಿದ್ದೇ ತಡ, ಉಲ್ಟಾ ಹೊಡೆಯುತ್ತಾನೆಂದರೆ ಇನ್ನು ಯಾರನ್ನು ನಂಬುವುದು!

ರೇಣುಕನ ದಾಳಿ

ಸಂಕ್ರಾಂತಿಯ ಗಡುವಿನ ಯಡ್ಡಿ ನಿರ್ಧಾರದ ಹಿಂದಿದ್ದದ್ದೇ ಇಂಥ ಹತಾಶೆ. ಅಧಿಕಾರವಿಲ್ಲದೆ ತನಗೆ ಉಳಿಗಾಲವಿಲ್ಲ. ಮುಖ್ಯಮಂತ್ರಿಗಿರಿಯಲ್ಲದೆ ಕನಿಷ್ಠ ರಾಜ್ಯಾಧ್ಯಕ್ಷ ಪದವಿಯಾದರೂ ಸರಿ. ತಾನೇ ಅಧಿಕಾರಕ್ಕೆ ತಂದ ಪಕ್ಷ ತನಗೇ ಮುಳುವಾಗುತ್ತದೆಯೆಂದರೆ ಅದು ಅಧಿಕಾರದಲ್ಲಿದ್ದಷ್ಟೂ ಅಪಾಯವೆಂದೇ ಲೆಕ್ಕ ಹಾಕಿದ ಯಡ್ಡಿ ಸಂಕ್ರಾಂತಿಯ ಡೆಡ್‌ಲೈನ್ ಘೋಷಿಸಿಯೇ ಬಿಟ್ಟರು. ಇಷ್ಟಾಗಿದ್ದೇ ತಡ ತುಮಕೂರು ಗ್ರಾಮಾಂತರದ ಶಾಸಕ ಸುರೇಶ್ ಗೌಡ ಪಕ್ಷದ ವಿರುದ್ಧವೇ ಕಿಡಿಕಾರಿದ್ದು, ಹರಿಹರದ ಶಾಸಕ ಹರೀಶ್ ಹೈಕಮಾಂಡ್ ಮೇಲೆ ನಡೆಸಿದ ದಾಳಿ, ಮತ್ತೊಂದೆಡೆ ಸಾಗರದ ಎಮ್ಮೆಲ್ಲೇ ಬೇಳೂರು ಗೋಪಾಲಕೃಷ್ಣ ಯಡ್ಡಿ ಪರವಹಿಸಿ ಸರ್ಕಾರದ ವಿರುದ್ಧ ನಾಲಿಗೆ ಹರಿಬಿಟ್ಟದ್ದು; ಒಂದರ ಮೇಲೊಂದಾಗಿ ಶುರುವಾಯ್ತು.

ಇದೆಲ್ಲದರ ಪರಮಾವಧಿಯಂತಿದ್ದದ್ದು ಅಬಕಾರಿ

ಅಧಿಕಾರದ ಮುಂದೆ ಯಾವ ನಿಷ್ಠೆ ಎಲ್ಲಿಯ ನಿಯತ್ತು?

ಆರೆಸ್ಸೆಸ್ ಸಂಧಾನವೇನೋ ಮುಗಿದಿದೆ. ಯಡ್ಡಿ, ಈಶು, ಗೌಡ ಮೂವರೂ ಒಟ್ಟಿಗೇ ಪೋಜು ಕೊಟ್ಟದ್ದೂ ಆಗಿದೆ. ಮಾರ್ಚ್‌ವರೆಗೆ ಯಡ್ಡಿ ತನ್ನೆಲ್ಲಾ ಸಿಟ್ಟು ಅದುಮಿಟ್ಟು ಸಹಿಸಿಕೊಂಡಿರಬಹುದು. ಆದರೆ ಇಷ್ಟಕ್ಕೇ ಇದು ನಿಲ್ಲುತ್ತಾ?

ಖಂಡಿತ ಇಲ್ಲ, ಪಕ್ಷದೊಳಗೆ ಯಡ್ಡಿಯ ತಾಕತ್ತು ಹೆಚ್ಚಾಗದ ಹಾಗೆ ಹೆಜ್ಜೆ ಹೆಜ್ಜೆಗೂ ಕತ್ತರಿಹಾಕುವುದು ಈಶ್ವರಪ್ಪನ ಹುಟ್ಟು ಗುಣ. ಅದೊಂಥರದ ಸವತಿ ಮತ್ಸರವಿದ್ದಂತೆ. ಯಡ್ಡಿ ಪ್ರಬಲನಾದಷ್ಟೂ ಅದು ತನಗೇ ಮುಳುವೆಂಬುದು ಈಶ್ವರಪ್ಪನ ಲೆಕ್ಕಾಚಾರ. ಈಶ್ವರಪ್ಪನ ಬಾಲ ಕಟ್ ಮಾಡಿದರಷ್ಟೇ ತನ್ನ ದಾರಿ ಸಲೀಸೆಂಬುದು ಯಡ್ಡಿಯ ಆಜನ್ಮ ಹುನ್ನಾರ. ಏಕೆಂದರೆ ತನ್ನ ಕಡುವೈರಿ ಅನಂತ್‌ಗೆ ಈಶ್ವರಪ್ಪ ಪರಮಾಪ್ತನೆಂಬುದು ಯಡ್ಡಿಗೆ ಗ್ಯಾರಂಟಿಯಾಗಿದೆ. ಹಾಗೇ ಮತ್ತೊಬ್ಬ ಲಿಂಗಾಯತ ಲೀಡರ್ ಆಗಿ ಶೆಟ್ಟರ್ ತಲೆ ಎತ್ತದ ಹಾಗೆ ಮಾಡುವುದೂ ಯಡ್ಡಿಗೆ ಅನಿವಾರ್ಯವಾಗಿ ಬಿಟ್ಟಿದೆ. ಅದೇ ಕಾರಣಕ್ಕಾಗಿ ಶೆಟ್ಟರ್, ಅನಂತ್ ಮತ್ತು ಈಶ್ವರಪ್ಪ ಇಬ್ಬರಿಗೂ ಸಾಥು ಕೊಡುತ್ತಾರೆ. ಬತ್ತಿ ಇಡುತ್ತಲೇ ಬರುತ್ತಾರೆ.



ಇನ್ನು ಸದಾನಂದ ಗೌಡರದು ವಿಚಿತ್ರ ಮನಸ್ಥಿತಿ. ಮೇಲುನೋಟಕ್ಕೆ ಯಡ್ಡಿಗೆ ನಿಷ್ಠನಂತೆ ನಟಿಸಿದರೂ ಗೌಡ ಆಳದಲ್ಲಿ ಅನಂತ್, ಈಶು, ಶೆಟ್ಟರ್ ಬಣದ ಜೊತೆ ಕೈಜೋಡಿಸಿ ಆಗಿದೆ. ಯಡ್ಡಿಗಿಂತಲೂ ಆರೆಸ್ಸೆಸ್‌ಗೇ ಸದಾನಂದ ಗೌಡರದು ಅಧಿಕ ನಿಷ್ಠೆ. ಇದ್ದಷ್ಟು ಕಾಲ ತಾನೇ ಮುಖ್ಯಮಂತ್ರಿಯಾಗಿರಬೇಕೆಂದರೆ ಗೌಡ ಶತಗತಾಯ ಯಡ್ಡಿಯನ್ನು ದುರ್ಬಲಗೊಳಿಸುತ್ತಲೇ ಇರಬೇಕು. ಯಡ್ಡಿ ವಿರುದ್ಧ ಆರೆಸ್ಸೆಸ್, ಬಿಜೆಪಿ, ಅನಂತ್, ಈಶ್ವರಪ್ಪ, ಶೆಟ್ಟರ್, ಅಶೋಕ್ ಮುಂತಾದವರೆಲ್ಲ ಇದ್ದರೇನೇ ಗೌಡರ ಸಿಎಂಗಾದಿ ಭದ್ರ.



ಈ ಎಲ್ಲ ಶಕ್ತಿಗಳೂ ಪರಸ್ಪರ ತನ್ನ ವಿರುದ್ಧವೇ ಕೈಜೋಡಿಸಿರುವಾಗ ಯಡ್ಡಿ ತಾನೇ ಹೇಗೆ ಸುಮ್ಮನಿರಲು ಸಾಧ್ಯ?

ತಾನು ಉಳಿಯಬೇಕೆಂದರೆ ತನ್ನೆಲ್ಲಾ ಬೆಂಬಲಿಗರನ್ನು ಸಾಕಲೇಬೇಕು. ಅದಕ್ಕೆ ಅಧಿಕಾರ ಬೇಕು. ಜೊತೆಗೆ ತನ್ನ ಮೇಲಿರುವ ಕೇಸುಗಳಿಂದ ಮುಕ್ತನಾಗುವುದಕ್ಕೂ ಅಧಿಕಾರ ಬೇಕು. ಅದು ಬೇಕೆಂದರೆ ತನ್ನ ವಿರೋಧಿಗಳೆಲ್ಲರನ್ನೂ ಯಡ್ಡಿ ದುರ್ಬಲಗೊಳಿಸುತ್ತಲೇ ಇರಬೇಕು. ಸದ್ಯ ಆರೆಸ್ಸೆಸ್ ಏನೇ ತೇಪೆ ಹಾಕಿರಬಹುದು, ಮೂವರೂ ನಾಯಕರು ಒಟ್ಟಿಗಿರುತ್ತೇವೆಂದು ಏನೇ ಮಾತು ಕೊಟ್ಟಿರಬಹುದು, ಆದರದು ಎಷ್ಟು ದಿನ? ಹೇಗೇ ತಾನೇ ಒಗ್ಗಟ್ಟು ಸಾಧ್ಯ? ಪರಸ್ಪರ ಕಚ್ಚಾಡುವ, ಒಬ್ಬರನ್ನೊಬ್ಬರು ಮುಗಿಸಿಯೇ ಅಧಿಕಾರ ಹಿಡಿಯುವ ದುರಾಶೆಯ ನಾಯಕರನ್ನೆಲ್ಲ ಬಿಜೆಪಿಯೆಂಬ ಬೋನಿಗೆ ಹಾಕಿ ಒಗ್ಗೂಡಿಸುವುದು ಉಂಟೆ?

ಅಧಿಕಾರವಿರುವ ತನಕ ಕಚ್ಚಾಟ ನಿಲ್ಲುವುದುಂಟೆ?

...ೋಕ್ ಯಡ್ಡಿ ಪಾಳಯಕ್ಕೆ ಹಾರಿದ್ದೇಕೆ?

...ನೆಯ ತನಕ ವಿರೋಧಿ ಪಾಳಯದಲ್ಲಿದ್ದ ಅಶೋಕ್ ರಾತ್ರೋರಾತ್ರಿ ಯಡ್ಡಿಯ ಪರ ಲಾಬಿಗಿಳಿಯುವಷ್ಟು ...?

... ದೇವೇಗೌಡ ಮತ್ತು ಸಿ.ಎಂ. ಸದಾನಂದ ಗೌಡರ ಮಧ್ಯೆ ಸಂಬಂಧ ಕುದುರಿತೋ, ...ಕುಮಾರಸ್ವಾಮಿ-ರೇವಣ್ಣನ ಜೊತೆ ಪದೇಪದೇ ಸದಾನಂದ ಗೌಡ ಕೂತು ತಂತ್ರ ...ಗಿ ಬಂತು. ತನ್ನನ್ನು ಮೈಸೂರು ಭಾಗದ ಒಕ್ಕಲಿಗರು ಒಪ್ಪಿಕೊಳ್ಳಬೇಕೆಂದರೆ ಅದಕ್ಕೆ ...ಆಶೀರ್ವಾದ ಬೇಕೇಬೇಕು ಎಂಬ ಆಸೆಗೆ ಬಿದ್ದ ಸದಾಗೌಡ ಅಗತ್ಯಕ್ಕೂ ಮೀರಿ ಮಣ್ಣಿನ ...ಕ್ರೈಸತೊಡಗಿದರು. ಪರಿಷತ್ ಚುನಾವಣೆಯಲ್ಲಿ ಗೌಡರ ಪರ ಜೆಡಿಎಸ್ ತಟಸ್ಥವಾದ ...ದು ಬಟ್ಟಂಬಯಲಾಗಿ ಹೋಯ್ತು.

...ಶೋಕ್ ಅಸೂಯೆಯೂ ಹೆಡೆಯೆತ್ತಿ ನಿಂತಿತು. ಬಿಜೆಪಿ ಪಾಳಯದಲ್ಲಿ ಒಕ್ಕಲಿಗರ ...ತೀಯ ಅಧಿಪತಿಯಂತಿದ್ದದ್ದು ಅಶೋಕ್ ಮಾತ್ರ. ಯಡ್ಡಿ ವಿರುದ್ಧ ದೇವೇಗೌಡರಿಗೆ ...ತ್ತಲ್ಲೂ ಮಾಹಿತ ರವಾನಿಸುತ್ತಿದ್ದ ಅಶೋಕ್ ಬಗ್ಗೆ ಯಡ್ಡಿಗೆ ಇನ್ನಿಲ್ಲದ ಸಿಟ್ಟಿತ್ತು. ಯಾವತ್ತು ...ಗಾದಿಗೆ ತನ್ನ ಉತ್ತರಾಧಿಕಾರಿಯಾಗಿ ಯಡ್ಡಿ ಸದಾನಂದ ಗೌಡರನ್ನು ಮುಂದೆಬಿಟ್ಟರೋ ...ವೇಗೌಡರ ಸಂಬಂಧ ಮತ್ತಷ್ಟು ಗಟ್ಟಿಗೊಂಡಿತ್ತು.





ಆದರೆ ಪರಿಸ್ಥಿತಿಯೇ ಉಲ್ಟಾ ಹೊಡೆಯಿತು; ಯಡ್ಡಿಗೆ ಕೈಕೊಟ್ಟ ಸದಾಗೌಡರು ದೇವೇಗೌಡರ ಜೊತೆ ಕೈಜೋಡಿಸಿಬಿಟ್ಟರು. ಬೆಂಗಳೂರಿನ ವಿಷಯದಲ್ಲಿ ಕಾಚಾಚಾರಕ್ಕೂ ಅಶೋಕ್‌ರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಪಾಲಿಕೆಗೆ ಮಂಜೂರಾಗಬೇಕಿದ್ದ ಸಾವಿರ ಕೋಟಿಯ ಅನುದಾನಕ್ಕೂ ಅಡ್ಡಗಾಲಿಟ್ಟರು. ಹಿಂದೆ ಯಡ್ಡಿ ಕೊಟ್ಟಂತೆ ನೂರಾರು ಕೋಟಿ ಲೆಕ್ಕದ ಅಭಿವೃದ್ಧಿ ನಿಧಿಯನ್ನೂ ಬಿಡುಗಡೆ ಮಾಡಲಿಲ್ಲ. ಬೆಂಗಳೂರಿನ ಬಹುತೇಕ ಶಾಸಕರೆಲ್ಲ ಅಶೋಕ್ ಬಳಿ ಸದಾಗೌಡರ ವಿರುದ್ಧ ಅಸಮಾಧಾನ ತೋಡಿಕೊಂಡರೆ ಅದಕ್ಕೆ ಅಶೋಕ್ ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರು. ಒಂದೆಡೆ ತನ್ನ ಒಕ್ಕಲಿಗ ಸಾಮ್ರಾಜ್ಯಕ್ಕೂ ಕುತ್ತು, ಇನ್ನೊಂದೆಡೆ ಸದಾಗೌಡರನ್ನು ಮೆರೆಸಲು ದೇವೇಗೌಡರೇ ವಹಿಸಿದ ಆಸಕ್ತಿ, ಪಾಲಿಕೆಗೆ ದುಡ್ಡು ಬರುತ್ತಿಲ್ಲವೆಂದರೆ ತನ್ನ ಬೆಂಬಲಿಗ ಶಾಸಕರಿಗೂ ಉಪವಾಸ. ಇನ್ನಾವ ಪುರುಷಾರ್ಥಕ್ಕೆ ತಾನು ಯಡ್ಡಿ ವಿರೋಧಿ ಪಾಳಯದಲ್ಲಿರಬೇಕು?

ಸದಾನಂದ ಗೌಡರ ಬೆನ್ನಿಗೆ ದೇವೇಗೌಡ ನಿಂತಮೇಲೆ, ತನ್ನದೇ ಗೌಡರ ಪಾಳೇಪಟ್ಟನ್ನಾದರೂ ಉಳಿಸಿಕೊಳ್ಳಬೇಕಲ್ಲವೇ? ಅದಕ್ಕೇ ಯಡ್ಡಿಯ ಜೊತೆ ಕೈಜೋಡಿಸಿದ್ದಾರೆ. ಯಡ್ಡಿಗೊಬ್ಬ ಒಕ್ಕಲಿಗರ ನಾಯಕಬೇಕು. ಅಶೋಕ್‌ಗೊಬ್ಬ ಲಿಂಗಾಯತರ ಗುರು ಬೇಕು.

...ನ ಎದಿರೇಟು. 'ಮುಖ್ಯಮಂತ್ರಿ ಸದಾನಂದ ...ೂರಪ್ಪನವರಿಗೆ ಕೊಟ್ಟ ತನ್ನ ಮಾತನ್ನು ...ಸಿ. ಯಡಿಯೂರಪ್ಪನವರ ಬಗ್ಗೆ ಕನಿಷ್ಠ ...ವರಿಗಿಲ್ಲ ಅಂದಮೇಲೆ ಅಂಥವರನ್ನು ...ಪ್ರಯೋಜನ? ದೇವೇಗೌಡರ ಜೊತೆ,



...ೊತೆ ಮಾತಾಡ್ತಾರೆ. ಯಡಿಯೂರಪ್ಪನವರ ...ೀದು ಕಷ್ಟವಾ?'

...ಕಾಚಾರ್ಯ ಮುಖ್ಯಮಂತ್ರಿ ಸದಾನಂದ ...ಹಾಕಿದ ವಿಟಾಗಿತ್ತು, ಅಲ್ಲಿಗೆ ಸಂಕ್ರಾಂತಿಯ ...ಳಿಯ ಬಗ್ಗೆ ಆರೆಸ್ಸೆಸ್ ವರಿಷ್ಠರಿಗೆಲ್ಲ ...ಗಿತ್ತು. ಇದು ಏಕಾಏಕಿ ಯಡ್ಡಿ ಬಣ ...ತರ ವಿರುದ್ಧ ನಡೆಸಿದ ದಾಳಿಯಷ್ಟೇ ... ಇಪ್ಪತ್ತೋ ಇಪ್ಪತ್ತೈದೋ ಶಾಸಕರನ್ನು ...ಾರನಡೆದೆನೆಂದರೆ ಸದಾನಂದ ಗೌಡರ ...ದಿಯನ್ನು ಉಳಿಸಲು ಜೆಡಿಎಸ್ ಬಿಜೆಪಿ ...ಸಲು ತುದಿಗಾಲ ಮೇಲೆ ನಿಂತಿದೆಯೆಂಬ ...ೀ ಯಡ್ಡಿಗೆ ಸಿಕ್ಕಾಗಿತ್ತು. ಯಡ್ಡಿಯ ...ರ್ಯಾಚರಣೆಯನ್ನು ನಿಷ್ಕ್ರಿಯಗೊಳಿಸುವ ...ನ್ನು ಸದಾನಂದ ಗೌಡ ಸದ್ದಿಲ್ಲದೆ ...ು.

ಕಲ್ಲಡ್ಕ ಭಟ್ಟನ ಕಾಲಿಗೆ

ಯಡ್ಡಿಯಿಂದೇನಾದರೂ ಸರ್ಕಾರಕ್ಕೆ ಗಂಡಾಂತರ ಬಂತೆಂದರೆ ಸದಾನಂದ ಗೌಡರ ಕೈಹಿಡಿಯಲು ಜೆಡಿಎಸ್ ಅಣಿಯಾಗುವಂತೆ ಒಳಗೊಳಗೇ ಕುಮಾರಸ್ವಾಮಿಯನ್ನು ಪಳಗಿಸಿಕೊಂಡ ಸದಾನಂದ ಗೌಡ ಹಾಕಿದ ಮತ್ತೊಂದು ಪೆಟ್ಟೆಂದರೆ ರಾತ್ರೋರಾತ್ರಿ ಅನಂತ್ ಮತ್ತು ಈಶ್ವರಪ್ಪರ ಜೊತೆ ಕೈಜೋಡಿಸಿದ್ದು. ಕಾಪು ಶಾಸಕ ಲಾಲಾಜಿ ಮೆಂಡನ್, ಉಡುಪಿಯ ರಘುಪತಿ ಭಟ್, ಬೈಂದೂರಿನ ಲಕ್ಷ್ಮಿನಾರಾಯಣ, ಮಂಗಳೂರಿನ ಕೃಷ್ಣ ಪಾಲೇಮಾರ್, ಯೋಗೀಶ್ ಭಟ್, ಪುತ್ತೂರಿನ ಮಲ್ಲಿಕಾ ಪ್ರಸಾದ್ ಮತ್ತು ಸುಳ್ಯದ ಅಂಗಾರ ಮುಂತಾದ ಅರ್ಧ ಡಜನ್ ಬಿಜೆಪಿ ಶಾಸಕರು ಶೆಟ್ಟರ್ ವಿರುದ್ಧ ತನ್ನ ಪರ ನಿಂತಿದ್ದು ಯಡ್ಡಿಯ ಕಾರಣಕ್ಕಲ್ಲದೆ ತನ್ನ ವೈಯಕ್ತಿಕ ಸಂಬಂಧದಿಂದಾಗಿ ಮಾತ್ರ ಎಂಬುದು ಸದಾನಂದ ಗೌಡರಿಗೆ ಪಕ್ಕಾ ಗೊತ್ತಿತ್ತು.

ಯಡ್ಡಿಯ ದಾಳಿಯ ಮುನ್ಸೂಚನೆಯನ್ನು ಗ್ರಹಿಸಿಯೇ ಸದಾನಂದ ಗೌಡ ಪದೇಪದೇ ಆರೆಸ್ಸೆಸ್ ನಾಯಕರನ್ನು ಬುಟ್ಟಿಗೆ ಹಾಕಿಕೊಳ್ಳುತ್ತಲೇ ಬಂದರು. ಮುಖ್ಯಮಂತ್ರಿಯಾದ ತಿಂಗಳಲ್ಲೇ ಒಂದಲ್ಲ ಮೂರು ಬಾರಿ ಪುತ್ತೂರಿಗೆ ಭೇಟಿ ಕೊಟ್ಟು ಕರಾವಳಿಯ ಕಾರ್ಕೋಟಕ ಕಲ್ಲಡ್ಕ ಪ್ರಭಾಕರ ಭಟ್ಟನನ್ನು ಕಂಡರು. ಮುಖ್ಯಮಂತ್ರಿಯೊಬ್ಬ ಬೆಂಗಳೂರಿನಲ್ಲಿ ಮಹಾನ್ ಸಜ್ಜನನಂತೆ ಪೋಜು ಕೊಟ್ಟು ಪದೇಪದೇ ಕಲ್ಲಡ್ಕ ಭಟ್ಟನ ಕಾಲಿಗೆ ಬಿದ್ದು ಹೋಗುತ್ತಾನೆಂದರೆ ಏನೋ ಅಪಾಯ ಕಾದಿದೆಯೆಂಬುದು ಯಡ್ಡಿಗೆ ಖಾತರಿಯಾಗಿತ್ತು. ಹಾಗೇ ಕಲ್ಲಡ್ಕ ಭಟ್ಟನಿಗೆ ಪೂಸಿ ಹೊಡೆದ ಸದಾನಂದ ಗೌಡ ತನ್ನ ಮತ್ತೊಬ್ಬ ಆರೆಸ್ಸೆಸ್ ಗುರು ರಾಮಭಟ್ಟನನ್ನೂ ಸರಿ ಮಾಡಿಕೊಂಡರು.

ಇದರ ಪರಿಣಾಮ ಮಾತ್ರ ಕರಾವಳಿಯ ನೆಮ್ಮದಿಗೆ ಕಂಟಕವಾಯಿತು. ಯಾರೋ ಮುಸ್ಲಿಂ ವಿದ್ಯಾರ್ಥಿಯೊಬ್ಬನ ಜೊತೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಹಿಂದೂ ಯುವತಿಯೊಬ್ಬಳನ್ನು ಸುಳ್ಯದ ಆರೆಸ್ಸೆಸ್ ಕಾರ್ಯಕರ್ತರು ಹಿಡಿದು ನಡುರಸ್ತೆಯಲ್ಲೇ ಬಡಿದರು. ಪೊಲೀಸರು ಅವರಿಬ್ಬರನ್ನೂ ಥಳಿಸದೇ ಬಿಟ್ಟರೆಂದು ಸಂಘ ಪರಿವಾರ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿತು. ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದವರನ್ನು ಬಂಧಿಸುವಂತೆ ದಕ್ಷಿಣ ಕನ್ನಡದ ಎಸ್ಪಿ ಲಾಗೂರಾಮ್ ನಿಷ್ಠುರ ಕ್ರಮಕೈಗೊಂಡರೆ ಅಂಥ ಪೊಲೀಸ್ ಅಧಿಕಾರಿಯನ್ನೇ ಎತ್ತಂಗಡಿ ಮಾಡಿಸುತ್ತೇನೆಂದು ಕಲ್ಲಡ್ಕ ಭಟ್ಟ ಶಪಥಗೈದ. ರಾತ್ರೋರಾತ್ರಿ ಎಸ್ಪಿ ಲಾಗೂರಾಮ್ ಅವರನ್ನು ಎತ್ತಂಗಡಿ ಮಾಡಿ ಆ ಜಾಗಕ್ಕೆ ಅಭಿಷೇಕ್ ಗೋಯಲ್‌ರನ್ನು ತರಲಾಯ್ತು. ಜೊತೆಗೆ ಆರೆಸ್ಸೆಸ್ ಪುಂಡರ ವಿರುದ್ಧ ಕ್ರಮ ಜರುಗಿಸಿದ ಐವರು ಪೊಲೀಸ್ ಅಧಿಕಾರಿಗಳನ್ನೂ ಎತ್ತಂಗಡಿ ಮಾಡಲಾಯ್ತು.

ಜಾರಕಿಹೊಳಿ ಪಡೆ

ಸುಳ್ಯ ಘಟನೆಯಲ್ಲಿ ಪೊಲೀಸರಿಗಾದ ದುರ್ಗತಿ ಕಂಡು ದಕ್ಷ ಐಪಿಎಸ್ ಎಂದೇ ಚಾಲ್ತಿಯಲ್ಲಿರುವ ಐಜಿಪಿ ವೃಷಭಣ್ಣ ಹಣೆಹಣೆ ಚಚ್ಚಿಕೊಂಡರು. ಇಷ್ಟಾಗಿದ್ದೇ ತಡ ಮಸ್ತಿಗೆ ಬಿದ್ದ ಚಡ್ಡಿ ಪುಂಡರು ಕರಾವಳಿಯ ನಾಲ್ಕೈದು ಕಡೆ ಮುಸ್ಲಿಂ ಮತ್ತು ಕ್ರೈಸ್ತರ ಮೇಲೆ ಗೂಂಡಾಗಿರಿಗಿಳಿದರು. ಪೊಲೀಸರ ಅಸಹಾಯಕತೆ ಮತ್ತು ಅಲ್ಪಸಂಖ್ಯಾತರ ದುರ್ಗತಿಗೆ ಕಾರಣವಾಗಿದ್ದು ಸಿ.ಎಂ. ಸದಾನಂದ ಗೌಡ ಮತ್ತು ಆರೆಸ್ಸೆಸ್ ಕ್ರಿಮಿ ಕಲ್ಲಡ್ಕ ಭಟ್ಟನ ಈ ನೆಂಟಸ್ತಿಕೆಯೊಂದೇ.

ಇಷ್ಟಾದಮೇಲೆ ಆರೆಸ್ಸೆಸ್ ತನ್ನ ಬೆನ್ನಿಗೇ ನಿಲ್ಲುವುದು ಸದಾನಂದ ಗೌಡಗೆ ಖಾತರಿಯಾಗಿದೆ. ಇನ್ನು ಅನಂತ್ ಗುಂಪು ಜೊತೆಗೆ ಈಶ್ವರಪ್ಪ, ಶೆಟ್ಟರ್ ಮುಂತಾದವರೆಲ್ಲ ಮುಖ್ಯ ಮಂತ್ರಿಯ ಬೆನ್ನಿಗೆ ನಿಂತರೆಂದರೆ ಕೊನೆಗೆ ತನ್ನ ಪರ ನಿಲ್ಲಲು ಉಳಿಯುವುದು ಕೇವಲ ಇಪ್ಪತ್ತೋ ಮೂವತ್ತೋ ಶಾಸಕರು ಮಾತ್ರ. ಉಳಿದಂತೆ ಪಕ್ಷೇತರರು ಮತ್ತು ಅನರ್ಹ ಗೊಂಡಿದ್ದ ಜಾರಕಿಹೊಳಿ, ಗೂಳಿಹಟ್ಟಿ, ಶಿವನಗೌಡ, ವೆಂಕಟರಮಣಪ್ಪ ಮುಂತಾ ದವರೆಲ್ಲ ಸೇರಿ ಬರೋಬ್ಬರಿ ಹನ್ನೊಂದು ಮಂದಿ ಶಾಸಕರು ಕೈಬಿಟ್ಟಂತಾಗುತ್ತದೆ. ಇವರೊಂದಿಗೆ ದಕ್ಷಿಣ ಕನ್ನಡ-ಉಡುಪಿಯ 7 ಮಂದಿ ಬಿಜೆಪಿ ಶಾಸಕರೂ ಸೇರಿದರೆ ತನ್ನ ಪಾಳಯದ ಮತ್ತಷ್ಟು ಮಂದಿ ಎದುರು ಗುಂಪಿಗೆ ಸೇರಿದಂತಾಯ್ತು. ಸಂಕ್ರಾಂತಿಯ ಗಡುವು ಕೊಟ್ಟಾಗಿದೆ. ಬೆಂಬಲಿಗರಾದ ಹರೀಶ್, ಸುರೇಶ್ ಗೌಡ, ರೇಣುಕಾಚಾರ್ಯ ಮುಂತಾದವರೆಲ್ಲ ದಾಳಿ ಶುರುವಿಟ್ಟಾಗಿದೆ. ಕರಂದ್ಲಾಜೆ, ನಿರಾಣಿ, ಅಶೋಕ್ ಥರದವರೇ ದೆಹಲಿಗೆ ಹೋಗಿ ಹೈಕಮಾಂಡ್‌ಗೆ ಎಚ್ಚರಿಕೆ ರವಾನಿಸಿದ್ದೂ ಆಗಿದೆ.



ಪಕ್ಷದಿಂದಾಚೆಗೆ ಒಂದು ಕಾಲಿಟ್ಟು ಹೊರಹೋಗುವ ಮಾನಸಿಕ ಸಿದ್ಧತೆ ಮಾಡಿಕೊಂಡೇ ಕೂತಿದ್ದ ಯಡ್ಡಿಗೆ ಆರೆಸ್ಸೆಸ್ ಸಂದೇಶ ತಂದ ಸಂತೋಷ್‌ಜೀ ಹುಲ್ಲುಕಡ್ಡಿಯ ಆಸರೆಯಂತೆ ಕಂಡಿದ್ದರಲ್ಲಿ ಯಾವ ಅಚ್ಚರಿಯಿದ್ದೀತು? ಯಡ್ಡಿಯ ದುರ್ಗತಿ, ದುಮ್ಮಾನ ಕಂಡೇ ಆರೆಸ್ಸೆಸ್ ವರಿಷ್ಠ ಮೈ.ಚ. ಜಯದೇವ ಅಂತಿಮ ಕಾರ್ಯಾಚರಣೆಗೆ ಅಣಿಯಾಗಿದ್ದರು. ಯಡ್ಡಿಗೆ ಮುಜುಗರವಾಗದಿರಲಿ ಎಂದೇ ಅವರ ಪರಮಾಪ್ತ ಲೆಹರ್ ಸಿಂಗ್ ಮನೆಯಲ್ಲೇ ಪಂಚಾಯ್ತಿ ಏರ್ಪಡಿಸಲಾಗಿತ್ತು. ಯಡ್ಡಿಯ ತಾಕತ್ತು, ಬಿಜೆಪಿಗೆ ಒದಗಲಿರುವ ವಿಪತ್ತು ಎಲ್ಲವನ್ನೂ ಲೆಕ್ಕ ಹಾಕಿಯೇ ಯಡ್ಡಿಯ ಜೊತೆ ಹೇಗೆ ವ್ಯವಹರಿಸಬೇಕೆಂಬುದಕ್ಕೆ ಬೆಳಗ್ಗೆಯೇ ಆರೆಸ್ಸೆಸ್ ವರಿಷ್ಠರೆಲ್ಲ ಕೆ. ನರಹರಿಯವರ ಮನೆಯಲ್ಲಿ ಸಭೆ ಸೇರಿದ್ದು, ಯಡ್ಡಿಯ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸಿತ್ತು.

ಅಧ್ಯಕ್ಷಗಾದಿ ಪಕ್ಕಾ

ಲೆಹರ್ ಸಿಂಗ್ ಮನೆಯಲ್ಲಿ ಸೇರಿದವರಾದರೂ ಎಂಥವರು. ಕಲ್ಲಡ್ಕ ಭಟ್ಟ, ಮೈ.ಚ. ಜಯದೇವ, ಕೋರ್ ಕಮಿಟಿಯ ಸತೀಶ್ ಕೆ.ನರಹರಿ, ಮಂಗೇಶ್ ಭೇಂಡೆ, ಮುಕುಂದ್, ಎಂ.ಪಿ. ಕುಮಾರ್ ಮತ್ತು ಸಂತೋಷ್‌ಜಿ. ಇವರೆಲ್ಲ ಆರೆಸ್ಸೆಸ್‌ನ ಆಯಕಟ್ಟಿನ ಆಸಾಮಿಗಳೇ. ಮೊದಲು ಯಡ್ಡಿಯ ಜೊತೆ ಆರೆಸ್ಸೆಸ್ ಸಮಾಲೋಚನೆಯಾಗಿದೆ. ಯಡ್ಡಿ ತನ್ನೆಲ್ಲಾ ಅಸಮಾಧಾನವನ್ನು ಹೊರಹಾಕುತ್ತಿದ್ದರೆ ಆರೆಸ್ಸೆಸ್ ವರಿಷ್ಠರ್‍ಯಾರೂ ಕಿಮಿಕ್ಕೆನ್ನಲಿಲ್ಲ. ಆನಂತರ ಈಶ್ವರಪ್ಪ ಮತ್ತು ಸದಾನಂದ ಗೌಡರನ್ನು ಪ್ರತ್ಯೇಕವಾಗಿ ಮಾತಾಡಿಸಿದ್ದಾರೆ. ತದನಂತರ ಮೂವರನ್ನೂ ಒಟ್ಟಿಗೆ ಕೂರಿಸಿ ಬೈಠಕ್ ನಡೆಸಲಾಗಿದೆ.

ಇದೆಲ್ಲದರ ಪರಿಣಾಮವೆಂದರೆ ಯಡ್ಡಿ ಬಿಜೆಪಿಗೆ ಅನಿವಾರ್ಯವೆಂಬ ನಿರ್ಧಾರಕ್ಕೆ ಆರೆಸ್ಸೆಸ್ ಬಂದಿರುವುದು. ಈಶ್ವರಪ್ಪ ಮತ್ತು ಸದಾನಂದ ಗೌಡ ಇಬ್ಬರೂ ಯಡ್ಡಿಯ ಮಾರ್ಗದರ್ಶನದಲ್ಲೇ ನಡೆಯಬೇಕು. ಯಡ್ಡಿ ಸದ್ಯ ಯಾವುದೇ ಪದವಿಯ ಬಗ್ಗೆ ಹಠಕ್ಕೆ ಬೀಳಕೂಡದು. ಕನಿಷ್ಠ ಉತ್ತರದ ರಾಜ್ಯಗಳ ಚುನಾವಣೆ ಮುಗಿಯುವವರೆಗಾದರೂ ಸಹಿಸಿಕೊಂಡಿರಬೇಕು. ಅಲ್ಲಿಯತನಕ ಪಕ್ಷದ ವಿರುದ್ಧ ಯಡ್ಡಿ ದಾಳಿ ಮಾಡಬಾರದು ಸರ್ಕಾರದ ಯಾವುದೇ ಕಾರ್ಯಕ್ರಮದಿಂದ ಯಡ್ಡಿಯನ್ನು ದೂರವಿಡಕೂಡದು. ಸರ್ಕಾರದ ಪ್ರತಿಯೊಂದು ಕ್ರಮಗಳಿಗೂ ಯಡ್ಡಿಯ ಮರ್ಜಿ ಬೇಕೇಬೇಕು.

ಇದು ಯಡ್ಡಿಗೆ ಸಿಕ್ಕ ತಾತ್ಕಾಲಿಕ ವಿಜಯ ನಿಜ. ಹಾಗಂಥ ಇನ್ನೆಷ್ಟು ದಿನ ಯಡ್ಡಿ ಕೈಕಟ್ಟಿಕೂರಲು ಸಾಧ್ಯ?

ಸದ್ಯಕ್ಕೇನೋ ರಾಜ್ಯ ಬಿಜೆಪಿ ಅಧ್ಯಕ್ಷಗಾದಿ ಯಡ್ಡಿಗೆ ನಿಕ್ಕಿಯಾಗಿರಬಹುದು. ಆದರೆ ಮಾರ್ಚ್ ಹೊತ್ತಿಗದು ದಕ್ಕದೇ ಹೋದರೆ? ಯಡ್ಡಿಯ ಮೌನವೇನಿದ್ದರೂ ಅದು ಮಾರ್ಚ್‌ವರೆಗೆ ಮಾತ್ರ.

...ೀಶ್ ರೆಡ್ಡಿಯ ನಿಷ್ಠೆ ರಿಯಲ್ ಎಸ್ಟೇಟಿಗಷ್ಟೇ!

...ದಲ್ಲಿ ಸಂಚಿನ್ನಿಯೇ ...ಚೆಲ್ಲಿಗಿರುವ ಪ್ರತಿಯೊಬ್ಬ ...ಯ. ಬೆಂಗಳೂರಿನ 17 ...ಗಳ ಪೈಕಿ ಯಡ್ಡಿಯ ...ಯಲಹಂಕದ ವಿಶ್ವನಾಥ್, ...ಸಂದೀಶ್ ರೆಡ್ಡಿ, ...ನಗರದ ಎಂ. ಶ್ರೀನಿವಾಸ್. ...ಶಾಸಕಿ ಶೋಭಾ ಕರಂದ್ಲಾಜೆ ...ನಗರದ ಸುರೇಶ್ ಕುಮಾರ್ ...ಗಾಗಿ ಯಡ್ಡಿ ಚೆಲ್ಲಿಗಿದ್ದವರೆ. ...ಳಯಕ್ಕೆ ಬಂದರೆ ... ಮಾಪತಿಗೂ ಸಂಥ ...ಗೇ!



ವಿಶ್ವನಾಥ್

...ಯಡ್ಡಿಯ ಕಾಲಿಗೊಂದು ಕಹಿಸುದ್ದಿ ಬಂದಿದೆ. ಅದು ಕೆ.ಆರ್. ... ನಂದೀಶ್ ರೆಡ್ಡಿಯ ಬೇಲಿಜಗಿತ. ಯಡ್ಡಿ ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಅವರ ನಂಬಿಕಸ್ತ ಬಂಟನಂತಿದ್ದು ಎದುರಾಳಿ ಅಶೋಕ್ ವಿರುದ್ಧ ತೊಡೆತಟ್ಟಿದ ನಂದೀಶ್ ರೆಡ್ಡಿ ಯಡ್ಡಿ ಜೈಲುಪಾಲಾಗಿದ್ದೇ ತಡ ಅಶೋಕ್ ಪಾಳಯಕ್ಕೆ ಹಾರಿಬಿಟ್ಟ.

ಯಡ್ಡಿಗೆ ಸದಾನಂದ ಗೌಡ ಕೈಕೊಟ್ಟ ಫಲವೋ, ಅನಂತ್-ಈಶ್ವರಪ್ಪ ಜೊತೆ ಸದಾಗೌಡ ಸದ್ದಿಲ್ಲದೇ ಕೈಜೋಡಿಸಿದ್ದರ ಪರಿಣಾಮವೋ ಅಥವಾ ಯಡ್ಡಿ ವಿರುದ್ಧ ಹೈಕಮಾಂಡ್ ತಿರುಗಿಬಿದ್ದದ್ದರ ಕಾರಣಕ್ಕೋ ಗೊತ್ತಿಲ್ಲ, ನಂದೀಶ್ ರೆಡ್ಡಿಯ ಯಡ್ಡಿ ನಿಷ್ಠೆ ರಾತ್ರೋರಾತ್ರಿ ಬದಲಾಗಿತ್ತು. ತೀರ ಕೆದಕಿ ನೋಡಿದರೆ ಯಡ್ಡಿ ಮಗಳು ಅರುಣಾದೇವಿಗಾಗಿ ಮೂರು ಕೋಟಿ ವೆಚ್ಚದ ಬಂಗಲೆಯೊಂದನ್ನು ನಂದೀಶ್ ರೆಡ್ಡಿಯೇ ನಿಂತು ಕೆ.ಆರ್. ಪುರದಲ್ಲಿ ಕಟ್ಟಿಸುತ್ತಿದ್ದ. ದುಡ್ಡುಕಾಸಿನ ವಿಷಯದಲ್ಲಿ ಮೈಮನಸ್ಸು ಬಂತೋ, ಸೈಟಿನ ವಿಷಯದಲ್ಲಿ ತಕರಾರಾಯಿತೋ ಗೊತ್ತಿಲ್ಲ, ನಂದೀಶ್ ರೆಡ್ಡಿ ಏಕಾಏಕಿ ಯಡ್ಡಿಗೆ ಕೈಕೊಟ್ಟು ಅಶೋಕ್ ಪಾಳಯಕ್ಕೆ ನೆಗೆದಿದ್ದ.



ನಂದೀಶ್ ರೆಡ್ಡಿ

ಯಡ್ಡಿಗೆ ಅಧಿಕಾರವಿಲ್ಲ ಎಂಬುದು ಒಂದು ಕಾರಣವಾಗಿರಲು ಸಾಧ್ಯವೇ ಇಲ್ಲ. ನಂದೀಶ್ ರೆಡ್ಡಿ ದೋಚಿದ ಎಕರೆಗಟ್ಟಲೇ ಸರ್ಕಾರಿ ಭೂಮಿ ದಕ್ಕಿಸಿಕೊಳ್ಳಲು ಸಿ.ಎಂ. ಸದಾಗೌಡರ ಕೃಪೆ ಬೇಕೇಬೇಕು. ಅಶೋಕ್ ಹೇಳಿಕೇಳಿ ಗೃಹಮಂತ್ರಿಯಾದ್ದರಿಂದ ದಲಿತ ನಾಯಕ ಕೆಂಪಾಪುರ ಮೂರ್ತಿಯ ಕೊಲೆ ಕೇಸಿನಿಂದ ತನ್ನನ್ನು ಬಚಾವು ಮಾಡುವುದಕ್ಕೂ ಅಶೋಕ್ ನೆರವು ಅನಿವಾರ್ಯ. ದೋಚಿದ ಸರ್ಕಾರಿ ಭೂಮಿ, ಮಾಡಿಸಿದ ಕೊಲೆ, ಹೊಡೆದ ಕೊಳ್ಳೆ, ರಿಯಲ್ ಎಸ್ಟೇಟ್ ದಂಧೆ ಎಲ್ಲವೂ ಕೈಗೂಡಬೇಕೆಂದರೆ ಅಧಿಕಾರಹೀನ ಯಡ್ಡಿಯನ್ನು ನೆಚ್ಚಿ ಏನು ಲಾಭ?

ನಂದೀಶ್ ರೆಡ್ಡಿಯ ನಿಯತ್ತು ಕೆಡಲು ಈ ಯಾವ ಪ್ರಸಂಗ ಕಾರಣವಾಗಿರಬಹುದು? ನಾಳೆ ಸದಾಗೌಡ ಇಳಿದನೆಂದರೆ, ಅಶೋಕ್ ಹಳ್ಳಕ್ಕೆ ಬಿದ್ದರೆಂದರೆ ಇದೇ ನಂದೀಶ್ ರೆಡ್ಡಿ ಜೊತೆ ನಿಲ್ಲುತ್ತಾನೆನ್ನುವುದಕ್ಕೆ ಏನು ಗ್ಯಾರಂಟಿ? ಇರುವೆಗಳಿರುವುದು ಸಕ್ಕರೆಯಿದ್ದಲ್ಲಿ ಮಾತ್ರ ತಾನೆ?

ಮೇಲ್ಜಾತಿಯುವರ ಬದಲಾಗದ ಮನಸ್ಥಿತಿ

ದಲಿತರ ಮೇಲಿನ ಹಲ್ಲೆಗಳು ಭಾರತದ ಹಳ್ಳಿಗಳಿಗೆ ಹೊಸದೇನಲ್ಲ; ಕರ್ನಾಟಕ ಈ ಮಾತಿಗೆ ಅಪವಾದವೂ ಅಲ್ಲ. ಅತಿ ಕ್ಷುಲ್ಲಕ ಕಾರಣಕ್ಕೂ ದಲಿತರ ಮೇಲೆರಗಲು ಈ ಜನ ಮಾನಸಿಕವಾಗಿ ಸಿದ್ಧರಾಗಿರುತ್ತಾರೆ. ನೆಪ ಸಿಕ್ಕಾಗ ಅವರ ಕೈಗೆ ಆ ಕ್ಷಣವೇ ಹತ್ಯಾರಗಳು ಬಂದುಬಿಡುತ್ತವೆ. ದಲಿತರ ಬದುಕು ಮೂರಾಬಟ್ಟೆಯಾಗುತ್ತದೆ. ಈ ಸಮಸ್ಯೆಯ ಮೂಲದಲ್ಲಿರುವುದು ಮೇಲ್ಜಾತಿಯವರನ್ನು ಇನ್ನೂ ಬಿಟ್ಟಿಲ್ಲದ ಜಾತಿ ಅಹಂಕಾರ ಮತ್ತು ದಲಿತರ ಏಳಿಗೆಯನ್ನು ಕಂಡರೆ ಅವರಿಗಿರುವ ಅಸಹನೆ.

ಆ ಊರಿನಲ್ಲಿ ದಲಿತರ ಮೇಲಿನ ದಾಳಿ ಇದು ಮೊದಲನೆಯದೇನಲ್ಲ. ಈ ಹಿಂದೆಯೂ, ಈಗ ಸತ್ತಿರುವ ರಮೇಶ್ ರೆಡ್ಡಿಯ ನಾಯಕತ್ವದಲ್ಲಿಯೇ, ಇಲ್ಲಿನ ದಲಿತರ ಮೇಲೆ ದಾಳಿ ನಡೆದಿತ್ತು. ಬಹಳ ವರ್ಷಗಳ ಹಿಂದೆ ಇಲ್ಲಿನ ದಲಿತರಿಗೂ ಸ್ವಲ್ಪ ಭೂಮಿ ಇದ್ದು ಅದೆಲ್ಲವನ್ನೂ ರೆಡ್ಡಿಗಳು ಕಬಳಿಸಿದ್ದಾರೆಂದು ದಲಿತರು ದೂರುತ್ತಾರೆ. ತಮಗೆ ಸೂಕ್ತ ರಕ್ಷಣೆ ನೀಡಬೇಕೆಂದೂ, ತಮಗಾಗಿರುವ ಆಸ್ತಿ ನಷ್ಟವನ್ನು ಸರಿಯಾಗಿ ಲೆಕ್ಕ ಹಾಕಿ ಅದಕ್ಕೆ ತಕ್ಕಂತೆ ಪರಿಹಾರವನ್ನು ನೀಡಬೇಕೆಂದೂ ಕಷ್ಟಕ್ಕೊಳಗಾದವರ ಒತ್ತಾಯವಾಗಿದೆ.

• ನಗರಗೆರೆ ರಮೇಶ್

ಬೆಂಗಳೂರಿಗೆ ತೀರ ಹತ್ತಿರವಿರುವ ಮರಸೂರಿನಲ್ಲಿ



ನಾಶವಾಗಿರುವ ದಲಿತರ ಮನೆ....

2011, ಡಿಸೆಂಬರ್ 18 ರಂದು ನಡೆದ ಘಟನೆ ಈ ಮಾತನ್ನು ಪುಷ್ಟೀಕರಿಸುತ್ತದೆ. ಆನೆಕಲ್ಲು ತಾಲ್ಲೂಕಿನಲ್ಲಿರುವ ಈ ಹಳ್ಳಿ ಬೆಂಗಳೂರಿನಿಂದ ಕೇವಲ 30 ಕಿಲೋ ಮೀಟರುಗಳ ದೂರದಲ್ಲಿ, ಚಂದಾಪುರದ ಹತ್ತಿರವಿದೆ. 400 ರಿಂದ 500 ಮನೆಗಳಿರುವ ರೆಡ್ಡಿಗಳ ನಂತರ ಅತಿ ಹೆಚ್ಚು ಸಂಖ್ಯೆಯಲ್ಲಿರುವವರೆಂದರೆ ದಲಿತರು. ಇನ್ನುಳಿದ ಜಾತಿಗಳ ಜನರು ತುಂಬಾ ಕಡಿಮೆ ಸಂಖ್ಯೆಯಲ್ಲಿರುವ ಈ ಹಳ್ಳಿ ನಗರದ ಹಲವು ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಆ ಹಳ್ಳಿಯ ಕೃಷಿ ಯೋಗ್ಯ ಜಮೀನು ರೆಡ್ಡಿಗಳ ಕೈಯಲ್ಲಿದ್ದು ಕೃಷಿಕೂಲಿ ಮಾಡುವ ದಲಿತರು ಅವರ ಹೊಲಗಳಲ್ಲಿ ದುಡಿಯುತ್ತಾರೆ. ಹಲವರು ಹತ್ತಿರದ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿದ್ದಾರೆ. ಆ ಮೂಲಕ ಅವರು ಜಮೀನುದಾರರ ಹಿಡಿತದಿಂದ ದೂರ ಉಳಿದಿದ್ದಾರೆ. ಅವರಲ್ಲಿ ಕೆಲವರು, ಕೃಷ್ಣಪ್ಪನಂಥವರು, ರಿಯಲ್ ಎಸ್ಟೇಟ್ ವ್ಯಾಪಾರಕ್ಕೂ ಕಾಲಿಟ್ಟು ಸಾಕಷ್ಟು ಸ್ಥಿತಿವಂತರೂ ಆಗಿದ್ದಾರೆ.

ತನ್ನ ಹಣದ ಬಲದ ಕಾರಣದಿಂದಾಗಿ ಕೃಷ್ಣಪ್ಪ ಆ ಪ್ರಾಂತ್ಯದ ದಲಿತ ನಾಯಕನೂ ಆಗಿ ಬೆಳೆದಿದ್ದ. ಮರಸೂರನ್ನು ಪ್ರವೇಶಿಸುವಲ್ಲಿಯೇ ಅಂಬೇಡ್ಕರ್ ಭವನಕ್ಕಾಗಿ ಸ್ವಲ್ಪ ಜಮೀನನ್ನೂ ದಲಿತ ಸಂಘದ ಉಪಯೋಗಕ್ಕೆ ಪಂಚಾಯತಿಯಿಂದ ಮಂಜೂರು ಮಾಡಿಸಿಕೊಂಡಿದ್ದ. ಆ ಭೂಮಿಯ ಪಕ್ಕದಲ್ಲಿಯೇ ಪುಷ್ಕರಣಿ ರೆಡ್ಡಿಯೆಂಬುವವನ ಮನೆಯಿದ್ದು ತನ್ನ ಮನೆಯ ಪಕ್ಕದಲ್ಲಿಯೇ ಅಂಬೇಡ್ಕರ್ ಭವನದ ನಿರ್ಮಾಣವಾಗುವುದು ಆ ರೆಡ್ಡಿಗೆ ಸಹಿಸಲಾರದ ವಿಷಯವಾಗಿತ್ತು. ಅಂಬೇಡ್ಕರ ಭವನವನ್ನು ಬೇರೆಕಡೆ ಕಟ್ಟಿಕೊಳ್ಳುವಂತೆ ಕೃಷ್ಣಪ್ಪನ ಮೇಲೆ ಒತ್ತಾಯವೂ ಬಂದಿತ್ತು. ಡಿಸೆಂಬರ್ 18ರಂದು ಬೆಳಗ್ಗೆ ಆ ವಿಷಯದ ಬಗ್ಗೆ ಮಾತನಾಡಲು ಕೃಷ್ಣಪ್ಪನಿಗೆ ಕರೆಹೋಗಿ, ಪುಷ್ಕರಿಣಿರೆಡ್ಡಿಯ ಮನೆಯ ಹತ್ತಿರ ಮಾತುಕತೆ ನಡೆದವು. ಆ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ಪುಷ್ಕರಿಣಿ ರೆಡ್ಡಿ ಮತ್ತು ರಮೇಶ ರೆಡ್ಡಿಯ ಕಡೆಯವರು ಕೃಷ್ಣಪ್ಪನ ಮೇಲೆ ಹಲ್ಲೆ ಮಾಡಿದರು. ಏಟುತಿಂದ ಕೃಷ್ಣಪ್ಪ ಅಲ್ಲಿಂದ ಓಡಿಹೋಗುವ ಪ್ರಯತ್ನ ಮಾಡಿದರೂ, ರೆಡ್ಡಿಗಳ ಕಡೆಯವರು ಅವನನ್ನು ಅಟ್ಟಿಸಿಕೊಂಡು ಹೋದರು. ಆ ಸಂದರ್ಭದಲ್ಲಿ ಕೃಷ್ಣಪ್ಪ ತನ್ನ ಹತ್ತಿರವಿದ್ದ ಪಿಸ್ತೂಲಿನಿಂದ ಗುಂಡುಹಾರಿಸಿದಾಗ ಅದರ ಏಟಿಗೆ ರಮೇಶ್ ರೆಡ್ಡಿ ಸತ್ತುಬಿದ್ದ. ನಂತರ ಕೃಷ್ಣಪ್ಪ ಆನೇಕಲ್ ಪೊಲೀಸ್ ಸ್ಟೇಷನ್ನಿನಲ್ಲಿ ಶರಣಾದ.

ಇಲ್ಲಿಯವರೆಗೆ ನಡೆದದ್ದು ಇಬ್ಬರ ನಡುವೆ ನಡೆದ ಜಗಳದಂತೆ ಮತ್ತು ಅದು ಒಂದು ಕೊಲೆಯಲ್ಲಿ ಪರ್ಯವಸಾನಗೊಂಡಂತೆ ಕಾಣುತ್ತದೆ. ಆದರೆ ಇದಾದನಂತರ ನಡೆದದ್ದು ಘನಘೋರ ಕರ್ಮಕಾಂಡ. ಸತ್ತ ರಮೇಶರೆಡ್ಡಿ ಆ ಪ್ರಾಂತ್ಯದ ರೆಡ್ಡಿಯುವಕರ ನಾಯಕ. ರೆಡ್ಡಿ ಸಂಘದ ಪದಾಧಿಕಾರಿ ಮತ್ತು ಬಿಜೆಪಿಯ ಕಾರ್ಯಕರ್ತ. ಮೊದಲಿನಿಂದಲೂ ತನ್ನ ರೌಡಿ ಕೃತ್ಯಗಳಿಗೆ ಹೆಸರಾದವನು. ಅವನ ನಾಯಕತ್ವದಲ್ಲಿ ಹಲವು ಬಾರಿ ದಲಿತರಿಗೆ ಕಿರುಕುಳಗಳನ್ನು ನೀಡಲಾದ ಉದಾಹರಣೆಗಳಿವೆ.

ಇಂಥಾ ರಮೇಶರೆಡ್ಡಿ ಸತ್ತು ಬಿದ್ದಾಗ ಅವನ ಅನುಯಾಯಿಗಳು ಹಳ್ಳಿಯಲ್ಲಿ ಭೀಕರ ದೃಶ್ಯಗಳನ್ನೇ ಸೃಷ್ಟಿಸಿದರು. ಮೊದಲು ರಸ್ತೆಯ ಪಕ್ಕದಲ್ಲಿದ್ದ ಕೃಷ್ಣಪ್ಪನ ಕಾರನ್ನು ಸಂಪೂರ್ಣ ಸುಟ್ಟು ಹಾಕಿದರು. ನಂತರ ಕೃಷ್ಣಪ್ಪ, ಅವನ ತಮ್ಮಂದಿರು ಮತ್ತು ಅವನ ಭಾವಮೈದುನಂದಿರ ಎರಡು ಮನೆಗಳನ್ನು ಜೆಸಿಬಿ ಯಂತ್ರವನ್ನು ಬಳಸಿ ಕೆಡವಿಹಾಕಿದರು. ಆಮೇಲೆ ಆ ಮನೆಗಳಿಗೆ ಬೆಂಕಿ ಹಚ್ಚಿದರು. ಊರಿನ ದಲಿತರು ಹೇಳುವ ಪ್ರಕಾರ ಈ ಎಲ್ಲ ಕುಕೃತ್ಯಗಳೂ ಆ ಹೊತ್ತಿಗಾಗಲೇ ಅಲ್ಲಿಗೆ ಬಂದಿದ್ದ ಹಿರಿಯ ಪೊಲೀಸ್ ಅಧಿಕಾರಿಗಳು ನೋಡುತ್ತಿರುವಾಗಲೇ ನಡೆದವು. ಆದರೆ ಕಡಿಮೆ ಸಂಖ್ಯೆಯಲ್ಲಿದ್ದ ಪೊಲೀಸರೂ ಏನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆ ನಾಲ್ಕು ಮನೆಗಳ ಮೇಲೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ ನಂತರ ರೆಡ್ಡಿಗಳ ಕ್ರೋಧ ಇತರ ದಲಿತರ ಮನೆಗಳ ಕಡೆಗೆ ತಿರುಗಿತು. ಇಲ್ಲಿ ಅವರ ಫ್ಯೂಡಲ್ ಮನೋಭಾವ ಸ್ಪಷ್ಟವಾಗಿ ವ್ಯಕ್ತವಾಯಿತು.

ಹಿಂದಿನಂತೆ ಈಗ ದಲಿತರು ರೆಡ್ಡಿಗಳ ಅಡಿಯಾಳುಗಳಾಗಿಲ್ಲವೆನ್ನುವ ಕೋಪ ಹಿಂದಿನಿಂದಲೂ ಅವರಲ್ಲಿ ಮನೆ ಮಾಡಿಕೊಂಡಿದ್ದು ರಮೇಶ್ ರೆಡ್ಡಿಯ ಕೊಲೆಯಾದಾಗ ಈ ಅಸಹನೆ ಪ್ರಕಟವಾಗಲು ಒಂದು ಸಂದರ್ಭ ಸಿಕ್ಕಂತಾಗಾಯಿತು. ಈ ಸಂದರ್ಭವನ್ನು ಬಳಸಿಕೊಂಡು ಊರಿನ ದಲಿತರಿಗೆ ಸರಿಯಾದ ಪಾಠವನ್ನು ಕಲಿಸುವ ಉದ್ದೇಶ ಸ್ಪಷ್ಟವಾಗಿ ಕಾಣುತ್ತದೆ.

ಎರಡನೆಯ ಹಂತದಲ್ಲಿ ದಾಳಿಗೆ ಒಳಗಾದ 24 ಮನೆಗಳೂ ಆ ನಾಲ್ಕು ಮನೆಗಳಂತೆ ಮಾದಿಗ ಸಮುದಾಯದವರೇ ಆಗಿರುವುದು ಗಮನಿಸಬೇಕಾದ ವಿಷಯ. ಆ ಮನೆಗಳಲ್ಲಿ ಆಗಿರುವ ಲೂಟಿಯ ದೃಶ್ಯವನ್ನು ನೋಡಿಯೇ ಅರ್ಥಮಾಡಿಕೊಳ್ಳಬೇಕು.



ಎಲ್ಲಾ ಮನೆಗಳ ಬಾಗಿಲುಗಳನ್ನು ಕಿತ್ತುಹಾಕಲಾಗಿದೆ. ಮನೆಯೊಳಗಿನ ಬೆಲೆಬಾಳುವ ವಸ್ತುಗಳನ್ನು ಆಚೆಗೆ ತಂದು ಚೆಲ್ಲಾಡಿ ಧ್ವಂಸಮಾಡಲಾಗಿದೆ. ಆ ಮನೆಗಳವರು ಕಷ್ಟಪಟ್ಟು ದುಡಿದು ಕಂತುಗಳಲ್ಲಿ ಕೊಂಡಿದ್ದ ಟಿವಿ ಮುಂತಾದ ವಸ್ತುಗಳ ಮೇಲೆ ಆ ಪುಂಡರ ಗುಂಪು ತನ್ನ ಕೋಪವನ್ನು ಕಾರಿಕೊಂಡಿದೆ. ಸ್ಕೂಟರ್, ಮೋಟರ್ ಸೈಕಲ್ಲುಗಳಿಗೆ ಬೆಂಕಿಹಚ್ಚಲಾಗಿದೆ. ಕೋಣೆಗಳೊಳಕ್ಕೆ ನುಗ್ಗಿ ಬೀರುಗಳ ಬಾಗಿಲುಗಳನ್ನು ಬಲವಂತವಾಗಿ ಒಡೆದು ತೆಗೆದು ಅಲ್ಲಿನ ಬೆಲೆಬಾಳುವ ವಸ್ತುಗಳನ್ನು ನಾಶಮಾಡಲಾಗಿದೆ ಅಥವಾ ತೆಗೆದುಕೊಂಡು ಹೋಗಲಾಗಿದೆ. ಈ ಗುಂಪು ದಾಳಿ ಮಾಡುವ ಸೂಚನೆಗಳು ಬಂದಾಗ ಅಲ್ಲಿನ ಜನ ಮನೆಗಳಿಂದ ಓಡಿಹೋಗಿದ್ದರಿಂದ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಹಾಡುಹಗಲೇ ಹೀಗೆ ಮನೆಗಳ ಮೇಲೆ ಶತ್ರುಗಳ ದಾಳಿಯ ರೀತಿಯಲ್ಲಿ ನಡೆದ ದಾಳಿ ಇದು. ಬಲಿಪಶುಗಳಾದ ದಲಿತರೇ ಹೇಳುವಂತೆ ಕೊಲೆಯಾದ ರಮೇಶ್ ರೆಡ್ಡಿಯ ಅಣ್ಣನ ಮಧ್ಯಪ್ರವೇಶದಿಂದಾಗಿ ಈ ದಾಂಧಲೆ ಇಲ್ಲಿಗೇ ಕೊನೆಗೊಂಡಿತು. ಇದೆಲ್ಲ ನಡೆದದ್ದು ಡಿಸೆಂಬರ್ 18ರಂದು ಬೆಳಗ್ಗೆ 10-30, 11-00 ಗಂಟೆಯಿಂದ ಒಂದೆರಡು ಗಂಟೆಗಳ ಕಾಲ.

ಡಿಸೆಂಬರ್ 27ರಂದು ಆ ಹಳ್ಳಿಗೆ ಭೇಟಿ ನೀಡಿದ ಸತ್ಯಶೋಧನ ತಂಡಕ್ಕೆ ಎದುರಾದದ್ದು ಆ ಪಾಳು ಬಿದ್ದ ಮನೆಗಳು, ಸುಟ್ಟು ಕರಕಲಾದ ಮೊಂಡು ಗೋಡೆಗಳು. ಇನ್ನೂ ಹಲವರು ಜನರು ರೆಡ್ಡಿಗಳ ಭಯದಿಂದಾಗಿ ತಮ್ಮ ಮನೆಗಳಿಗೆ ವಾಪಸು ಬಂದಿರಲಿಲ್ಲ. ನಮಗೆ ಸಿಕ್ಕಿದ ಕೆಲವರು ತಮ್ಮ ಮನೆಗಳ ಸಮೀಪದಲ್ಲಿಯೇ ಪೊಲೀಸರ ವಾಹನಗಳಿದ್ದರೂ ಭಯದಲ್ಲಿಯೇ ಜೀವಹಿಡಿದುಕೊಂಡು ಬದುಕುತ್ತಿದ್ದದ್ದು ಸ್ಪಷ್ಟವಾಗಿ ಕಂಡುಬಂದಿತು. ಪ್ರಜಾತಾಂತ್ರಿಕ ಜನರ ವೇದಿಕೆ(ಪಿಡಿಎಫ್)ಯ ನಗರಗೆರೆ ರಮೇಶ್ ಹಾಗೂ ನಗರಿ ಬಾಬಯ್ಯ, ಸ್ವಾಭಿಮಾನಿ ದಲಿತ ಶಕ್ತಿಯ ಶಿವಲಿಂಗಂ ಹಾಗೂ ಸೆಂಥಿಲ್ ಅವರನ್ನೊಳಗೊಂಡ ಸತ್ಯಶೋಧನ ತಂಡ ಆನೇಕಲ್ಲಿನ ಪೊಲೀಸರ ಜತೆ ಮಾತನಾಡಿದಾಗ ಈ ... ಸಂಬಂಧಪಟ್ಟಂತೆ ಎಂಟು ಜನರು ದಸ್ತಗಿರಿಯಾದ... ಆದರೆ ಪ್ರಮುಖ ಆರೋಪಿ ಪುಷ್ಕರಿಣಿರೆಡ್ಡಿ ತಲೆಮರೆಸಿಕೊಂಡಿದ್ದಾನೆಂದೂ ತಿಳಿಯಿತು.

ಇಷ್ಟೆಲ್ಲ ಅನಾಹುತ ನಡೆದು ದಲಿತರ ಅಪಾ... ನಷ್ಟವಾಗಿದ್ದರೂ ಆನೇಕಲ್ಲಿನ ಶಾಸಕ ಹಾಗೂ ರಾಜ್ಯದ ... ಕಲ್ಯಾಣ ಇಲಾಖೆಯ ಮಂತ್ರಿಯಾಗಿ... ನಾರಾಯಣಸ್ವಾಮಿಯವರಿಂದ ತಮಗೆ ಯಾವ ... ಸಹಾಯವೂ ದೊರಕಿಲ್ಲವೆಂಬುದು ದಲಿತರ ಪ್ರ... ದೂರು. ರೆಡ್ಡಿಗಳೂ ಸಹ ಬಿಜೆಪಿಯವರೇ ಆ...



ಮಂತ್ರಿಗಳು ಅವರನ್ನು ಎದುರು ಹಾಕಿಕೊ... ಸಿದ್ಧರಿಲ್ಲವೆಂದೇ ಅವರು ಹೇಳುತ್ತಾರೆ. ಲಕ್ಷ... ರೂಪಾಯಿಗಳ ನಷ್ಟ ಸಂಭವಿಸಿದ್ದರೂ ... ರೂ.5000ವನ್ನು ಪರಿಹಾರದಂತೆ ಕೊಟ್ಟು ... ಕೈತೊಳೆದುಕೊಂಡಿದೆ. ನಂತರವಾದರೂ ಮಂತ್ರಿಗಳು ... ಸಾಂತ್ವನ ಹೇಳಲಿಕ್ಕಾದರೂ ಬರಲಿಲ್ಲವೆಂಬುದು ... ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಅಷ್ಟೇ ... ಅಂಬೇಡ್ಕರ್ ಭವನಕ್ಕೆಂದು ಮಂಜೂರಾ... ನಿವೇಶನವನ್ನು ಪಂಚಾಯತಿಗೆ ವಾಪಸ್ ಕೊಡಿಸುತ್ತ... ಮಂತ್ರಿಗಳು ರೆಡ್ಡಿಗಳಿಗೆ ಮಾತು ಕೊಟ್ಟಿದ್ದಾರೆಂಬುದು ... ಗುಮಾನಿ. ಓಟಿನ ರಾಜಕೀಯದ ಪರಿಣಾಮ ಇದು...

ಆ ಊರಿನಲ್ಲಿ ದಲಿತರ ಮೇಲಿನ ದಾಳಿ ಇದು ಮೊ... ಯದೇನಲ್ಲ. ಈ ಹಿಂದೆಯೂ, ಈಗ ಸತ್ತಿರುವ ರ... ರೆಡ್ಡಿಯ ನಾಯಕತ್ವದಲ್ಲಿಯೇ, ಇಲ್ಲಿನ ದಲಿತರ ಮೇ... ನಡೆದಿತ್ತು. ಬಹಳ ವರ್ಷಗಳ ಹಿಂದೆ ಇಲ್ಲಿನ ದಲಿ... ಸ್ವಲ್ಪ ಭೂಮಿ ಇದ್ದು ಅದೆಲ್ಲವನ್ನೂ ರೆ... ಕಬಳಿಸಿದ್ದಾರೆಂದು ದಲಿತರು ದೂರುತ್ತಾರೆ. ತಮಗ... ರಕ್ಷಣೆ ನೀಡಬೇಕೆಂದೂ, ತಮಗಾಗಿರುವ ಆಸ್ತಿ ನ... ಸರಿಯಾಗಿ ಲೆಕ್ಕ ಹಾಕಿ ಅದಕ್ಕೆ ತಕ್ಕಂತೆ ಪರಿಹಾ... ನೀಡಬೇಕೆಂದೂ ಕಷ್ಟಕ್ಕೊಳಗಾದವರ ಒತ್ತಾಯವಾ...

ಮರಸೂರಿನಲ್ಲಿನ ಹೆಚ್ಚು ಓದಿದ ದಲಿತರು ... ವಿಷಯದಲ್ಲಿ ಅವರು ಸಂವಿಧಾನ ತಮಗೆ ಕೊಡಮಾ... ಸೌಲಭ್ಯವನ್ನು ಬಳಸಿಕೊಂಡಿಲ್ಲ. ಆದರೂ ... ದೊರೆತಿರುವ ಇತರ ಅವಕಾಶಗಳನ್ನು ಬಳಸಿಕೊಂಡು ... ಮೇಲೆ ಹೆಚ್ಚಾಗಿ ಅವಲಂಬಿತರಾಗದೆ ಗೌರವಯುತ... ನಡೆಸುತ್ತಿದ್ದುದು ಸ್ಪಷ್ಟವಾಗಿತ್ತು. ಮರಸೂರಿನಲ್ಲಿ ಮಾ... ಹಲವು ಇತರ ಕಡೆಗಳಲ್ಲಿಯೂ ನಿಧಾನವಾಗಿಯಾ... ದಲಿತರು ಸ್ವಾಭಿಮಾನಿ ಬದುಕುಗಳನ್ನು ಕಟ್ಟಿಕೊ... ಯತ್ನಿಸುತ್ತಿರುವ ಉದಾಹರಣೆಗಳು ಹಲವಾರಿವೆ. ಮ... ಜಿಲ್ಲೆಯ ಕಸುವನಹಳ್ಳಿಯಾಗಲಿ ಅಥವಾ ಕಿರುಗಾವ... ಇನ್ನು ಯಾವುದೇ ಹಳ್ಳಿಯಾಗಲಿ, ದಲಿತರು ... ಜೀವನವನ್ನು ತಾವೇ ಕಟ್ಟಿಕೊಳ್ಳುವುದನ್ನು ಸ... ಮೇಲ್ಜಾತಿಯ ಫ್ಯೂಡಲ್ ಮನೋಭಾವದ ... ಸಾಧ್ಯವಾಗುತ್ತಿಲ್ಲ. ಹಾಗಾಗಿ ಯಾವುದೋ ಒಂದು ರೀ... ಅವರ ಬದುಕನ್ನು ಅಸ್ಥಿರಗೊಳಿಸುವುದೇ ... ಉದ್ದೇಶವಾಗಿರುತ್ತದೆ. ನಮ್ಮದು ಪ್ರಜಾತಂತ್ರವಿರು... ಎಂದು ನಾವೆಷ್ಟು ಕೊಚ್ಚಿಕೊಂಡರೂ ಅದು ... ಚುನಾವಣೆಗಳಿಗೆ, ಓಟು ಸಂಪಾದನೆಗೆ ಸೀಮಿತವಾಗಿ... ಹೊರತು ಪ್ರಜಾತಾಂತ್ರಿಕ ಮೌಲ್ಯಗಳು ನಮ್ಮ ... ಮನಸ್ಥಿತಿಯ ಭಾಗವಾಗಿಲ್ಲದಿರುವುದೇ ದ... ಪ್ರಜಾತಂತ್ರದ ಹೆಸರು ಹೇಳಿಕೊಂಡು ಜನಪ್ರ... ಗಳಾಗಿರುವವರಾಗಲಿ, ಸರ್ಕಾರಿ ಅಧಿಕಾರಿಗಳಾಗ... ಪ್ರಜಾತಾಂತ್ರಿಕ ಮೌಲ್ಯಗಳನ್ನು ಬಿತ್ತುವ ಯಾವ ಪ್ರಯ... ಮಾಡಲು ಸಿದ್ಧರಿಲ್ಲ. ನಿಜವಾದ ಅರ್ಥದಲ್ಲಿ ಪ್ರಜಾ... ನಮ್ಮ ಜೀವನದ ಶೈಲಿಯಾಗುವವರೆಗೂ ... ಸಂಘರ್ಷಗಳು ನಡೆಯುತ್ತಲೇ ಇರುತ್ತವೆ.



ಕೈಗಾ ಅಣುಸ್ಥಾವರದಿಂದ ಕ್ಯಾನ್ಸರ್ ಕಾಣಿಕೆ !

ಪುತ್ತೂರು-ಬೆಳ್ತಂಗಡಿ ಭಾಗದಲ್ಲಿ ಎಂಡೋಸಲ್ಫಾನ್ ಎಂಬ ಕೀಟನಾಶಕ ಮಾಡಿದ ಅನಾಹುತವನ್ನೇ ಇಲ್ಲಿ ಕಾರವಾರ-ಯಲ್ಲಾಪುರ ಏರಿಯಾದಲ್ಲಿ ವಿದ್ಯುತ್ ಸ್ಥಾವರದ ಯುರೇನಿಯಂ ವಿಕಿರಣ ಮಾಡುವ ಎಲ್ಲಾ ಭಯಾನಕ ಲಕ್ಷಣಗಳು ಗೋಚರಿಸಲಾರಂಭಿಸಿದೆ! ಅಣುಸ್ಥಾವರದ ಸರಹದ್ದಿನಲ್ಲಿ ತಂಬಾಕಿನ ತಾಂಬೂಲ, ಗುಟ್ಕ ಜಗಿಯುವ ಅಥವಾ ಬೀಡಿ-ಸಿಗರೇಟು ಸೇದುವ ಮಂದಿಗೆ ಮಾತ್ರವಲ್ಲ, ಈ ಚಟವಿಲ್ಲದ ಎಳೆಯರಿಗೂ ಕ್ಯಾನ್ಸರ್ ತಗಲುತ್ತಿದೆ. ಜತೆಗೆ ರಕ್ತಹೀನತೆ, ಕ್ಷಯ, ಗರ್ಭಪಾತದಂಥ ಗಂಭೀರ ಆರೋಗ್ಯ ಸಮಸ್ಯೆ ಈ ಏರಿಯಾದಲ್ಲಿ ಕಾಡುತ್ತಿದೆ. ಕೈಗಾದ ಹತ್ತಿರವಿರುವ ಹಳ್ಳಿಗಳಲ್ಲಿ ನಡೆಸಿದ ಸಮೀಕ್ಷೆಯ ವರದಿ ಭೀಭತ್ಸವಾಗಿದೆ.

• ನಹುಷ

...ದ ಜಿಲ್ಲೆ ದೊಡ್ಡದೊಂದು ನಿರಾಶ್ರಿತರ ಕೇರಿ ...ದೋ ಕಾಲವಾಗಿ ಹೋಗಿದೆ. ಈ ನತದೃಷ್ಟ ...ಲಕ್ಕೆ ಪ್ರಳಯಾಂತಕ ಸರ್ಕಾರಿ ಯೋಜನೆಗಳ ...ಬಿಹೋಗಿದ್ದಾರೆ. ಕಳೆದ ಮೂರ್‍ನಾಲ್ಕು ...ತ್ತರ ಕನ್ನಡದಲ್ಲಿ ಸರ್ಕಾರಿ ಪರ್ಯಾವರ್ಣ ...ಂಸಕ ಪ್ಲಾನ್-ಪ್ರಾಜೆಕ್ಟ್‌ಗಳದೇ ಹಾವಳಿ. ...ಯಿಡಾದ ಕಾಳಿ ನದಿಗುಂಟ ಸರಣಿ ಜಲ ...ಕಟ್ಟುಗಳು ಸ್ಥಾಪನೆಯಾದವು. ಹಾಗೆಯೇ ...ತಬೋಲ್‌ನಲ್ಲಿ ಅಂತಾರಾಷ್ಟ್ರೀಯ ವಾಣಿಜ್ಯ ...: ಕಾರವಾರ-ಅಂಕೋಲಾದ ಕಡಲ ತಡಿ ...ಬಲೆ ಕಬ್ಜಾ ಮಾಡಿಕೊಂಡಿತು. ಕಾರವಾರದ ...ಣುಸ್ಥಾವರವೆಂಬ ಪೆಡಂಭೂತವೇ ತಲೆ ...!

...ವಾಗಿ ಹೇರಲ್ಪಟ್ಟ ಈ ಜೀವ ವಿರೋಧಿ ...ದ ನೂರಾರು ಹಳ್ಳಿಗಳ ನೆಲೆಯೇ ತಪ್ಪಿ ...ವಿರಾರು ಕುಟುಂಬಗಳ ಜೀವ-ಜೀವನದ ... ತಪ್ಪಿಹೋಯ್ತು. ಉತ್ತರ ಕನ್ನಡ ಎಂದರೆ ...ಸರ್ಕಾರಿ ಯೋಜನೆಗಳ ಪ್ರಯೋಗ ಪಶು ...ಯ್ತು!! ಪ್ರತಿ ಯೋಜನಾ ಪ್ರದೇಶದ ...ರವ ನರಕವೇ ಸೃಷ್ಟಿಯಾಯ್ತು!! ಜನರು ...ಪಾಲಾಗಿ ಹೋದರು. ಇಚ್ಛಾಶಕ್ತಿಯ ಗಟ್ಟಿ ...ಾಯಕತ್ವ ಇಲ್ಲದ ಈ ಉತ್ತರ ಕನ್ನಡದ ...ಉತರ ಬೊಬ್ಬೆ ದೂರದ ವಿಧಾನಸೌಧ ಮತ್ತು ...ಪ್ಪಳಿಸಲೇ ಇಲ್ಲ. ಷಂಡ ಮಂತ್ರಿ-ಶಾಸಕ- ...ಾಯಕ ನಿರಾಶ್ರಿತರ ಮಧ್ಯೆ ಓಟ್ ಬ್ಯಾಂಕ್ ...ಡಿದರೇ ಹೊರತು ಹೊಟ್ಟೆಗೆ ಅನ್ನ ತಿನ್ನುವ ...ರ್ತಿಸಲೇ ಇಲ್ಲ!!


...ಶಕಾರಂಭದಲ್ಲಿ ಜನ ಅದೆಷ್ಟೇ ...ಮು ಗೋಗರೆದರೂ ಅಣುಸ್ಥಾವರವನ್ನು ... ಕಾರವಾರ-ಯಲ್ಲಾಪುರ ಸರಹದ್ದಿನಲ್ಲಿ ...ಶೇ ಬಿಟ್ಟರು. ಈ ಸ್ಥಾವರದಿಂದಾದ ...ವೆರಡಲ್ಲ. ಹಲವು ಹಳ್ಳಿಗಳು ಸಧ್ರಿ ...ಗರಿಕ ಪ್ರಪಂಚದ ಸಂಪರ್ಕವನ್ನೇ ... ವಿಲವಿಲ ಒದ್ದಾಡುವಂತಾಯ್ತು; ...ನರ್ವಸತಿ ಕೇಂದ್ರಗಳಲ್ಲಿ ಕನಿಷ್ಠ ಮೂಲ ...ಇಲ್ಲದೇ ಜನಜೀವನ .... ಈಗ ಈ ...ಅಣುವಿದ್ಯುತ್ ...ರ ಹೊರಹಾಕುವ ...ಹತ್ತಾರು ಹಳ್ಳಿಗಳಲ್ಲಿ ...ರಕ್ತ ಹೀನತೆ, ...ಗವಿಕಲ ಮಕ್ಕಳ ...ರುವಾಗಿದೆಯೆಂಬ ...



...ಆಳುವವರ ಜಾಣ ...ಸ್ಥಾವರದ ಸುತ್ತಲಿನ ...ವಾಗಿಸಿಬಿಟ್ಟದೆ. ...ಅಣುವಿದ್ಯುತ್ ...ಮತ್ತು 6ನೇ ಪವರ್ ...ಧಿಸುವ ಹವಣಿಕೆಯಲ್ಲಿದ್ದರೆ ಇತ್ತ ಕೈಗಾ ...ಜನರು ಒಟ್ಟಾಗಿ ಬೀದಿಗಿಳಿದು ...ಟುವುದು ಸಾಧ್ಯವೇ ಇಲ್ಲ... ...ವ ನಾನಾ ನಮೂನೆ ರೋಗ ನಮ್ಮೂರನ್ನು ...ಗಾಗಿ ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ...ಬೂಲಿ ...ದ್ಯೋಗ-ಭೂಮಿ-ಸೂಕ್ತ ಪರಿಹಾರ ಕೊಡಿ' ...ಹರಿಸುತ್ತಿದ್ದಾರೆ. ಕಾರವಾರದ ...ಕಚೇರಿ ಎದುರು ಕೈಗಾ ಸರಹದ್ದಿನ ...38 ದಿನಗಳಿಂದ ತಮ್ಮ ಬೇಡಿಕೆ ...ಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ... ಜಿಲ್ಲೆಯ ಉಸ್ತುವಾರಿ ಮಂತ್ರಿ ಕಾಗೇರಿ ...ತ್ತ ಬರಲು ಪುರುಸೊತ್ತೇ ಸಿಕ್ಕಿಲ್ಲ.

...ರು-ಬೆಳ್ತಂಗಡಿ ಭಾಗದಲ್ಲಿ ಎಂಡೋಸಲ್ಫಾನ್ ...ಶಕ ಮಾಡಿದ ಅನಾಹುತವನ್ನೇ ಇಲ್ಲಿ ...ಪುರ ಏರಿಯಾದಲ್ಲಿ ವಿದ್ಯುತ್ ಸ್ಥಾವರದ ...ವಿಕಿರಣ ಮಾಡುವ ಎಲ್ಲಾ ಭಯಾನಕ ...ಗೋಚರಿಸಲಾರಂಭಿಸಿದೆ! ಅಣುಸ್ಥಾವರದ ...ಬಾಕಿನ ತಾಂಬೂಲ, ಗುಟ್ಕ, ಜಗಿಯುವ ...ಗರೇಟು ಸೇದುವ ಮಂದಿಗೆ ಮಾತ್ರವಲ್ಲ, ...ಳೆಯರಿಗೂ ಕ್ಯಾನ್ಸರ್ ತಗಲುತ್ತಿದೆ. ಜತೆಗೆ ..., ಗರ್ಭಪಾತದಂಥ ಗಂಭೀರ ಆರೋಗ್ಯ ...ಯಾದಲ್ಲಿ ಕಾಡುತ್ತಿದೆ. ಕೈಗಾದ ಹತ್ತಿರವಿರುವ ...ಮಿಕ ಆರೋಗ್ಯ ಕೇಂದ್ರ 2005ರಿಂದ ...ನಕ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಸಿದ ... ಭೀಭತ್ಸವಾಗಿದೆ.

... ಸಮೀಕ್ಷೆ ಪ್ರಕಾರ ವಜ್ರಳ್ಳಿ ಭಾಗದಲ್ಲಿ ...ಮಂದಿ ಕ್ಯಾನ್ಸರ್‌ನಿಂದ ಸಾವಿಗೀಡಾಗಿದ್ದಾರೆ! ಸಮೀಕ್ಷೆಯ ವೇಳೆ ಇನ್ನೂ 5 ಮಂದಿ ಈ ರೋಗದಿಂದ ಬಳಲುತ್ತಿದ್ದರು. (ಆ ಪೈಕಿ 2012ರ ಮೊದಲ ದಿನವೇ ಪೂರ್ಣಿಮಾ ಹೆಗಡೆ ಎಂಬ 22 ವರ್ಷದ ಹುಡುಗಿ ಚಿಮ್ನಳ್ಳಿ ಎಂಬಲ್ಲಿ ನಿಧನಳಾಗಿದ್ದಾಳೆ) ಈ ಹಳ್ಳಿಗಳಲ್ಲಿ ಮೆದುಳು ಕ್ಯಾನ್ಸರ್, ಕರುಳು ಕ್ಯಾನ್ಸರ್. ಗಂಟಲು ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್, ತ್ರಿಬಿಟಿ ಕ್ಯಾನ್ಸರ್, ದವಡೆ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಥೈಲಸೀಮಿಯಾ ಕ್ಯಾನ್ಸರ್, ಮೂತ್ರಕೋಶ ಕ್ಯಾನ್ಸರ್, ರಕ್ತ ಕ್ಯಾನ್ಸರ್, ಶ್ವಾಸಕೋಶ ಕ್ಯಾನ್ಸರ್ ಬಾಧಿಸುತ್ತಿದೆ. ವಜ್ರಳ್ಳಿ, ತೇಲಂಗಾರ್, ಆರಬೈಲ್, ಇಡಗುಂದಿ ಪ್ರದೇಶದಲ್ಲಿ 5 ರಕ್ತ ಹೀನತೆ, 19 ಕ್ಷಯರೋಗ, 13 ಗರ್ಭಪಾತ ಪ್ರಕರಣಗಳು ಪತ್ತೆಯಾಗಿವೆ. ಮಹಿಳೆಯೊಬ್ಬಳಿಗೆ ಮೂರ್‍ಮೂರು ಸಲ ಗರ್ಭಪಾತವಾಗಿದೆ. ನಾಲ್ಕನೇ ಬಾರಿ ಆಕೆಗೊಂದು ಮಗುವಾಯಿತಾದರೂ ಆ ಮಗುವಿಗೆ ಒಂದು ಕಣ್ಣು ಸರಿಯಿಲ್ಲ.



ಇದು ಡಾ.ಶಿವಕುಮಾರ್ ಕೊಟ್ಟಿರುವ ಅಧಿಕೃತ ವರದಿಯ ಆತಂಕದ ಅಂಶಗಳು. ಇದೇ ರೀತಿ ಕೈಗಾದ ಆಚೀಚೆಯ 15 ಕಿ.ಮೀ. ವ್ಯಾಪ್ತಿಯಲ್ಲಿ ಆರೋಗ್ಯ ಸಮೀಕ್ಷೆ ನಡೆಸಿದರೆ ಮಾರಕ ಕಾಯಿಲೆಯಿಂದ ನರಳುತ್ತಿರುವ ನೂರಾರು ಮಂದಿ ಸಿಗಬಹುದು. ಇದೆಲ್ಲ ಅಣುಸ್ಥಾವರದ ವಿಕಿರಣ ಪರಿಣಾಮ! ಕೈಗಾ ಅಣುಸ್ಥಾವರ ನಿಗಮದ ಉದ್ಧಾಮ ಪಂಡಿತರು-ವಿಜ್ಞಾನಿಗಳು ಅಣುಸ್ಥಾವರದಿಂದ ಕ್ಯಾನ್ಸರ್ ಬರುವುದಿಲ್ಲ, ಕೈಗಾ ಸ್ಥಾವರದಿಂದ ವಿಕಿರಣ ಬಹುದೂರ ಹೋಗಲಾರದೆಂದು ಅದೆಷ್ಟೇ ಹೇಳಿದರೂ ಜನರು ಮಾತ್ರ ನಂಬುವ ಸ್ಥಿತಿಯಲ್ಲಿಲ್ಲ. ವಿಕಿರಣ ಅಳೆಯುವ ಯಂತ್ರವನ್ನು ಜನರಿಗೆ ಕೇಂದ್ರ ಸರ್ಕಾರದ ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಈವರೆಗೆ ಕೊಟ್ಟಿಲ್ಲ. ಹೀಗಿರುವಾಗ ಕೈಗಾ ಸ್ಥಾವರದಿಂದ ವಿಕಿರಣ ಅಪಾಯವಿಲ್ಲವೆಂದರೆ ನಂಬಿಕೆ ಬರುತ್ತದಾ?

ಕೆಲದಿನಗಳ ಹಿಂದೆ ಜಿಲ್ಲೆಗೆ ಸಿಎಂ ಸದಾನಂದ ಗೌಡರು ಬಿಜಯಂಗೈದಿದ್ದಾಗ ಕೈಗಾ ಸುತ್ತಲಿನ ಏರಿಯಾದಲ್ಲಿ ಮುಂಬೈನ ಟಾಟಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳಿಂದ ಮತ್ತು ಮಣಿಪಾಲ್ ಇನ್‌ಸ್ಟಿಟ್ಯೂಟ್‌ನ ತಜ್ಞರಿಂದ ಆರೋಗ್ಯ ಸಮೀಕ್ಷೆ ಮಾಡಿಸುವ ಭರವಸೆ ಕೊಟ್ಟು ಹೋಗಿದ್ದಾರೆ. ಆ 'ಪುಣ್ಯ ಕಾರ್ಯ' ಯಾವಾಗ ಆಗುವುದೋ ಸಿಎಂ ಸಾಹೇಬರಿಗಷ್ಟೇ ಗೊತ್ತು. ಗೌಡರ ಮಂತ್ರಿ ಕಾಗೇರಿಯಂತೂ 'ಕೈಗಾ ಬಾಧಿತರ' ಬಗ್ಗೆ "ಪೀ... ಪಿಟ್" ಅನ್ನುತ್ತಿಲ್ಲ. ತನ್ನ ಸ್ವ-ಜಾತಿಯ ದಂತ ಗೋಪುರ ಶಿರಸಿಯಲ್ಲೇ ಕುಳಿತು ಕಾರವಾರದಲ್ಲಿ ಧರಣಿ ಮಾಡುತ್ತಿರುವವರು ಹೋರಾಟ ನಿಲ್ಲಿಸಬೇಕೆಂದು ಶಂಖ ಊದುತ್ತಿದ್ದಾರೆ. ಪ್ರತಿಭಟನಾಕಾರರ ನೋವಿಗೆ ಸ್ಪಂದಿಸದೇ ಉಡಾಫೆಯಿಂದ ಮಾತಾಡುತ್ತಿರುವ ಕಾಗೇರಿ ಕಿರಿಕ್‌ನಿಂದ ಕೈಗಾ ಸುತ್ತಲಿನ ಜನರಷ್ಟೇ ಅಲ್ಲ, ಇಡೀ ಜಿಲ್ಲೆಯ ಪರಿಸರ ಪ್ರೇಮಿಗಳು-ಮನುಷ್ಯತ್ವ ಇರುವವರೆಲ್ಲ ಇನ್ನಷ್ಟು ಕೆರಳಿದ್ದಾರೆ.




ಸ್ವಯಂಘೋಷಿತ ಪರಿಸರಶ್ರೀ ಕುಖ್ಯಾತಿಯ ಸೋಂದಾ ಸ್ವರ್ಣವಲ್ಲಿ ಮಠದ ಹೈಗರ ಸ್ವಾಮಿ ಗಂಗಾಧರೇಂದ್ರ ಸರಸ್ವತಿಯೂ ತನ್ನ ಮಹಾಸಂಸ್ಥಾನದಿಂದಲೇ ಕೈಗಾ ಅಣುಸ್ಥಾವರದ ವಿರುದ್ಧ ಪ್ರೋತ್ಸಾಹಿಸುತ್ತಿದ್ದಾರೆ. ಈ 'ಭಗವದ್ಗೀತಾ ಭಾಷ್ಯದ ಸ್ವಾಮಿ' ಮಂತ್ರಿ ಕಾಗೇರಿಯಂತೆ ಕುಂತಲ್ಲಿಂದಲೇ ಅಣುಸ್ಥಾವರದ ವಿಕಿರಣದ ಬಗ್ಗೆ ಉದ್ದುದ್ದ ಪ್ರವಚನ ಮಾಡುತ್ತಿದ್ದಾರೆ. ಅತ್ತ ಕಾರವಾರದಲ್ಲಿ ಒಂದೂಕಾಲು ತಿಂಗಳಿಂದ ಕೈಗಾ ಅಣುಸ್ಥಾವರ ಅವಾಂತರ-ಅನಾಹುತದಿಂದ ಕಂಗಾಲಾಗಿರುವ ಮಂದಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಈ ಮಂತ್ರಿ-ಸ್ವಾಮಿಗೆ ಒಮ್ಮೆ ಪ್ರತಿಭಟನಾಕಾರ ಬಳಿಗ್ಹೋಗಿ ಸಾಂತ್ವನ-ನೈತಿಕ ಸ್ಥೈರ್ಯ ಕೊಡಬೇಕೆಂದು ಅನ್ನಿಸದಿರುವುದು ದುರಂತವೇ ಸರಿ.

ಕೈಗಾ ಅಣುಸ್ಥಾವರ ಸ್ಥಾಪನೆಗೂ ಮೊದಲು ಲೋಕಲ್ ಪರಿಸರವಾದಿಗಳು ಪ್ರತಿಭಟನೆ-ಹೋರಾಟ ಎಲ್ಲಾ ನಡೆಸಿದ್ದರು. ಆದರೆ ಆ ಚಳವಳಿಗೆ ಕಸುವೇ ಇರಲಿಲ್ಲ. ಸ್ವಜಾತಿ ಹೈಗರ ತೋಟ ಪಟ್ಟಿ ಮುಳುಗಿಸುವ ಅಘನಾಶಿನಿ ಮತ್ತು ಬೇಡ್ತಿ ಜಲವಿದ್ಯುತ್ ಯೋಜನೆಗಳ ವಿರುದ್ಧ ಪಾದಯಾತ್ರೆ-ಸತತ ಹೋರಾಟ ನಡೆಸಿದ್ದ ಸ್ವರ್ಣವಲ್ಲಿ ಸ್ವಾಮಿ ಕೈಗಾ ಅಣುಸ್ಥಾವರ ವಿರೋಧಿ ಪ್ರತಿಭಟನೆಯನ್ನೇಕೋ ಆಸಕ್ತಿಯಿಂದ ನಡೆಸಲೇ ಇಲ್ಲ. ಈ ಅಣುಸ್ಥಾವರ ದೇಶಕ್ಕೆ ಸಮರ್ಪಿಸಲೆಂದು ಅಂದಿನ ಭಾಜಪ ಪ್ರಧಾನಿ ವಾಜಪೇಯಿ ಬಂದಾಗ ಇದೇ ಸ್ವರ್ಣದಲ್ಲಿ ಸ್ವಾಮಿ ಖುದ್ದು ಕಾರವಾರಕ್ಕೆ ಹೋಗಿ ಪಿಎಂ ಜೊತೆ ಕುಶಲೋಪರಿ ನಡೆಸಿದ್ದರು. ಈ 'ಸೆಲಿಬ್ರಿಟಿ'ಗಳ ಭೇಟಿಯನ್ನು ಆಗ ವ್ಯವಸ್ಥೆ ಮಾಡಿಸಿದ್ದೇ ಅಂದು ಯಲ್ಲಾಪುರ ಭಾಗದ ಎಮ್ಮೆಲ್ಲೆಯಾಗಿದ್ದ ಈಗಿನ ಚೆಡ್ಡಿ ಮಂತ್ರಿ ಕಾಗೇರಿ ಮಾಣಿಯಾಗಿತ್ತು!!

ಇಂಥ ದ್ವಂದ್ವಧಾರಿಗಳಿಂದಾಗಿಯೇ ಉತ್ತರ ಕನ್ನಡದ ಪರಿಸರ ಖರಾಬೆದ್ದು ಹೋಗಿದೆ! ಪರಿಸರ ಹೋರಾಟದಲ್ಲಿ ಜಾತಿಯತೆ-ಜನಿವಾರ ಮಮಕಾರಗಳು ಮಸಲತ್ತು ಮಾಡುತ್ತಿವೆ. ಸ್ವರ್ಣದಲ್ಲಿ ಸ್ವಾಮಿ ಮತ್ತು ಮಂತ್ರಿ ಕಾಗೇರಿ ಮತ್ತು ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಶೀಸರನೆಂಬ ಅರಣ್ಯಗಳ್ಳನಿಗೆ ಘಟ್ಟದ ಮೇಲಿನ ಸ್ವಜಾತಿ ಹೈಗರಿಗೆ ಸರ್ಕಾರಿ ಯೋಜನೆಗಳಿಂದ ತೊಂದರೆ ಆದಾಗಷ್ಟೇ ಪರಿಸರವಾದ ಕೆರಳುತ್ತದೆ. ಕರಾವಳಿಯ ಸೀಬರ್ಡ್ ನೌಕಾನೆಲೆ ನಿರಾಶ್ರಿತರಾಗಲಿ, ಹಣಕೋಣ ಅಥವಾ ತದಡಿ ಅಣುಸ್ಥಾವರ ವಿರೋಧಿ ಹೋರಾಟಗಳಾಗಲಿ ಕಾಣಿಸಿದ್ದೇ ಇಲ್ಲ.

ನಿಜ, ಕೈಗಾ ಅಣುಸ್ಥಾವರದಿಂದ ಉದ್ಭವಿಸಿರುವ ಸಮಸ್ಯೆ ಪರಿಹರಿಸುವ ಹೊಣೆ ಏನಿದ್ದರೂ ಕೇಂದ್ರ ಸರ್ಕಾರದ್ದು. ಆದರೆ ಈ ಅನಾಹುತಕಾರಿ ಯೋಜನೆಗೆ ಸ್ಥಳಾವಕಾಶ ಕೊಟ್ಟದ್ದು-ಅನುಮತಿ ನೀಡಿದ್ದು ರಾಜ್ಯ ಸರ್ಕಾರ ತಾನೆ? ಅಣುಸ್ಥಾವರ ಸ್ಥಾಪನೆಯ ಹೊತ್ತಲ್ಲಿ ಜನರಿಗಿದ್ದ ಆತಂಕ-ಅವರ ಪರತ್ತು ಮತ್ತು ಕೊಡಲಾಗಿದ್ದ ಆಶ್ವಾಸನೆಗಳೆಲ್ಲ ಪೂರ್ಣಗೊಂಡಿಲ್ಲ ಎಂಬುದು ಮಂತ್ರಿ ಕಾಗೇರಿಗೇಕೆ ಅರ್ಥವಾಗುತ್ತಿಲ್ಲ? ಅಂದು ಯಲ್ಲಾಪುರದ ಶಾಸಕನಾಗಿದ್ದ ಕಾಗೇರಿ ಎಲ್ಲ ಪುನರ್ವಸತಿ ಸಮಿತಿಗಳ ಸದಸ್ಯರಾಗಿದ್ದರು. ಯಾವ ಹಂತದಲ್ಲಿ ಕೈಗಾ ಅಣುಸ್ಥಾವರದ ಸುತ್ತಲಿನ 5 ಕಿ.ಮೀ. ವ್ಯಾಪ್ತಿ ಪ್ರದೇಶಗಳನ್ನು ಪುನರ್ವಸತಿ ಸಮಿತಿಯ ಠರಾವಿನ ಜಾರಿ ಪ್ರಕ್ರಿಯೆಯಿಂದ ಕೈಬಿಡಲಾಯ್ತೆಂದು ಕಾಗೇರಿ ಹೇಳುವರಾ? ಹಾಗಂತ ಕೈಗಾಸ್ಥಾವರ ಬಾಧಿತ ಪ್ರತಿಭಟನಾಕಾರರು ಕೇಳುತ್ತಿದ್ದಾರೆ. ನಿರ್ಲಜ್ಜ ಕಾಗೇರಿ ಇದ್ಯಾವುದೂ ತನಗೆ ಸಂಬಂಧಿಸಿದ್ದೇ ಅಲ್ಲವೆಂಬಂತೆ ಮಂತ್ರಿಗಿರಿಯ ಭೋಗ-ಭಾಗ್ಯದಲ್ಲಿ ಓಲಾಡುತ್ತಿದ್ದಾರೆ!



ಈಗಲಾದರೂ ಕಾಗೇರಿ ನೊಂದವರಿಗೆ ನ್ಯಾಯ ಒದಗಿಸಲು ಮುಂದಾಗಬೇಕಿದೆ. ಕೊಡಂಕುಳಂನಲ್ಲಿ ಸ್ವತಃ ರಾಜ್ಯ ಸರ್ಕಾರವೇ ಜನರ ಪರವಾಗಿ ನಿಂತು ಕೇಂದ್ರ ಸರ್ಕಾರಕ್ಕೆ ಅಣುಸ್ಥಾವರದಿಂದಾಗುವ ಅಪಾಯ-ಅಧ್ವಾನಗಳ ಮನವರಿಕೆ ಮಾಡಿಕೊಟ್ಟಿತ್ತು. ಆ ಕೆಲಸ ಕಾಗೇರಿ ಮತ್ತವನ ದೇಶಭಕ್ತರ ಬಿಜೆಪಿ ಸರ್ಕಾರದಿಂದೇಕೆ ಸಾಧ್ಯವಿಲ್ಲ? ಜನಪರ ಬದ್ಧತೆಯೇ ಇಲ್ಲದ ಗಂಡಾಗುಂಡಿ ಪುಢಾರಿ ಕಾಗೇರಿಗಿದೆಲ್ಲ ಅರ್ಥವಾಗುವುದೂ ಇಲ್ಲ ಬಿಡಿ. ಅಣು-ಜಲ ಎರಡೂ ವಿದ್ಯುತ್ ಯೋಜನೆಗಳಿಂದ ಹುಟ್ಟಿಕೊಂಡಿರುವ ಸಮಸ್ಯೆ-ಸಂಕಟದಿಂದ ಹೈರಾಣಾಗಿ ಹೋಗಿರುವ ಮಂದಿಗೇಕೆ ಪುನರ್ವಸತಿ ಸಾಧ್ಯವಿಲ್ಲ?

ಯಾವುದೇ ಆಪತ್ಕಾಲಿನ ಸಂದರ್ಭವನ್ನು ಎದುರಿಸಲಾಗದ ಸಂದಿಗ್ಧ ಸ್ಥಿತಿಯಲ್ಲಿರುವ ಕೈಗಾ ಆಚೀಚೆಯ ನಿರಾಶ್ರಿತ ಮಂದಿ ದುರ್ಗಮ ಪ್ರದೇಶದಲ್ಲಿ ಎಲ್ಲ ಹಕ್ಕುಗಳಿಂದ ವಂಚಿತರಾಗಿ ಬದುಕಬೇಕಾ? ಜನರು ಮಾತ್ರ ವಿಕಿರಣ ಮತ್ತು ಮೂಲಭೂತ ಸೌಕರ್ಯ ವಂಚಿತ ಪ್ರದೇಶದಲ್ಲಿ ಇರಲು ಸುತಾರಾಂ ಒಪ್ಪುತ್ತಿಲ್ಲ. ಕೈಗಾ ಸ್ಥಾವರದಿಂದ ದಿಕ್ಕೆಟ್ಟಿರುವ ಮಂದಿ ಸೂಕ್ತ ಪರಿಹಾರ -ಪುನರ್ವಸತಿ-ಉದ್ಯೋಗ ಕೇಳುತ್ತಿದ್ದಾರೆ. ಇದನ್ನು ಕನಿಷ್ಠ ಕೇಂದ್ರ ಸರ್ಕಾರದ ಮಟ್ಟದಲ್ಲಾದರೂ ಮಂಡಿಸಲು ಜಿಲ್ಲಾ ಉಸ್ತುವಾರಿ ಮಂತ್ರಿ ತಾನೆಂದು ದೌಲತ್ತು ತೋರಿಸುವ ಮಂತ್ರಿ ಕಾಗೇರಿಗೇನು ಧಾಡಿ? ಎರಡೆರಡು ದಿನಕ್ಕೊಮ್ಮೆ ಧರಣಿ ನಿರತರ ಟೆಂಟಲ್ಲಿ ಕುಳಿತೆದ್ದು ಬರುತ್ತಿರುವ ಮಂತ್ರಿ ಆನಂದ್ ಅಸ್ನೋಟಿಕರ್ ನಾಟಕ ಬಿಟ್ಟು ಜಿಲ್ಲಾ ಉಸ್ತುವಾರಿ ಮಂತ್ರಿಯನ್ನು ಸರಿದಾರಿಗೆ ತಂದು ಸಂತ್ರಸ್ತರ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ!


> “ಭಾರತ ಮತ್ತು ಇತರೆ ದೇಶಗಳ ಹಲವಾರು ಮಹಿಳೆಯರ ಆತ್ಮ ಕಥನಗಳನ್ನು ಸುಕನ್ಯಾ ಕನಾರಳ್ಳಿ ಅವರು ಅನುವಾದಿಸುತ್ತಿದ್ದಾರೆ. ಅದನ್ನು ಪುಸ್ತಕ ರೂಪದಲ್ಲಿ ಸದ್ಯದಲ್ಲೇ ಲಂಕೇಶ್ ಪ್ರಕಾಶನ ಪ್ರಕಟಿಸಲಿದೆ.
> ಬೆಂಗಾಲಿ ರಂಗಭೂಮಿಯಲ್ಲಿ ಬಿನೋದಿನಿ ದಾಸಿಯ ಹೆಸರೊಂದು ದಂತಕಥೆ. 1874ರಲ್ಲಿ ಆಕೆ ಹನ್ನೊಂದು ವರ್ಷದವಳಾಗಿದ್ದಾಗ ಆರಂಭಿಸಿ 1886ರಲ್ಲಿ ಕೊನೆಯಾದ ಕ್ಷಿಪ್ರ ವೃತ್ತಿಜೀವನದಲ್ಲಿ ಆಕೆ ಬೆಂಗಾಲಿ ರಂಗಭೂಮಿಯ ಅತ್ಯಂತ ಉಜ್ವಲ ತಾರೆಯಾಗಿ ಬೆಳಗಿದಳು. ಗೀತನಾಟಕ, ಪ್ರಹಸನ, ದುರಂತ ನಾಟಕ, ಇತ್ಯಾದಿ ಐವತ್ತು ನಾಟಕಗಳಲ್ಲಿ ಅಭಿನಯಿಸಿದ ಬಿನೋದಿನಿ ಅರವತ್ತು ವಿವಿಧ ಪಾತ್ರಗಳನ್ನು ನಿರ್ವಹಿಸಿದ್ದಳು.
> ಬಿನೋದಿನಿ ದಾಸಿಯ ಆತ್ಮ ಕಥನದ ಆಯ್ದ ಭಾಗ ಇಲ್ಲಿದೆ...”

ನನ್ನ ಕಥೆ

ರಂಗಮಂದಿರವೊಂದನ್ನು ಸ್ಥಾಪಿಸಲು ನಾನು ನಿರ್ಧರಿಸಿದೆ. ಯಾಕಾಗಬಾರದು? ಬದುಕಿನುದ್ದಕ್ಕೂ ಅಣ್ಣತಮ್ಮ, ಅಕ್ಕತಂಗಿಯರಂತೆ ನಾವೆಲ್ಲ ಒಟ್ಟಿಗೆ ಬದುಕಿಲ್ಲವೆ? ಈ ಎಲ್ಲ ನನ್ನವರ ಮಾತುಗಳಿಗೆ ತುಂಬ ಬೆಲೆ ಕೊಡುತ್ತೇನೆ. ಅವರು ಹೇಳಿದ್ದು ಸರಿ, ನಾನೊಂದು ರಂಗಮಂದಿರವನ್ನು ಕಟ್ಟಿಸಿದರೆ ಒಂದೇ ಸೂರಿನಡಿ ನಾವೆಲ್ಲ ಒಂದು ದೊಡ್ಡ ಕುಟುಂಬದಂತೆ ಸದಾ ಒಟ್ಟಿಗೆ ಬದುಕಬಹುದು. ನನ್ನ ತಲೆಯಲ್ಲಿ ಈ ವಿಷಯ ಸಾಕಷ್ಟು ಬಲಿತ ನಂತರ ನನ್ನ ಯೋಜನೆಗೆ ಗುರುಮುಖ್ ರಾಯ್ ಸಹಾಯ ಮಾಡಲು ಒಪ್ಪಿಸಿದೆ. ಒಬ್ಬನ ಆಶ್ರಯವನ್ನು ತೊರೆದರೆ ಇನ್ನೊಬ್ಬನ ಆಶ್ರಯಕ್ಕೆ ಬೀಳುವುದು ನಮ್ಮಲ್ಲಿ ಒಂದು ಸಂಪ್ರದಾಯವಾಗಿದೆಯಲ್ಲ? ಗೊತ್ತಿರುವ ವಿಷಯವೇ ಆದರೂ ಸಹ ಒಮ್ಮೊಮ್ಮೆ ತುಂಬ ನೋವಾಗುತ್ತಿತ್ತು. ನಟಿಸಬೇಕಾಗಿ ಬಂದಾಗ ನನ್ನಂತಹವರು ಪಾಪಪ್ರಜ್ಞೆಯಿಂದ ಆಗಾಗ್ಗೆ ನರಳುತ್ತೇವೆ ಎನ್ನುವುದೇ ಜನರಿಗೆ ಹಾಸ್ಯಾಸ್ಪದವಾಗಿ ಕಾಣಿಸಬಹುದು. ಸ್ವಲ್ಪ ಯೋಚಿಸಿದರೆ ನಮಗೂ ಸಹ ಹೆಂಗರುಳೆನ್ನುವುದೊಂದಿದೆ, ಮೃದುವಾದ ಭಾವನೆಗಳಿವೆ ಎಂದು ಅರ್ಥವಾಗಬಲ್ಲದು. ದೇವರು ನಮ್ಮನ್ನು ಈ ಭೂಮಿಗೆ ಕಳುಹಿಸಿದಾಗ ಈ ಎಲ್ಲ ಭಾವನೆಗಳ ಜೊತೆಗೇ ಕಳುಹಿಸಿದ್ದ, ನಮ್ಮ ದುರ್ವಿಧಿ! ಎಲ್ಲ ಕಳೆದುಹೋಯಿತು. ಇದರಲ್ಲಿ ಸಮಾಜದ ವ್ಯವಸ್ಥೆ ಪಾಲು ಎಷ್ಟರಮಟ್ಟಿಗೂ ಇಲ್ಲವೆ? ಈ ಮೃದುವಾದ ಭಾವನೆಗಳು ಸಂಪೂರ್ಣವಾಗಿ ಅಳಿಸಿಹೋಗುವುದು ಸಾಧ್ಯವೆ? ಬೇಕಿದ್ದರೆ ನಾವು ಮಕ್ಕಳನ್ನು ಬೆಳೆಸುವ ರೀತಿಯನ್ನೇ ನೋಡಿ. ಗಂಡನೊಬ್ಬನ ಪ್ರೀತಿಗೆ ನಾವು ಹಂಬಲಿಸುತ್ತೇವೆ. ಆದರೆ ಸಿಗಬೇಕಲ್ಲ? ಮನಸ್ಸಿಗೆ ಮನಸ್ಸನ್ನು ಬೆಸೆಯಲು ಯಾರು ಸಿದ್ಧವಿದ್ದಾರೆ ಹೇಳಿ ನೋಡೋಣ? ಸರಸದ ಮಾತುಗಳನ್ನಾಡುತ್ತ ಕಾಮಾಸಕ್ತಿಯಿಂದ ಬರುವ ಗಂಡಸರಿಗೆ ಕೊರತೆಯೇನೂ ಇಲ್ಲ. ಆದರೆ ಇಲ್ಲೊಂದು ತುಡಿಯುತ್ತಿರುವ ಹೃದಯವಿದೆ ಎಂದು ಅರ್ಥಮಾಡಿಕೊಳ್ಳಲು ತಾಳ್ಮೆಯೆಲ್ಲಿ? ನಾಟಕವಾಡಿದ್ದು ನಾವೇಯೋ? ಅಥವಾ ಮೋಸ ಹೋದಮೇಲೆ ನಾಟಕವಾಡುವುದನ್ನು ಕಲಿತೆವೋ? ಅದನ್ನು ಪರೀಕ್ಷಿಸಲು ಯಾರಿಗಾದರೂ ಸಹನೆ ಬೇಕಲ್ಲ! ಪೂಜ್ಯರಲ್ಲಿ ಪೂಜ್ಯನಾದ ಆ ಅಮರ ಹರಿದಾಸನನ್ನು ಪ್ರಲೋಭಗೊಳಿಸಲು ನಮ್ಮಂತ ವೇಶ್ಯೆಯೊಬ್ಬಳನ್ನು ಕಳಿಸಲಾಯಿತು. ಆದರೆ ವೈಷ್ಣವನೊಬ್ಬ ಅವಳನ್ನು ನಡೆಸಿಕೊಂಡ ರೀತಿಯಿಂದ ಅವಳೊಬ್ಬಳು ವೈಷ್ಣವಿಯಾದಳು ಎನ್ನುವುದು ಎಲ್ಲರಿಗೂ ಗೊತ್ತು, ಅವಳಿಗೆ ಹೃದಯವೊಂದು ಇಲ್ಲದಿದ್ದರೆ, ಭಾವನೆಗಳೇ ಇಲ್ಲದಿದ್ದರೆ, ವಿಷ್ಣುವಿಗೆ ತನ್ನನ್ನು ಸಮರ್ಪಿಸಿಕೊಳ್ಳುವುದು ಸಾಧ್ಯವಿತ್ತೆ? ಹಣ ಯಾರ ಪ್ರೀತಿಯನ್ನೂ ಖರೀದಿಸಲು ಸಾಧ್ಯವಿಲ್ಲ, ಪ್ರೀತಿಯನ್ನು ಹಣಕ್ಕೆ ಮಾರಲು ನಾವು ಸಿದ್ಧರಿಲ್ಲ, ಅದಕ್ಕೆ ಜನರಿಗೆ ನಮ್ಮನ್ನು ಕಂಡರಾಗದು. ನಾಟಕಕಾರ ಗಿರೀಶ್ ಬಾಬು ತಮ್ಮ “ಬರಾಂಗನ” (ವೇಶ್ಯೆ) ಪದ್ಯದಲ್ಲಿ ಈ ಹತಭಾಗ್ಯ ಹೆಂಗಸರ ಬಗ್ಗೆ “ಎಲ್ಲರಂತೆ ಅವಳದೂ ಹೆಣ್ಣು ಹೃದಯವೇ.” ಎಂದು ಹಾಡಿದ್ದಾರಲ್ಲ? ನೀರೂ ಸಹ ಬಂಡೆಯಷ್ಟು ಕಠೋರ ರೂಪವನ್ನು ಪಡೆದುಕೊಳ್ಳಬಹುದು ತಾನೆ? ನಮ್ಮ ವಿಷಯದಲ್ಲೂ ಹಾಗೇನೆ. ಮತ್ತೆ ಮತ್ತೆ ತುಳಿತಕ್ಕೆ ಸಿಕ್ಕು ಅಸಹಾಯಕರಾಗುವವರ ಹೃದಯ ಕಲ್ಲಿನಂತೆ ಜಡವಾಗಿಬಿಡುತ್ತದೆ!

ಇರಲಿ, ಅದೆಲ್ಲ ಸದ್ಯಕ್ಕೆ ದೂರವೇ ಇರಲಿ. ಬದಲಾದ ಪರಿಸ್ಥಿತಿಗೆ ಒಗ್ಗಿಕೊಳ್ಳಲು ನಾನೂ ಮತ್ತು ಜೊತೆಯವರು ಏನೆಲ್ಲಾ ಬವಣೆ ಅನುಭವಿಸಬೇಕಾಯಿತು! ಈ ಹಿಂದೆ ಸೂಚಿಸಿದ ಸಣ್ಣಾಸ್ಯ ಯುವಕ ಇನ್ನೊಬ್ಬರ ಆಶ್ರಯದಲ್ಲಿದ್ದ ರಂಗತಂಡವೊಂದಕ್ಕೆ ನಾನು ಹಿಂದೆ ಬಾರದಂತೆ ಹೊರಟು ಹೋಗುತ್ತಿದ್ದೇನೆಂದು ತಿಳಿದಮೇಲೆ ನಮ್ಮ ಹಾದಿಯಲ್ಲಿ ಏನೆಲ್ಲಾ ಅಡೆತಡೆಗಳನ್ನೊಡ್ಡುವುದಕ್ಕೆ ಪ್ರಯತ್ನಿಸಿದ. ಅದು ಕೋಪವೋ, ಮೊಂಡುತನವೋ ನನಗಂತೂ ಗೊತ್ತಿಲ್ಲ, ನಮಗೆ ಅದರಿಂದ ಭಾರೀ ತ್ರಾಸವಾಗಿದ್ದಂತೂ ನಿಜ. ತನ್ನ ಜಮೀನ್ದಾರಿಯಿಂದ ಧಾಂಡಿಗರನ್ನು ಕರೆಯಿಸಿ ನಮ್ಮ ಮನೆಯ ಸುತ್ತ ನಿಲ್ಲಿಸಿದ. ಗುರುಮುಖ್ ಬಾಬು ಸಹ ಘಟಾನುಘಟಿ ಗೂಂಡಾಗಳನ್ನು ಕರೆಸಿದರು. ಒಬ್ಬರಿಗೊಬ್ಬರು ಗುದ್ದಾಡಿ, ಹೊಡೆದಾಡಿ, ಪೊಲೀಸರು ಬಂದು ದಿನಗಳ ಮಟ್ಟಿಗೆ ಎಲ್ಲ ರೀತಿಯ ರಂಪ ರಾದ್ಧಾಂತಗಳೂ ನಡೆದವು.


ಒಮ್ಮೆಯಂತೂ ನನ್ನ ಜೀವಕ್ಕೇ ಕುತ್ತು ಬಂದಿತ್ತು! ಒಂದು ದಿನ ತಾಲೀಮಿನ ನಂತರ ನನ್ನ ಕೋಣೆಯಲ್ಲಿ ಮಲಗಿದ್ದೆ. ಬೆಳಗಿನ ಆರು ಗಂಟೆ ಇದ್ದಿರಬಹುದು. ಹಠಾತ್ತನೆ ಕೇಳಿಸಿದ ಬೂಟುಗಾಲಿನ ಸಪ್ಪಳಕ್ಕೆ, ಏನೋ ಭಾರಿಯದು ಬಿದ್ದ ಶಬ್ದಕ್ಕೆ ಎಚ್ಚರಾಗಿ ಕಣ್ಣುಬಿಟ್ಟೆ. ಎದುರಿಗೆ ಮಿಲಿಟರಿ ಸಮವಸ್ತ್ರದಲ್ಲಿ ಕತ್ತಿಯೊಂದನ್ನು ಹಿಡಿದು ಕೋಣೆಯ ಮಧ್ಯದಲ್ಲಿ ಅಷ್ಟುದ್ದಕ್ಕೂ ನಿಂತಿದ್ದ ಈ ಯುವಕ! “ಮೇನಿ, ಏನಿಷ್ಟೊಂದು ನಿದ್ದೆ? ಎದ್ದೇಳಬಾರದೆ?” ಗಾಬರಿಯಾಗಿ ಥಟ್ಟನೆ ಎದ್ದು ಕೂತೆ. ಅವನು “ನೋಡು ಬಿನೋದ್, ಅವರ ಕಂಪೆನಿ ಬಿಟ್ಟರೆ ಸರಿ. ಇಲ್ಲಿಯತನಕ ನಿನಗೋಸ್ಕರ ಎಷ್ಟು ದುಡ್ಡು ಖರ್ಚು ಮಾಡಿದಾರೋ ಅದನ್ನು ನಾನು ಕೊಡಲು ಸಿದ್ಧ. ಇಗೋ, ಹತ್ತು ಸಾವಿರ ರೂಪಾಯಿ. ಇನ್ನೂ ಜಾಸ್ತಿಯೆಂದರೆ ಅದನ್ನೂ ಕೊಡಲು ನಾನು ತಯಾರು” ಎಂದು ಹೇಳಿದ. ನಾನು ಮೊದಲಿನಿಂದಲೂ ಹಠಮಾರಿ. ದರ್ಪ ದಬ್ಬಾಳಿಕೆ ತೋರಿಸಿದರೆ ಜಪ್ಪಯ್ಯ ನನ್ನಿಂದ ಏನೂ ಹುಟ್ಟುತ್ತಿರಲಿಲ್ಲ, ಕೋಪದಿಂದ ಕುದಿಯುತ್ತಿದ್ದೆ. ತಿಪ್ಪರಲಾಗ ಹಾಕಿದರೂ ಸರಿ. ಪ್ರೀತಿ, ಮಮತೆಗೆ ಕರಗಿ ನೀರಾಗುತ್ತಿದ್ದವಳು ದೌಲತ್ತಿನೆದುರು ಅಚಲಳಾಗಿ ನಿಲ್ಲುತ್ತಿದ್ದೆ. ಸುಲಭವಾಗಿ ಬಗ್ಗುತ್ತಿರಲಿಲ್ಲ, ಈತನ ದರ್ಪ ನನ್ನ ಕೋಪವನ್ನು ಕೆರಳಿಸಿತು. “ಖಂಡಿತಾ ಸಾಧ್ಯವಿಲ್ಲ, ಅವರಿಗೆ ಮಾತು ಕೊಟ್ಟಿದ್ದೇನೆ. ಕೊಟ್ಟ ಮಾತನ್ನು ಹಿಂದೆ ತೆಗೆದುಕೊಳ್ಳಲಾರೆ” ಎಂದೆ. “ದುಡ್ಡಿಗಾಗಿ ಹಿಂದೆ ಮುಂದೆ ನೋಡುತ್ತಿದ್ದೀಯಾದರೆ ಇಗೋ ನೋಡು, ಇನ್ನೂ ಹತ್ತು ಸಾವಿರ ಬಿಸಾಕುತ್ತೇನೆ ಬೇಕಾದರೆ!” ಅವನ ಅಹಂಕಾರದ ಮಾತುಗಳು ನನ್ನಲ್ಲಿ ಇನ್ನಷ್ಟು ರೊಚ್ಚನ್ನು ಮೂಡಿಸಿದವು. ಎದ್ದು ನಿಂತು “ನೋಡು, ನಿನ್ನ ದುಡ್ಡನ್ನ ನೀನೇ ಇಟ್ಟುಕೋ! ನಾನು ದುಡ್ಡನ್ನ ಸಂಪಾದಿಸಿದ್ದೇನೆಯೆ ಹೊರತು ದುಡ್ಡು ನನ್ನನ್ನು ಸಂಪಾದಿಸಿಲ್ಲ, ಅದೃಷ್ಟವೊಂದಿದ್ದರೆ, ನಿನ್ನ ಹತ್ತಿಪ್ಪತ್ತು ಸಾವಿರಗಳು ನನ್ನ ಬಳಿ ನೂರು ಸಾರಿ ಬಂದಾವು. ಈಗ ಮೊದಲು ಇಲ್ಲಿಂದ ತೊಲಗು!” ಎಂದೆ. ಕೇಳಿದ್ದೇ ಕೋಪದ ಕಿಚ್ಚಿನಲ್ಲಿ ಹತ್ತಿ ಉರಿಯಲಾರಂಭಿಸಿದ. ಕತ್ತಿಗೆ ಕೈ ಹಾಕಿ “ಹೌದೇನು? ನಿನ್ನ ಅಷ್ಟು ಸುಲಭವಾಗಿ ಬಿಟ್ಟುಬಿಡುತ್ತೇನೆಂದುಕೊಂಡಿದ್ದೀಯಾ? ಮೊದಲು ನಿನ್ನ ಕತ್ತರಿಸಿ ಎಸೆಯುತ್ತೇನೆ! ಆಮೇಲೆ ನಿನಗೆ ಕೊಡಬೇಕೆಂದುಕೊಂಡಿದ್ದ ಇಪ್ಪತ್ತು ಸಾವಿರವನ್ನು ಇನ್ಯಾವುದರ ಮೇಲಾದರೂ ಚೆಲ್ಲುತ್ತೇನೆ. ಆವಾಗ ನೋಡುವಂತೆ” ಎಂದು ಬೊಬ್ಬಿರಿದ. ಕತ್ತಿಯನ್ನು ಹೊರಗೆಳೆದು ನನ್ನ ತಲೆಗೆ ಗುರಿಯಿಟ್ಟು ಬೀಸಿದ. ನನ್ನ ಒಂದು ಕಣ್ಣು ಅವನ ಕತ್ತಿಯ ಮೇಲೆಯೇ ಇದ್ದರಿಂದ ಮೇಜಿನ ಹಾರ್ಮೋನಿಯಂ ಹಿಂದೆ ಥಟ್ಟನೆ ಬಾಗಿದೆ. ಕತ್ತಿ ಹಾರ್ಮೋನಿಯಮ್ಮಿಗೆ ಮೇಲ್ಭಾಗಕ್ಕೆ ತಗುಲಿ ಮೂರು ಇಂಚಿನಷ್ಟು ಮರವನ್ನು ಸಿಗಿಯಿತು. ಕತ್ತಿಯನ್ನು ಕಿತ್ತು ಮತ್ತೊಮ್ಮೆ ಗುರಿಯಿಟ್ಟು ಎಸೆದ. ಅವನ ಅದೃಷ್ಟ ಚೆನ್ನಾಗಿತ್ತು ಮತ್ತು ಸಾಯುವುದು ನನ್ನ ಹಣೆಯಲ್ಲಿನ್ನೂ ಬರೆದಿರಲಿಲ್ಲ, ಈ ಬಾರಿ ಕತ್ತಿ ಸಣ್ಣ ಟೀಪಾಯಿಯೊಂದಕ್ಕೆ ತಗುಲಿತು. ಥಟ್ಟನೆ ಎದ್ದು ಮೇಲೆತ್ತಿದ್ದ ಅವನ ಕೈಯನ್ನು ಬಲವಾಗಿ ಹಿಡಿದೆ. “ಏನು ಮಾಡಬೇಕು ಅಂತ ಅಂದುಕೊಂಡಿದ್ದೀಯ? ನನ್ನನ್ನು ಕೊಲ್ಲಬೇಕೆಂದರೆ ಸ್ವಲ್ಪ ನಿಧಾನಿಸು. ಅದರಿಂದ ನಿನಗೇನಾಗುತ್ತೆ ಎಂದು ಸ್ವಲ್ಪ ಯೋಚಿಸು. ಈ ನನ್ನ ಕಳಂಕದ ಬಾಳು ಇದ್ದರೆಷ್ಟು? ಬಿಟ್ಟರೆಷ್ಟು? ನಿನ್ನ ಗತಿ ಏನಾಗುತ್ತೆ ಅಂತ ಯೋಚಿಸಿದ್ದೀಯಾ? ನಿನ್ನ ಕುಟುಂಬದ ಗತಿಯೇನು? ಕೇವಲ ಒಬ್ಬ ವೇಶ್ಯೆಗೋಸ್ಕರ ಕೊನೆಯಿಲ್ಲದ ಪಾಪವನ್ನು ಹೊತ್ತು ಈ ಪ್ರಪಂಚದಿಂದ ತೊಲಗಬೇಕೆಂದುಕೊಂಡಿದ್ದೀಯಾ? ನಾಚಿಕೆಯಾಗಬೇಕು ನಿನಗೆ! ನೋಡು, ನನ್ನ ಮಾತನ್ನು ಸ್ವಲ್ಪ ಕೇಳು. ಸ್ವಲ್ಪ ತಾಳ್ಮೆ ತಂದುಕೋ. ನಾನೇನು ಮಾಡಬೇಕು ಹೇಳು. ಆದರೆ ಸದ್ಯಕ್ಕೆ ದಯವಿಟ್ಟು ಸಹನೆ ತಂದುಕೋ.”



ಕೋಪದ ಹೊಯ್ದಾಟ ಸ್ವಲ್ಪ ಇಳಿದನಂತರ ಮನುಷ್ಯರು ತಣ್ಣಗಾಗುತ್ತಾರೆ ಎಂದು ಕೇಳಿದ್ದೇನೆ. ಈಗ ಆಗಿದ್ದೂ ಹಾಗೆಯೇ. ಕತ್ತಿಯನ್ನು ದೂರ ಎಸೆದು ಕೈಗಳಲ್ಲಿ ಮುಖವನ್ನು ಮುಚ್ಚಿಕೊಂಡು ಕುಸಿದು ಕುಳಿತ. ಮರುಕ, ಸಂಕಟದಿಂದ ನನ್ನೆದೆ ತುಂಬಿ ಬಂತು. ಯಾವುದು ಹ' ೀ ಗ ಾ ದ ' ರ ' ೂ ಹಾಳಾಗಿಹೋಗಲಿ, ಅವನ ಜೊತೆ ಸುಮ್ಮನೆ ಹೋಗಿ ಬಿಡಲೇ ಎಂದೆನ್ನಿಸಿತು. ಆದರೆ ಅಷ್ಟು ಹೊತ್ತಿಗೆ ರಂಗಭೂಮಿಯವರೊಂದಿಗೆ ಮತ್ತು ಗಿರೀಶ್ ಬಾಬುನೊಂದಿಗೆ ನನ್ನ ಬದುಕು ಹೇಗೆ ತಳುಕು ಹಾಕಿಕೊಂಡಿತ್ತೆಂದರೆ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ, ಏನೋ, ಅಂತೂ ಆ ದಿನ ಬದುಕುಳಿದೆ. ಮತ್ತೊಂದು ಮಾತಾಡದೆ ಅವನು ಹೊರಗೆ ನಡೆದ. ಅಳಿದುಳಿದ ನಮ್ಮವರು ಗುಂಪೊಂದನ್ನು ಮಾಡಿಕೊಂಡು ನಾವು ಕೆಲಸ ಮಾಡುತ್ತಿದ್ದ ಬೆಂಗಾಲ್ ಥಿಯೇಟರನ್ನು ಬಿಟ್ಟುಬಂದೆವು. ನನ್ನನ್ನು ಅವರ ಇಚ್ಛೆಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವ ತನಕ ಹೊಸ ರಂಗಮಂದಿರಕ್ಕೆ ಏನೂ ಮಾಡುವುದಿಲ್ಲವೆಂದು ಗುರುಮುಖ್ ರಾಯ್ ಖಚಿತವಾಗಿ ಹೇಳಿದ್ದರು. ಸಮಸ್ಯೆಯನ್ನು ಹೇಗೆ ಬಗೆಹರಿಸುವುದೆಂದು ನಮ್ಮನಮ್ಮಲ್ಲೇ ಚರ್ಚಿಸಿ ಕೆಲವು ತಿಂಗಳುಗಳ ಮಟ್ಟಿಗಾದರೂ ಸುಮ್ಮನಿರುವುದು ಮೇಲೆಂಬ ನಿರ್ಧಾರಕ್ಕೆ ಬಂದೆವು. ಕೆಲವೊಮ್ಮೆ ರಾಣಿಗಂಜ್, ಕೆಲವೊಮ್ಮೆ ಇನ್ಯಾವುದೋ ಊರು ಹೀಗೆ ಸತತವಾಗಿ ಅಲೆದುಕೊಂಡೇ ಇದ್ದೆ. ಅಷ್ಟರ ಮಧ್ಯೆ ನಮ್ಮ ರಂಗಮಂದಿರವನ್ನು ಕಟ್ಟುವುದು ಹೇಗೆ, ನಡೆಸುವುದು ಹೇಗೆ ಎನ್ನುವುದರ ಬಗ್ಗೆ ಸಾಕಷ್ಟು ಚರ್ಚೆಯೂ ನಡೆಯುತ್ತಿತ್ತು, ಯೋಜನೆ ಒಂದು ಸ್ಪಷ್ಟ ರೂಪಕ್ಕೆ ಬಂದ ನಂತರ ಬಿಯಾದೋನ್ ರಸ್ತೆಯ ಪ್ರಿಯಾ ಮಿತ್ರ ಅವರಲ್ಲಿಂದ ಹೊರಡುವುದೆಂದು ತೀರ್ಮಾನವಾಯಿತು. ಅದಾದ ಮೇಲೆಯೇ ನಾನು ಕಲ್ಕತ್ತಾಗೆ ಹಿಂದಿರುಗಿ ಬಂದಿದ್ದು. ಕೆಲವು ದಿನಗಳ ನಂತರ ಗುರುಮುಖ್ ಬಾಬು “ನೋಡು ಬಿನೋದ್, ಈ ರಂಗಮಂದಿರ ಪಂಗಮಂದಿರದ ವಿಷಯವೆಲ್ಲವನ್ನೂ ಬಿಟ್ಟುಬಿಡು. ನನ್ನಿಂದ ಐವತ್ತು ಸಾವಿರ ರೂಪಾಯಿ ತೆಗೆದುಕೊಂಡು ಸಂತೋಷವಾಗಿರು. ಈ ಕ್ಷಣದಲ್ಲಿ ನಾನವನ್ನು ಸುರಿಯಲು ಸಿದ್ಧ!” ಎಂದು ಹೇಳುತ್ತಾ ನೋಟುಗಳ ಕಂತೆಯೊಂದನ್ನು ಹೊರತೆಗೆದರು. ರಂಗಭೂಮಿ ನನ್ನ ಜೀವಾಳವಾಗಿತ್ತು, ಆದಕ್ಕೇ ಸೂಳೆಯೆನ್ನಿಸಿಕೊಂಡಿದ್ದರೂ ಸಹ ಅರ್ಧ ಲಕ್ಷ ರೂಪಾಯಿಗಳನ್ನು ತಿರಸ್ಕರಿಸಿದೆ. ನನಗೋಸ್ಕರ ಐವತ್ತು ಸಾವಿರವನ್ನು ಸುರಿಯಲು ಸಿದ್ಧವಿರುವ ಗುರುಮುಖ್ ಬಾಬು ರಂಗಮಂದಿರದ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಿದ್ಧವಿಲ್ಲ ಎಂದು ಅರಿವಾದಾಗ ಅಮೃತಾ ಮಿತ್ರ ಮತ್ತು ಇತರರು ಚಿಂತೆಗೀಡಾದರು. ನಾನು ಹಣ ತೆಗೆದುಕೊಳ್ಳಬಾರದೆಂದು ಸಾಕಷ್ಟು ಒತ್ತಾಯಿಸಿದರು. ಆದರೆ ಒತ್ತಾಯದ ಅವಶ್ಯಕತೆಯೆಲ್ಲಿತ್ತು? ರಂಗಮಂದಿರವನ್ನು ಕಟ್ಟಿಯೇ ತೀರುತ್ತೇನೆಂಬ ಛಲ ನನ್ನಲ್ಲಿತ್ತು, ಕಟ್ಟಲು ಸಹಾಯ ಮಾಡದಿದ್ದರೆ ಅವನ ಇಚ್ಛೆಗಳನ್ನೂ ಪೂರೈಸಲಾರೆ ಎಂದು ಅಚಲವಾಗಿ ನಿಂತೆ. ಬಿಯಾದೋನ್ ರಸ್ತೆಯಲ್ಲಿ ಜಾಗವೊಂದನ್ನು ಭೋಗ್ಯಕ್ಕೆ ಖರೀದಿಸಿದ್ದು ನನ್ನ ಪ್ರಯತ್ನದಿಂದಲೇ. ನಂತರ ಕಟ್ಟುವ ಕೆಲಸದಲ್ಲಿ ಗುರುಮುಖ್ ರಾಯ್ ಉದಾರವಾಗಿ ಹಣ ಸಹಾಯ ಮಾಡಿದರು.

****






ರಂಗಮಂದಿರವನ್ನು ಕಟ್ಟುವ ಕೆಲಸ ಸಂಭ್ರ... ಮುಂದುವರೆಯಿತು. ಆ ದಿನಗಳಲ್ಲಿ ಮಧ್ಯಾಹ್ನ... ಮೂರು ಗಂಟೆಗೆ ತಾಲೀಮಿಗೆ ಹೋಗಿ ಮುಗಿಸಿ... ರಂಗಮಂದಿರದ ಜಾಗಕ್ಕೆ ಹಿಂತಿರುಗಿ ಬರುತ್ತಿದ್ದೆವು. ನನ್ನ ಜೊತೆಯವರೆಲ್ಲ ಹೊರಟುಹೋದರ... ಹಳ್ಳತಗ್ಗುಗಳನ್ನು ಮುಚ್ಚಲು ಬೇಕಾದ ಹೆಡಿಗೆಗಟ್ಟಲೆ... ಹೊರಲು ನಾನಲ್ಲಿಯೇ ಉಳಿಯುತ್ತಿದ್ದೆ. ಹಿಂದಿನ ದಿ... ಇದ್ದ ಜಾಗಗಳಲ್ಲೂ ಸಹ ಹಳ್ಳ ಬಿದ್ದಿರುತ್ತಿತ್ತು. ಕೆಲ... ಕೆಲಸಗಾರರಲ್ಲಿ ಚೈತನ್ಯ ತುಂಬಲು ಹೆಡಿಗೆಗ... ಜೋರಿಗಳನ್ನು ನಿಗದಿ ಮಾಡಿ ನೀಡುತ್ತಿದ್ದೆ. ಕಟ್ಟುವ... ಆದಷ್ಟೂ ಬೇಗ ಮುಗಿಯಬೇಕಿದ್ದರಿಂದ ರಾತ್ರಿ ವೇಳೆ... ಕೆಲಸ ನಡೆಯುತ್ತಿತ್ತು. ಆ ದಿನಗಳಲ್ಲಿ ನಾನೆಷ್ಟು ಸ... ವಾಗಿದ್ದೆ ಎನ್ನುವುದು ಹೇಗೆ ತಾನೆ ಹೇಳಲಿ? ಭಾರೀ... ಮಾಡಿ ಅತ್ಯುತ್ಸಾಹದಿಂದ ಕಟ್ಟಿದ ರಂಗಮಂದಿರ... ಗೊಮ್ಮೆ ತಲೆಯೆತ್ತಿ ನಿಂತಿತು. ಕಟ್ಟುವ ಕೆಲಸ ಹೆಚ್ಚು... ಒಂದು ವರ್ಷ ಹಿಡಿದಿತ್ತು, ಇದರ ಜೊತೆಗೆ ಇನ್ನ... ಸಂಗತಿಯನ್ನು ನಾನು ಹೇಳಲೇಬೇಕು. ರಂಗಮ... ಕಟ್ಟುತ್ತಿದ್ದ ದಿನಗಳಲ್ಲಿ ನನ್ನ ಜೊತೆಯವರೆ... ರಂಗಮಂದಿರಕ್ಕೆ ನಿನ್ನ ಹೆಸರನ್ನೇ ಇಡೋಣ. ನೀ... ಮೇಲೂ ನಿನ್ನ ಹೆಸರು ಚಿರವಾಗಿ ಉಳಿಯುತ್ತದ... ಹೆಸರು ‘ಬಿ’ ರಂಗಮಂದಿರ ಅಂತರ್ಥ” ಎಂದೆಲ್ಲಾ... ತ್ತಿದ್ದರು. ನನ್ನ ಸಂತೋಷ ಇನ್ನಷ್ಟು ಹೆಚ್ಚಾಗುತ್ತಿತ್ತು... ಯಾಕೋ ಗೊತ್ತಿಲ್ಲ, ಕೊಟ್ಟ ಮಾತನ್ನು ... ಉಳಿಸಿಕೊಳ್ಳಲಿಲ್ಲ, ರಂಗಮಂದಿರವನ್ನು ರಿಜಿಸ್ಟರ್ ಮಾ... ತನ್ನಕವೂ ಅದಕ್ಕೆ ನನ್ನ ಹೆಸರೇ ಎಂಬ ಭ್ರಮೆಯ... ಸಿದ್ಧತೆಗಳೆಲ್ಲವೂ ಮುಗಿದು, ರಂಗಕಲಾ... ಪ್ರಾರಂಭವಾಗಲು ಇನ್ನೊಂದೇ ವಾರ ಉಳಿದಿತ್ತು... ರಿಜಿಸ್ಟ್ರೇಷನ್ ಮಾಡಿಸಿ ಬಂದಾಗ ಕಾತರ ಸಂಭ್ರಮ... ಹೆಸರೇನಿಟ್ಟಿದ್ದೀರಾ ಎಂದು ಕೇಳಿದೆ. ದಾಶು... ಹಸನ್ಮುಖರಾಗಿ “ಸ್ಟಾರ್” ಎಂದು ಹೇಳಿದರು. ಕೇಳಿ... ಕುಳಿತೆ. ನೋವಿನಿಂದ, ಆಘಾತದಿಂದ ನನ್ನ ಬಾಯಲ್ಲಿ... ಹೊರಡಲಿಲ್ಲ, ಸಾವರಿಸಿಕೊಳ್ಳಲು ಸಂಪೂರ್ಣ... ನಿಮಿಷಗಳೇ ಹಿಡಿದವು. ಸ್ವಲ್ಪ ಹೊತ್ತಿನ ನಂತರ ಮ... ಸ್ತಿಮಿತಕ್ಕೆ ತೆಗೆದುಕೊಂಡು “ಒಳ್ಳೆಯದಾಯಿತು” ಎ... ಉಸುರಿದೆ. ಅವರ ಪ್ರೀತಿ, ವಿಶ್ವಾಸವೆಲ್ಲವೂ... ಪೂರೈಸಿಕೊಳ್ಳುವ ತನಕ ಹೂಡಿದ ಆಟಗಳೆ... ಯೋಚಿಸಿ ತಪ್ಪಳಾದೆ. ಇಷ್ಟಾದರೂ ನಾನೇನೂ ಮ... ಹಾಗಿರಲಿಲ್ಲ, ಸಂಪೂರ್ಣ ಅಸಹಾಯಕಳಾಗಿದ್ದೆ... ಹೊತ್ತಿಗೆ ನಾನವರ ಹಿಡಿತದಲ್ಲಿದ್ದೆ. ಈ ತರಹ... ಮಾಡುವರೆಂದು ನಾನು ಕನಸು ಮನಸಿನಲ್ಲಿ... ಎಣಿಸಿರಲಿಲ್ಲ, ಸಾವಿರಗಟ್ಟಲೆ ಹಣವನ್ನು ಒಲ್ಲೆನೆಂದ... ಈಗಿನ ಅರ್ಧದಷ್ಟೂ ನೋವಾಗಿರಲಿಲ್ಲ, ಅವರ... ನನ್ನನ್ನು ಚುಚ್ಚಿ ನೋಯಿಸಿತು. ನಾನದನ್ನು ಯಾರ ಹ... ಬಾಯಿಬಿಟ್ಟು ಹೇಳಲಿಲ್ಲ, ನಿಜ. ಆದರೆ ಮರೆಯು... ಹೇಗೆ ಸಾಧ್ಯ? ಬದುಕಿನುದ್ದಕ್ಕೂ ಆ ನೆನಪು ನನ್ನನ್ನು ಚು... ರಂಗಭೂಮಿ ನನ್ನ ಉಸಿರಾಗಿತ್ತು, ನನ್ನ ಪ್ರಾಣವಾ... ರಂಗಮಂದಿರವೊಂದು ಈಗ ಕಣ್ಣೆದುರು ನಿ... ಸಂಭ್ರಮದಲ್ಲಿ ಅದು ಸಾಧ್ಯವಾಗಿದ್ದಾದರೂ ಹೇಗೆ ಎ... ಯಾರು ಕೇಳುತ್ತಾರೆ? ಹೋಗಲಿ ಎಂದು ನನ್ನನ್ನು... ಸಮಾಧಾನಿಸಿಕೊಂಡೆ. ಆದರೆ ನಂತರವೂ ಅವರು... ಸರಿಯಾಗಿ ನಡೆಸಿಕೊಳ್ಳಲಿಲ್ಲ, ತುಂಬ ಹೀನಾ... ನಡೆಸಿಕೊಂಡರು. ಏನೇನೋ ಕಾನೂನುಗಳ... ನೆಪಹೇಳಿ ನಾವಲ್ಲಿ ಸಂಬಳಕ್ಕೂ ಮುಂದುವರಿ... ಮಾಡಿದರು. ಕೊನೆಗೂ ಸಾಧಿಸಿಯೇಬಿಟ್ಟರಲ್ಲ! ಪ... ವಾಗಿ ನಾನು ಎರಡು ತಿಂಗಳು ಮನೆಯಲ್ಲಿ ಕೂ... ಯಿತು. ಗಿರೀಶ್ ಬಾಬು ಪ್ರಯತ್ನದ ಫಲವಾಗಿ, ನನ್ನ... ಹಕ್ಕುಗಳನ್ನು ಪಡೆಯಲು ಪಟ್ಟು ಹಿಡಿದದ್ದರ ಪರಿಣಾ... ಮತ್ತೆ ನಾನು ಹಿಂದಿರುಗಿದೆ.

...ದ ತಲ್ಲಣಗಳ ...ತಣ್ಣನೆಯ ಗುರುತುಗಳು

...ಟತೆಗೆ ಬೆಂಕಿ ಇಟ್ಟು/ ಬಾಯಿ ಮುಚ್ಚಿಸಬೇಕು/ ಜೋಳಿಗೆಗೆ ಜೋತು ಬಿದ್ದು/ ಹರಿದ ಕನಸುಗಳ ಆ ...ತ್ತು ಸಾಗಬೇಕಿದೆ/ ದಣಿವಾಗಿದೆ ಆದರೂ ನಡೆಯಬೇಕು' ಎನ್ನುತ್ತಾ ತನ್ನ ಕಾಲವನ್ನು ಭಿನ್ನವಾಗಿ ...ಟ್ಟೂರಿನ ಯುವ ಕವಿ ಸೈಫ್ ಜಾನ್ಸೆ 'ಅಯ್ಯಂಗಾರಿಯ ಹತ್ತು ಪೈಸೆಯ ಬ್ರೆಡ್ಡು' ಎನ್ನುವ ಚೊಚ್ಚಲ ...ಮೂಲಕ ಮೊದಲ ಹೆಜ್ಜೆಗಳನ್ನಿಟ್ಟಿದ್ದಾರೆ. ಸೈಫ್ ಬಿಡಿಬಿಡಿಯಾಗಿ ಪತ್ರಿಕೆಗಳಲ್ಲಿ ಪದ್ಯ ಪ್ರಕಟಿಸಿ ...ತರಲ್ಲ. ಒಮ್ಮೆಗೆ 42 ಪದ್ಯಗಳೊಂದಿಗೆ ಸಂಕಲನದ ಮೂಲಕ ಕಾವ್ಯಾಸಕ್ತರ ಎದುರು ...ವ ಪ್ರಕಾಶನ ಅಂದವಾಗಿ ಪ್ರಕಟಿಸಿದೆ.

...ಗಳಲ್ಲಿ ಈ ಕಾಲದ ತಲ್ಲಣಗಳ ತಣ್ಣನೆಯ ಪ್ರತಿಭಟನೆಯ ಎಳೆಯೊಂದು ಬೆರೆತಿದೆ. ಅದು ...ದೆ, ಬಡಬಡಿಕೆಯಾಗದೆ ತೀವ್ರತರನಾದ ನೋವಿನ ಪ್ರಾಮಾಣಿಕ ಅಭಿವ್ಯಕ್ತಿಯಾಗಿದೆ. ಹಾಗಾಗಿ




ಸೈಫ್ ಪದ್ಯಗಳನ್ನು ಮೊದಲ ಸಂಕಲನದ ಕವಿತೆಗಳು ಎನ್ನುವ ರಿಯಾಯಿತಿ ಕೊಟ್ಟು ಓದಬೇಕಿಲ್ಲ. ಈಚಿನ ಹೊಸ ಕವಿಗಳ ಪೈಕಿ ಸೈಫ್ ಗಟ್ಟಿಯಾಗಿ ನಿಲ್ಲಬಲ್ಲವರಾಗಿ ಗಮನ ಸೆಳೆಯುತ್ತಾರೆ.

...ರ್ ಜೋಳದಕೂಡ್ಲಿಗಿ

ಮುಸ್ಸಂಜೆಯ ಹೊತ್ತು/ ಪಂಜುಗಳು ಉರಿಯುತ್ತಲೇ ಇವೆ/ ಕಂದಮ್ಮಗಳು ...ರದಿರಲಿ ಜೋಕೆ!/ ಗೆಲುವಿನ ಬೆನ್ನಟ್ಟಿ ಓಡುವ/ ನಿಮ್ಮ ಕಾಲ ಕೆಳಗೆ ನಮ್ಮ ಗೋರಿಗಳಿವೆ ಎನ್ನುವ ... ಭಿತ್ತಿಪತ್ರವನ್ನು/ ಜನರು ಎಂದೋ ಅವನ ಕೊರಳಿಗೆ/ ...ರೆ/ ನನಗೇಕೋ ಅದರೊಂದಿಗೆ/ ಪೂರ್ಣ ಸಮ್ಮತಿ ...ರೀಕ್ಷಿಸುವಷ್ಟು ಕುತೂಹಲವನ್ನು/ ನಾನಿನ್ನೂ ...ನೆ' (ಹುಚ್ಚನ ನಗುವನ್ನರಸುತ್ತಾ) ಎನ್ನುತ್ತಾ ಸಿನಿಕವಾಗದೆ ...ತೂಹಲವನ್ನು ಉಳಿಸಿಕೊಂಡಿದ್ದಾರೆ. ಹಾಗಾಗಿಯೇ ...ಮುಕ್ಕಿನ ಪಾದಗಳಲಿ/ ನೆಗ್ಗಲಿಯ ಮುಳ್ಳುಗಳೆಂದು/ ನಾವೂ ...ಮ್ಮ ತಲೆ ಕಾಲುಗಳನ್ನಾವರಿಸಿ/ ಹರಡಿ ಬೆಳೆಯುತ್ತೇವೆ/ ...ಹಾಸನಗಳ/ ಪುಡಿಗಟ್ಟುತ್ತೇವೆ' (ಅನ್ನ ಮಾರುವವರ ...ನ್ನುವ ಆಶಾವಾದದೊಂದಿಗೆ ಜನರೊಳಗಿನ ಕಿಚ್ಚನ್ನು ಕವಿ



...ನ್ನು ಓದಿದಾಗ ನಮ್ಮ ಕಾಲದಲ್ಲಿ ಉಸಿರುಗಟ್ಟಿದ ಧ್ವನಿ ...ಟಿಯಾಗಿ ಉಸಿರಾಡಿದ ಅನುಭವವಾಗುತ್ತದೆ. ...ಲೋಕದೃಷ್ಟಿ ತನ್ನ ಕಾಲದ ಛಿದ್ರತೆಯನ್ನೂ, ಮೌನವೆಂಬ ...ರ್ಯವನ್ನೂ, ಸಾಮಾನ್ಯರ ಅಸಹಾಯಕತೆಯನ್ನೂ ...ಾಗಿ ಸೈಫ್ ಪದ್ಯಗಳಿಗೆ ಸಹಜವಾದ ಒಂದು ಜೀವಂತಿಕೆ ...ಸುತ್ತಲಿನ ಅಣುಗಾತ್ರದ ಸಂಗತಿಗಳ ಆಯ್ದು, ಅವುಗಳ ...ನಾಗಿ ತನ್ನೆದುರಿನ ಕಾಲವನ್ನು ಕವಿ ಎದುರುಗೊಂಡಿದ್ದಾನೆ.

...ಸ ಮಿಂಚನ್ನು ಹೊಳೆಸಬಲ್ಲ ರೂಪಕ ಶಕ್ತಿ ಇಲ್ಲಿನ ಹಲವು ಕವಿತೆಗಳಿಗಿದೆ. ಹಾಗಾಗಿ ಶುದ್ಧ ಕಾವ್ಯದ ...ಳ ತುರುಕಿ, ಕಸರತ್ತಿಗೆ ಏನನ್ನಾದರೂ ಹೇಳುವ ಬದಲು, ಈ ಕವಿಗೆ ವಾಚ್ಯವನ್ನು ಮೀರುವ, ಮತ್ತಷ್ಟು ...ದಕ್ಕಬೇಕಿದೆ. ಇನ್ನಷ್ಟು ಓದು ಧ್ಯಾನ ಏಕಾಂತ ದೊರೆತರೆ ಸೈಫ್ ಹೆಚ್ಚಿನದನ್ನು ಬರೆಯಬಲ್ಲ ಎಂದು ...

ಅಯ್ಯಂಗಾರಿಯ ಹತ್ತು ಪೈಸೆಯ ಬ್ರೆಡ್ಡು (ಕವಿತೆಗಳು)
ಸೈಫ್ ಜಾನ್ಸೆ ಕೊಟ್ಟೂರು
ಪಲ್ಲವ ಪ್ರಕಾಶನ, ಚನ್ನಪಟ್ಟಣ,
ಪು: 12+78, ಬೆಲೆ: 80.00 ರೂ., 2011
ಸಂಪರ್ಕ: 9480353507

ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

ಬೆಂಗಳೂರಿನ ಅತಿ ಶಿಸ್ತಿನ ರಸ್ತೆಗಳಿಗೆ ರಿಯಲ್ ಎಸ್ಟೇಟ್ ಮತ್ತು ಗಣಿಕಳ್ಳರ ದುಡ್ಡು ಹೊಸ ಬಣ್ಣ ತಂದು ಬಳಿದಾಗ 'ಸೆಕ್ಸ್ ಟೂರಿಸಂ' ಎಂಬ ಪದ ಕೆಲದಿನ ಚಾಲ್ತಿಯಲ್ಲಿತ್ತು. ಪೇಜ್ ತ್ರೀ ಸಂಸ್ಕೃತಿಯನ್ನೇ ಉಂಡು ಮಲಗುವ ಇಂಗ್ಲಿಷ್ ಪತ್ರಿಕೆಗಳಂತೂ ಪ್ರವಾಸದ ಹೆಸರಿನಲ್ಲಿ ಸೆಕ್ಸ್ ಟೂರಿಸಂನ ಹೊಸ ಪ್ಯಾಕೇಜ್‌ಗಳಂತಿರುವ ಬ್ಯಾಂಕಾಕ್, ಥಾಯ್‌ಲ್ಯಾಂಡ್ ದೇಶಗಳ ಕುರಿತು ಉದ್ದುದ್ದ ಬರೆದು ಅಲ್ಲಿನ ದರ್ಶನ ಮಾಡಿಸಿದವು. ಬದುಕಿನಲ್ಲಿ ಅಡ್ಡದಾರಿ ಹಿಡಿದು ಗಳಿಸಿದ ದುಡ್ಡನ್ನೆಲ್ಲ ಈ ಸೆಕ್ಸ್ ಟೂರಿಸಮ್‌ಗೆ ಸುರಿಯುವ ವೈಟ್‌ಕಾಲರ್ ವರ್ಗವೊಂದು ನಮ್ಮ ಸಮಾಜದಲ್ಲಿದೆ. ವಿಲಿಯಂ ಡಾಲ್ರಿಂಪಲ್ ತರಹದ ಲೇಖಕರಿಗೆ ಪ್ರವಾಸ ಎನ್ನುವುದು ಹಣ ಮತ್ತು ಖ್ಯಾತಿ ತಂದುಕೊಡಬಲ್ಲ ಚರಿತ್ರೆಯ ಕಥನಗಳನ್ನು ಮುರಿದು ಮರಳಿ ಕಟ್ಟಲು ಪ್ರೇರೇಪಿಸುತ್ತವೆ.

ಕನ್ನಡದಲ್ಲಿ ಪ್ರವಾಸ ಕಥನಗಳು ಹತ್ತಿಪ್ಪತ್ತಕ್ಕಿಂತ ಹೆಚ್ಚು ಪ್ರಕಟಗೊಂಡಿಲ್ಲ. ಚಿಂತಕರಾದ ಡಾ.ಸಿ.ಜಿ.ಲಕ್ಷ್ಮೀಪತಿ ಎರಡು ವರ್ಷಗಳ ಹಿಂದೆ ಇದೇ ಥಾಯ್‌ಲ್ಯಾಂಡ್ ದೇಶಕ್ಕೆ ಶೈಕ್ಷಣಿಕ ಪ್ರವಾಸದ ಹೆಸರಿನಲ್ಲಿ ಕಾಲಿಡುವಾಗ ಎಲ್ಲರೂ ಸಹಜವಾಗಿ ಊಹಿಸಬಹುದಾದ ಈ 'ಸೆಕ್ಸ್ ಟೂರಿಸಂ' ಎಂಬ ಪೂರ್ವಗ್ರಹ ಅವರನ್ನೂ ಕಾಡಿದೆ. ಈ ದೇಶದ ಹೆಣ್ಣುಮಕ್ಕಳನ್ನು ಪ್ರವಾಸಿಗಳ ದಾಹ ತಣಿಸಲು, ಅವರ ಸೇವೆಗೆ ಸದಾ ನಿಲ್ಲುವಂತೆ ಸಜ್ಜುಗೊಳಿಸಲಾಗಿದೆ. ಭಾರತದ ನಾಗರಿಕ ಸಮಾಜ ಕಲ್ಪಿಸಿಕೊಳ್ಳಲು ಆಗದ ಅರೆಬೆತ್ತಲೆ ಹುಡುಗಿಯರನ್ನು ಅಲ್ಲಿನ ಗ್ರಾಹಕ ಸಂಸ್ಕೃತಿಯ ಅಧಿಕೃತ ವಕ್ತಾರರಂತೆ ಅಲ್ಲಿನ ಸರ್ಕಾರವೇ ಪೋಷಿಸುತ್ತಿರುವುದನ್ನು ಲೇಖಕರು ಖುದ್ದು ಕಾಣುತ್ತಾರೆ.

ಥಾಯ್‌ಲ್ಯಾಂಡ್ ಮುಗುಳ್ನಗೆ ಮತ್ತು ಸೆಕ್ಸ್ ಟೂರಿಸಂ

'ಈ ಪ್ರವಾಸ ಕಥನದಲ್ಲಿ ಬರುವ ಥಾಯ್ ಸಮಾಜ ನನ್ನ ಗ್ರಹಿಕೆಯ ಸಮಾಜವೇ ಹೊರತು ಅದು ಥಾಯ್ ಬದುಕಿನ ಸಮಗ್ರ ವಾಸ್ತವ ಚಿತ್ರಣವೆಂದು ನಾನು ನಂಬಿಲ್ಲ. ನನ್ನ ಗ್ರಹಿಕೆಯನ್ನೂ ಮೀರಿ ಥಾಯ್ ಸಮಾಜವನ್ನು ವ್ಯಕ್ತಿಗಳನ್ನು ತಪ್ಪಾಗಿ ಚಿತ್ರಿಸಿದ್ದರೆ ಅದರ ಹೊಣೆಯೆಲ್ಲವೂ ನನ್ನದೇ ಹೊರತು ಥಾಯ್ ಜನರದ್ದಲ್ಲ. ಅವರ ಪ್ರೀತಿ ತುಂಬಿದ ನಡವಳಿಕೆ ಮತ್ತು ಮುಗುಳ್ನಗೆಗೆ ಯಾವ ಕೃತಜ್ಞತೆಯೂ ಸರಿಸಾಟಿಯಲ್ಲ ಎಂಬುದೇ ನನ್ನ ಭಾವನೆ' ಎಂಬ ಲೇಖಕರ ಮಾತುಗಳು ಥಾಯ್‌ಲ್ಯಾಂಡ್ ಬಗ್ಗೆ ಪ್ರೀತಿ ಮೂಡುವಂತೆ ಮಾಡುತ್ತವೆ. 'ಥಾಯ್‌ಲ್ಯಾಂಡ್ ಎಂಬ ಮುಗುಳ್ನಗೆ' ಎಂಬ ಪ್ರವಾಸ ಕಥನದಲ್ಲಿ ಲೇಖಕರು ಥಾಯ್ ಜನರ ಪ್ರೀತಿ, ನಗುಮುಖ ಮತ್ತು ಅವರ ನಿಷ್ಕಪಟ ಕಾಳಜಿಗಳನ್ನು ಯಾವುದೇ ಬೌದ್ಧಿಕ ಭಾರವಿಲ್ಲದೆ ಸರಳವಾಗಿ ಕಟ್ಟಿಕೊಟ್ಟಿದ್ದಾರೆ. ಬುದ್ಧನನ್ನು ಹುಡುಕಲು ಹೊರಟ ಸಂಶೋಧಕನ ಹಸಿಹಸಿ ಧಾವಂತಗಳು ಈ ಕೃತಿಯಲ್ಲಿ ಹೇರಳವಾಗಿ ಸಿಗುತ್ತವೆ. ಡಾ.ಎಮ್.ವಿ.ವಸು ಅವರ ಮೌಲಿಕವಾದ ಮುನ್ನುಡಿ ಇಡೀ ಕೃತಿಗೊಂದು ಚಂದದ ತೋರಣ ಕಟ್ಟಿದೆ. ಪಾರ್ವತೀಶರ ಆಪ್ತ ಮಾತುಗಳು ಕೃತಿಯ ಬೆನ್ನಿಗಿವೆ.



ಡಾ.ಸಿ.ಜಿ.ಲಕ್ಷ್ಮೀಪತಿಯವರಂತೆ ಡಿ.ಆರ್.ನಾಗರಾಜರು ಕೂಡ ವಿಚಾರ ಸಂಕಿರಣವೊಂದರಲ್ಲಿ ಭಾಗವಹಿಸುವ ಸಲುವಾಗಿ ಥಾಯ್‌ಲ್ಯಾಂಡ್‌ನ ಕದ ಬಡಿದಿದ್ದರು. ಥಾಯ್‌ಲ್ಯಾಂಡ್ ಮುಟ್ಟಿಬಂದ ಡಿ.ಆರ್. ತಮ್ಮ 'ಸಾಹಿತ್ಯ ಕಥನ'ದಲ್ಲಿ ಬರೆಯುತ್ತಾರೆ: 'ಮುಕ್ತ ಮಾರುಕಟ್ಟೆ ತನ್ನಲ್ಲಿರುವುದನ್ನೆಲ್ಲ ಮುಕ್ತವಾಗಿ ಮಾರುತ್ತದೆ. ಇಲ್ಲಿ ಥಾಯ್‌ಲೆಂಡಿನಲ್ಲಿ ಹುಡುಗಿಯರು ಮಾರಾಟದ ವಸ್ತುಗಳೇ. ಪ್ರವಾಸ ಎನ್ನುವುದು ಭರ್ಜರಿ ಉದ್ದಿಮೆ. ಅರಣ್ಯ, ನದಿ, ಕಣಿವೆ, ಹುಲ್ಲುಗಾವಲು ಎಲ್ಲವೂ ಪ್ರವಾಸಿ ಸರಕುಗಳು. ಇಲ್ಲಿ ಎಲ್ಲವೂ ಪ್ರವಾಸಿಗಳದ್ದೇ. ಆಧುನಿಕ ಪ್ರವಾಸಿಗೆ ಯಾವುದೂ ಪವಿತ್ರವಲ್ಲ. ಆತ ಶಾಶ್ವತ ಉದ್ರೇಕದ ಹುಡುಕಾಟದಲ್ಲಿ ಇರುತ್ತಾನೆ. ಎಲ್ಲವೂ ಸಲೀಸಾಗಿ ಸಿಗಬೇಕು. ಬೇಗ ಸಿಗಬೇಕು. ಸಂಸ್ಕೃತಿಯೊಂದು ನೂರು ವರ್ಷ ನಿರಂತರ ಏಕಾಗ್ರತೆಯಲ್ಲಿ ರೂಢಿಸಿಕೊಂಡಿದ್ದು ಒಂದು ಸಂಜೆಯಲ್ಲಿ ಸಿಗಬೇಕು. ಆಧುನಿಕ ಯುಗ ಕಂಡುಕೊಂಡ ಆತ್ಮಹತ್ಯಾ ಮಾರ್ಗಗಳಲ್ಲಿ ಪ್ರವಾಸ ಪ್ರಧಾನವಾದದ್ದು.'

'ಬೆತ್ತಲೆ ವೃಕ್ಷ', 'ಕ್ಯಾಸ್ಟ್ ಕೆಮಿಸ್ಟ್ರಿ'ಯಂತಹ ಸಮಾಜಶಾಸ್ತ್ರೀಯ ಕೃತಿಗಳನ್ನು ಹಾಗೂ 'ಮತಾಂತರ ಸತ್ಯಾನ್ವೇಷಣೆ'ಯಂತಹ ಅಪರೂಪದ ಕೃತಿಯೊಂದನ್ನು ಸಂಪಾದಿಸಿರುವ ಸಿ.ಜಿ.ಲಕ್ಷ್ಮೀಪತಿ ಥಾಯ್ ಜನರ ನಿಜವಾದ ಮುಖಗಳ ಜೊತೆಗೆ ಈ ದೇಶ ಅಸಹಾಯಕವಾಗಿ ಪೋಷಿಸುತ್ತಿರುವ ಲೈಂಗಿಕ ದಂಧೆಯನ್ನು 'ಥಾಯ್‌ಲ್ಯಾಂಡ್ ಎಂಬ ಮುಗುಳ್ನಗೆ'ಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಬಿಡಿಸಿಟ್ಟಿದ್ದಾರೆ.

ಥಾಯ್‌ಲ್ಯಾಂಡ್ ಎಂಬ ಮುಗುಳ್ನಗೆ
ಲೇಖಕರು: ಡಾ.ಸಿ.ಜಿ.ಲಕ್ಷ್ಮೀಪತಿ
ಪ್ರಕಾಶಕರು: ಸಿರಿವರ ಪ್ರಕಾಶನ, ನಂ. ಎಮ್ 37/ಬಿ, 8ನೇ ಕ್ರಾಸ್, ಲಕ್ಷ್ಮೀನಾರಾಯಣಪುರ, ಬೆಂಗಳೂರು-21
ಪುಟಗಳು: 88, ಬೆಲೆ: ರೂ.65, ಪ್ರಕಟಣೆ: 2010

ಸಂಕಷ್ಟದಲ್ಲಿ ಅಡಿಕೆ ಬೆಳೆಗಾರರು




...ೂರು ಅಶೋಕ್

... ಜಿಲ್ಲೆಯ ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ...ರು ಹಿಂದೆಂದೂ ಕಾಣದಂತಹ ಆರ್ಥಿಕ ದುಸ್ಥಿತಿಗೆ ತಲುಪಿದ್ದಾರೆ. ... 30 ಹಾಗೂ 31 ರಂದು ಈ ಸಂಬಂಧವಾಗಿ ಈ ಎರಡು ...ಕೆ ಬೆಳೆಗಾರರು ಮತ್ತು ರೈತ ಸಂಘದವರು ಪಕ್ಷಾತೀತವಾಗಿ ...ಶ್, ಹೊಸ ಕೊಪ್ಪ ಸುಂದ್ರೇಶ್ ಹಾಗೂ ವಕೀಲರಾದ ಶ್ರೀಪಾಲ್ ...ಮುಖಂಡತ್ವದಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ ಎದುರು ...ನೂರಾರು ಜನ ರೈತರೊಡನೆ ಚಳವಳಿ ನಡೆಸಿದರು. ಎರಡೂರಿನ ... ರೋಗರುಜಿನಗಳ ಬಗ್ಗೆ ಚರ್ಚೆ ನಡೆಸಿದರು.

...ದಲ್ಲಿ ಈವರೆಗೆ ಅಡಿಕೆಗೆ ಬಂದಿರುವ ಪ್ರಮುಖ ರೋಗಗಳಾದ ... ರೋಗ, ಸುಳಿ ಸಾಯುವ ರೋಗ, ಅಣಬೆ ರೋಗ, ಹಳದಿ ...ಲೆಚುಕ್ಕಿ ರೋಗ ಈ ಐದು ರೋಗಗಳಿಂದಲೇ ಅಡಿಕೆ ...ಸ್ತು ಹೈರಾಣಾಗಿದ್ದರು. ಮಳೆ ಜಾಸ್ತಿ ಇರುವ ಮಲೆನಾಡಿನಲ್ಲಿ ಕೊಳೆರೋಗ ಇತ್ತು ಈಗ ಅದರ ಜೊತೆಗೆ ಹೊಸದೊಂದು ರೋಗ ಪ್ರಾರಂಭವಾಗಿದೆ. ಬೆಳೆದ ಅಡಿಕೆ ಕಾಯಿಗಳು ಗೊನೆಯಿಂದ ಸಂಪೂರ್ಣ ಉದುರಿ ಹೋಗುವುದು. ಈ ಹೊಸ ರೋಗ ತೀರ್ಥಹಳ್ಳಿ ಹೊಸನಗರ ತಾಲ್ಲೂಕುಗಳಲ್ಲಿ ಮಾತ್ರ ಕಾಣಿಸಿಕೊಂಡಿದೆ.

ಈ ಎರಡು ತಾಲ್ಲೂಕುಗಳಲ್ಲಿ ಬಿದಿರಿಗೆ ಕಟ್ಟೆ ಬಂದಿರುವುದರಿಂದ ಅದರ ಪರಿಣಾಮವಿರಬಹುದೆಂದು ರೈತರು ಊಹಿಸುತ್ತಿದ್ದಾರೆ. ಸುಮಾರಾಗಿ 10 ಕ್ವಿಂಟಾಲ್ ಅಡಿಕೆ ಬೆಳೆಯುವ ರೈತರಿಗೆ ಈ ಸಾರಿ ಒಂದು ಕ್ವಿಂಟಾಲ್ ಅಡಿಕೆಯೂ ಕೈಗೆ ಸಿಗದಂತಾಗಿದೆ. "ಅಡಕತ್ತರಿ ಒಳಗೆ ಸಿಕ್ಕಿದಂತೆ" ಎಂಬ ಗಾದೆಯಂತಾಗಿದೆ.

ಒಂದು ಪತ್ರ

ಶಿವಮೊಗ್ಗ ಜಿಲ್ಲೆಯಲ್ಲಿರುವ ಅಡಿಕೆ ಸಂಶೋಧನಾ ಕೇಂದ್ರಗಳಲ್ಲಿ ಸಾಕಷ್ಟು ಸೌಲತ್ತುಗಳಿಲ್ಲದಿರುವುದರಿಂದ ನಿಷ್ಕ್ರಿಯೆಗೊಂಡಿದ್ದಾರೆ. ಅಡಿಕೆ ಸಂಶೋಧನಾ ಕೇಂದ್ರಗಳು ಸರಿಯಾಗಿ ಕೆಲಸ ಮಾಡುವಂತೆ ಮಾಡುವುದರೊಳಗೆ ಈ ವರ್ಷದ ಬೆಳೆ ನಿರ್ನಾಮವಾಗಿರುತ್ತದೆ. ಮೇಲ್ಕಂಡ ಮತ್ತು ಈ ಕೆಳಗೆ ಕಾಣಿಸಿರುವ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ರೈತ ಮುಖಂಡರು ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ಶ್ರೀ ಪೊನ್ನುರಾಜ್‌ರವರಿಗೆ 31 ಸಂಜೆ ತಲುಪಿಸಲಾಗಿದೆ. ಶ್ರೀ ಜಿಲ್ಲಾಧಿಕಾರಿಗಳು ಕೂಡಲೇ ಸರ್ಕಾರಕ್ಕೆ ಈ ವಿಷಯ ತಿಳಿಸಿ ಸೂಕ್ತ ಪರಿಹಾರ ನೊಂದ ರೈತರಿಗೆ ಸಿಗುವಂತೆ ಏರ್ಪಡಿಸುವುದಾಗಿ ಮನವರಿಕೆ ಮಾಡಿದರು.

ನಮ್ಮ ಬೇಡಿಕೆಗಳು

1. ಎಲ್ಲಾ ಅಡಿಕೆ ಬೆಳೆಗಾರರ ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತಿಸಬೇಕು.
2. ಬ್ಯಾಂಕು ಮತ್ತು ಸಹಕಾರಿ ಸಂಘಗಳ ಮೂಲಕ ಪಡೆದಿರುವ ಸಾಲಗಳನ್ನು ಬಡ್ಡಿರಹಿತ ಸಾಲಗಳನ್ನಾಗಿ ಪರಿವರ್ತಿಸಬೇಕು.
3. ಸಾಲ ವಸೂಲಾತಿಗೆ ಯಾವುದೇ ನೋಟಿಸು ನೀಡದೆ ಶಾಂತಿಯುತ ಅಡಿಕೆ ಬೆಳೆಗಾರರನ್ನು ಆತ್ಮಹತ್ಯೆಗೆ ಪ್ರಚೋದಿಸಬಾರದು.
4. ಪ್ರತಿ ಎಕರೆಗೆ ಮೂವತ್ತು ಸಾವಿರ ರೂಪಾಯಿಗಳ ಪರಿಹಾರಧನವನ್ನು ಸರ್ಕಾರ ಘೋಷಿಸಬೇಕು.
5. ಹೊಸದಾಗಿ ಸಾಲಗಳನ್ನು ಕೊಡುವ ವ್ಯವಸ್ಥೆ ಮಾಡಬೇಕಲ್ಲದೆ ಸಾಲದ ಮೊತ್ತವನ್ನು ಹೆಚ್ಚು ಮಾಡಬೇಕು.
6. ಸಣ್ಣ ಮತ್ತು ಅತಿಸಣ್ಣ ಅಡಿಕೆ ಬೆಳೆಗಾರರ ಮಕ್ಕಳ ಉನ್ನತ ಶಿಕ್ಷಣದ ಹೊಣೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು.
7. ಸಂಕಷ್ಟಕ್ಕೊಳಗಾದ ಅಡಿಕೆ ಬೆಳೆಗಾರರ ಪರವಾಗಿ ಹೋರಾಟ ನಡೆಸುತ್ತಿರುವ ರೈತ ಪ್ರತಿನಿಧಿಗಳೊಂದಿಗೆ ಮಾತುಕತೆಗೆ ಮಾನ್ಯ ಮುಖ್ಯಮಂತ್ರಿಗಳನ್ನು ಆಹ್ವಾನಿಸುವ ಜವಾಬ್ದಾರಿಯನ್ನು ಮಾನ್ಯ ಜಿಲ್ಲಾಧಿಕಾರಿಗಳೇ ವಹಿಸಿಕೊಳ್ಳಬೇಕು.

-ಕಡಿದಾಳು ಶಾಮಣ್ಣ, ರೈತ, ಭಗವತಿಕೆರೆ, ಶಿವಮೊಗ್ಗ

ನನ್ನ ಅಂಗಡಿಗೆ ರಾಜ್‌ಕುಮಾರ್ ಬಂದಾಗ



ಪಿಯುಸಿಯಲ್ಲಿ ಓದುತ್ತಿದ್ದ ನಮ್ಮ ಮಗಳು ಗೌರಿ ಯಾರೋ ಹುಡುಗನೊಂದಿಗೆ ಓಡಾಡುತ್ತಿದ್ದಾಳೆ ಅಂತ ನನ್ನ ಸ್ನೇಹಿತೆ ರಾಣಿ ನನಗೆ ಹೇಳಿದಳು. ಕಾಲೇಜಿನಲ್ಲಿ ಗೌರಿಗಿಂತ ಎರಡು ವರ್ಷ ಸೀನಿಯರ್ ಆಗಿದ್ದ ಅವನ ಹೆಸರು ಚಿದಾನಂದ ರಾಜಘಟ್ಟ. ಒಮ್ಮೆ ಆತ ಗಾಂಧಿಬಜಾರ್‌ನಲ್ಲಿರುವ ಗಣೇಶ ಬೇಕರಿಗೆ ಬಂದಿದ್ದಾಗ ಗೌರಿ ಆತನನ್ನು ಪರಿಚಯಿಸಿದಳು. ಆತ ಕಪ್ಪಗೆ, ಸಣ್ಣಗೆ, ಎತ್ತರಕ್ಕೆ ಇದ್ದ. ನವಿಲಿನಂತಿದ್ದ ನನ್ನ ಮಗಳು ಕೆಂಬೂತದಂತಿರುವ ಈತನನ್ನು ಹೇಗೆ ಇಷ್ಟಪಟ್ಟಳು ಎಂದು ನನಗೆ ಅಚ್ಚರಿ ಆಯಿತು.

ಅದೂಅಲ್ಲದೆ ಆಗ ಅವರಿಬ್ಬರೂ ಇನ್ನೂ ಚಿಕ್ಕ ವಯಸ್ಸಿನವರು. ನೆಟ್ಟಗೆ ಓದಬೇಕಾದ ವಯಸ್ಸು. ಇದರ ಬಗ್ಗೆ ಲಂಕೇಶರಿಗೆ ಹೇಳಿದೆ. ಅವರು "ಆ ಹುಡುಗನನ್ನು ಮನೆಗೆ ಕರೆಸು, ನಾನು ಅವನೊಂದಿಗೆ ಮಾತಾಡುತ್ತೇನೆ" ಅಂದರು. ಆತ ಮನೆಗೆ ಬಂದಾಗ ಅವನಿಗೆ ಬುದ್ಧಿ ಹೇಳಿದರು. ವಿದ್ಯಾಭ್ಯಾಸ ಮುಖ್ಯ ಎಂದೆಲ್ಲ ವಿವರಿಸಿದರು. ಅವನು ಸುಮ್ಮನೆ ಕೇಳಿಸಿಕೊಂಡು ಕೂತಿದ್ದು ಹೋದ. ಗೌರಿ ಕೂಡ ಇನ್ನು ಮುಂದೆ ಅವನನ್ನು ಮೀಟ್ ಮಾಡುವುದಿಲ್ಲ, ಓದಿನ ಕಡೆ ಗಮನ ಕೊಡುತ್ತೇನೆ ಅಂದಳು. ಆಗ ನಾನು ಸುಮ್ಮನಾದೆ. ಒಂದು ವರ್ಷದ ನಂತರ ಗೌರಿ ಕಾಲೇಜಿಗೆ ಚಕ್ಕರ್ ಹೊಡೆದು ಚಿದಾನಂದನೊಂದಿಗೆ ಯಾವುದೋ ಸಿನಿಮಾಕ್ಕೆ ಹೋಗಿದ್ದಾಗ ಮತ್ತೆ ಅದೇ ರಾಣಿ ಕೈಯಲ್ಲಿ ಸಿಕ್ಕಿಹಾಕಿಕೊಂಡಳು.

ಈ ಮಧ್ಯೆ ಗೌರಿಗೆ ಇಬ್ಬರು ಡಾಕ್ಟರ್ ವರಗಳಿಂದ ಪ್ರಪೋಸಲ್ ಬಂದವು. ಇಬ್ಬರೂ ನಮ್ಮ ಪರಿಚಿತರೇ. ಒಬ್ಬ ಇದ್ದಕ್ಕಿದ್ದಂತೆ ಹೇಳದೆಕೇಳದೆ ನಮ್ಮ ಮನೆಗೆ ಬಂದೇಬಿಟ್ಟ. ಗೌರಿ ತನ್ನ ರೂಮಿನ ಬಾಗಿಲು ಹಾಕಿಕೊಂಡು ಕೂತವಳು ಆತನನ್ನು ನೋಡಲು ಹೊರಗೆ ಬರಲೇ ಇಲ್ಲ. ಅದಾದ ಕೆಲವು ದಿನಗಳ ನಂತರ ಅವಳು ಯಾರಿಗೂ ಹೇಳದೇಕೇಳದೇ ಬ್ಯೂಟಿ ಪಾರ್ಲರ್‌ಗೆ ಹೋಗಿ ಸೊಂಟದ ತನಕ ಇದ್ದ ತನ್ನ ತಲೆ ಕೂದಲನ್ನು ಕತ್ತರಿಸಿ ಬಾಬ್‌ಕಟ್ ಮಾಡಿಸಿಕೊಂಡು ಬಂದಳು. ಅವಳ ಪ್ರಕಾರ ಆ ಹುಡುಗನ ಮನೆಯವರು ಸಂಪ್ರದಾಯಸ್ಥರಾಗಿದ್ದರಿಂದ ಬಾಬ್‌ಕಟ್ ಹುಡುಗಿಯನ್ನು ಒಪ್ಪುವುದಿಲ್ಲ ಎಂದಾಗಿತ್ತು, ಅದು ಸರಿಯೂ ಆಗಿತ್ತು. ಆಕೆಯ ಹೊಸ ಅವತಾರವನ್ನು ನೋಡಿದ ನನ್ನ ತಮ್ಮ ಶಿವು ಗೌರಿಗೆ ಎರಡು ಬಿಗಿದ. ಆಕೆ ಸುಮ್ಮನೇ ಕೂತಿದ್ದಳು.

ಇನ್ನೊಬ್ಬ ಡಾಕ್ಟರ್ ಗೋಲ್ಡ್ ಮೆಡಲ್ ತೆಗೆದುಕೊಂಡಿದ್ದ. ಅವನೂ ಒಂದು ದಿನ ತನ್ನ ತಂದೆಯೊಂದಿಗೆ ನಮ್ಮ ಮನೆಗೆ ಬಂದ. ಗೌರಿಗೆ ಅದೆಷ್ಟು ಕೋಪ ಬಂದಿತ್ತೆಂದರೆ ಆಕೆ ಮನೆಯಲ್ಲಿ ತೊಟ್ಟಿದ್ದ ಬಟ್ಟೆಯಲ್ಲೇ ಅವರ ಮುಂದೆ ಕೂತಳು.


ಹುಡುಗ ಸ್ವಲ್ಪ ಕುಳ್ಳ. ಹೊಟ್ಟೆ ಕೂಡ ಇತ್ತು. ಆತ ಹೋದ ನಂತರ "ಹುಡುಗಿ ಏನೆಂದಳು" ಎಂದು ಎರಡು ಪತ್ರ ಬರೆದ. ಗೌರಿ ಸುತಾರಾಂ ಒಪ್ಪಲಿಲ್ಲ.

"ನನಗೆ ಈಗಲೇ ಮದುವೆ ಬೇಡ. ನಾನು ಓದುತ್ತೇನೆ" ಎಂದು ಗೌರಿ ಹಠ ಹಿಡಿದಳು. ಲಂಕೇಶರು ಆಗ ತಮ್ಮ 'ಎಲ್ಲಿಂದಲೋ ಬಂದವರು' ಚಿತ್ರದಲ್ಲಿ ತೊಡಗಿದ್ದರಿಂದ ಇದೆಲ್ಲದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ "ಅಮ್ಮನಿಗೆ ಬೇಜಾರಾಗದಂತೆ ನಡೆದುಕೋ" ಎಂದಷ್ಟೇ ತಮ್ಮ ಮಗಳಿಗೆ ಶೂಟಿಂಗ್ ಜಾಗದಿಂದಲೇ ಪತ್ರ ಬರೆದಿದ್ದರು.

ನನಗೂ ನನ್ನ ಮಕ್ಕಳು ಚೆನ್ನಾಗಿ ಓದಬೇಕು, ಅವರೆಲ್ಲ ಡಾಕ್ಟರ್, ಇಂಜಿನಿಯರ್ ಆಗಬೇಕಂತ ಆಸೆ. ನಮ್ಮ ಮಕ್ಕಳು ಯಾರೂ ರ್‍ಯಾಂಕ್ ಸ್ಟೂಡೆಂಟ್ಸ್ ಅಲ್ಲ, ಆದರೆ ಬುದ್ಧಿವಂತರು. ಯಾರೂ ಹಗಲೂರಾತ್ರಿ ಓದುತ್ತಿರಲಿಲ್ಲ, ಆದರೂ ಒಳ್ಳೆಯ ಮಾರ್ಕ್ಸ್ ಅನ್ನು ಪಡೆಯುತ್ತಿದ್ದರು. ಅಜಿತ್ ಅಂತೂ ಬರೀ ಕ್ರಿಕೆಟ್‌ನಲ್ಲೇ ಕಾಲ ಕಳೆಯುತ್ತಿದ್ದ. ಆದರೂ ಎಸ್‌ಎಸ್‌ಎಲ್‌ಸಿನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸಾದ.

* * * * *

ಒಮ್ಮೆ ತನ್ನ ಬಗ್ಗೆ ಪತ್ರಿಕೆಯಲ್ಲಿ ಏನೇನೋ ಬರೆದಿದ್ದಾರೆ ಎಂದು ಒಬ್ಬ ಮಹಿಳೆ ನನ್ನ ಅಂಗಡಿಗೆ ಬಂದು ತುಂಬಾ ಗಲಾಟೆ ಮಾಡಿದಳು. ಆಕೆ ಆಗ ಮುಖ್ಯಮಂತ್ರಿ ಆಗಿದ್ದ ಜೆ.ಎಚ್. ಪಟೇಲರ ಕಡೆಯವಳಂತೆ. ನನಗೂ ಪತ್ರಿಕೆಗೂ ಯಾವ ಸಂಬಂಧ ಇಲ್ಲ, ಬೇಕಿದ್ದರೆ ನಿಮ್ಮನ್ನು ಪತ್ರಿಕೆ ಆಫೀಸಿಗೆ ಕರೆದುಕೊಂಡು ಹೋಗುತ್ತೇನೆ ಎಂದು ನಾನು ಆಕೆಯನ್ನು ಎಷ್ಟೇ ಸಮಾಧಾನ ಮಾಡಿದರೂ ಆಕೆ ಕೇಳಲೇ ಇಲ್ಲ, ಅಂಗಡಿಯಲ್ಲೇ ಗಲಾಟಿ ಮಾಡುತ್ತಾ ನಿಂತಳು.



ಇನ್ನು ಕೆಲವರು "ಇವಳ ಗಂಡ ಅಷ್ಟು ಸಂಪಾದಿಸುತ್ತಾರೆ, ಇವಳಿಗೇಕೆ ಬೇಕು ಅಂಗಡಿಗಿಂಗಡಿ? ಸುಮ್ಮನೆ ಮನೆಯಲ್ಲಿ ಕೂರಬಾರದೇ" ಎನ್ನುತ್ತಿದ್ದರು. ಅಂಥವರಿಗೇನು ಗೊತ್ತು ನನ್ನ ಮತ್ತು ನನ್ನ ಅಂಗಡಿಯ ಸಂಬಂಧ? ನಮ್ಮ ಕಷ್ಟ ಕಾಲದಲ್ಲಿ ನನ್ನ ಸಂಸಾರವನ್ನು ಸಾಕಿದ್ದೇ ನನ್ನ ಅಂಗಡಿ. ನನಗೆ ನನ್ನದೇ ಆದ ಸ್ವಾತಂತ್ರ್ಯ, ಗುರುತು, ನೆಮ್ಮದಿ, ಹೆಮ್ಮೆ ಎಲ್ಲವನ್ನೂ ಕೊಟ್ಟ ಅಂಗಡಿ ಅದಾಗಿತ್ತು.

ಹಲವೊಮ್ಮೆ ಕೆಲವು ಶ್ರೀಮಂತ ಮನೆಗಳ ಮಹಿಳೆಯರು ನನ್ನ ಅಂಗಡಿಯಿಂದ ಸೀರೆಗಳನ್ನು ಅಪ್ರೂವಲ್ ಮೇಲೆ



ಅಥವಾ ಕಂತಿನ ಮೇಲೆ ತೆಗೆದುಕೊಂಡು ಹೋದನಂತರ ಹಣವನ್ನೇ ಕೊಡುತ್ತಿರಲಿಲ್ಲ, ಹಣ ಕೇಳಲು ಅವರ ಮನೆಗಳಿಗೆ ಹೋದರೆ ಅವರು ಮನೆಯೊಳಗಿದ್ದರೂ ಇಲ್ಲ ಎಂದು ಕಳುಹಿಸುತ್ತಿದ್ದರು. ಆದರೂ ನಾನು ಸುಮ್ಮನಾಗದೆ ನನಗೆ ಬರಬೇಕಿದ್ದ ಹಣವನ್ನು ವಸೂಲಿ ಮಾಡುತ್ತಿದ್ದೆ.

ಇದೆಲ್ಲದರ ಮಧ್ಯೆ ನನ್ನ ಮತ್ತು ಲಂಕೇಶರ ಜೀವನ ಅದು ಹೇಗೋ ಸಾಗುತ್ತಿತ್ತು, ಇಬ್ಬರೂ ಚೆನ್ನಾಗಿ ದುಡಿಯುತ್ತಿದ್ದೆವು. ಅವರು ಅವರದೇ ಆದ ಲೋಕದಲ್ಲಿ ಬದುಕುತ್ತಿದ್ದರು. ನಾನು ನನ್ನದೇ ಪ್ರಪಂಚವನ್ನು ಸೃಷ್ಟಿಸಿಕೊಂಡಿದ್ದೆ. ಈಗ ನಮಗೆ ಯಾವ ಕೊರತೆಯೂ ಇರಲಿಲ್ಲ, ಆದರೆ ನಾವಿಬ್ಬರು ಮದುವೆಯಾದಾಗ ಲಂಕೇಶರಿಗೆ ತಿಂಗಳಿಗೆ ಕೇವಲ 240 ರೂಪಾಯಿ ಸಂಬಳ ಬರುತ್ತಿದ್ದರೂ ಆಗ ನಮಗಿದ್ದ ನೆಮ್ಮದಿ, ಸುಖ ಮತ್ತು ಸಂತೋಷಗಳು ಈಗ ನೆನಪಾಗಿ ಮಾತ್ರ ಉಳಿದಿದ್ದವು.

ಲಂಕೇಶರು ತಮ್ಮ ಎಲ್ಲ ಕೆಲಸಗಳ ನಡುವೆ ಆಗೀಗ ಗೌರಿ ಜೊತೆ ಇಂಗ್ಲಿಷ್ ಸಿನಿಮಾಗಳಿಗೆ ಹೋಗುತ್ತಿದ್ದರು. ಹಾಗೆಯೇ ಒಮ್ಮೊಮ್ಮೆ ನಮ್ಮೆಲ್ಲರನ್ನು ಹೊರಗಡೆ ಊಟಕ್ಕೆ ಕರೆದು ಕೊಂಡು ಹೋಗುತ್ತಿದ್ದರು. ಆದರೆ ಮುಂಚಿತವಾಗಿ ಪ್ಲಾನ್ ಮಾಡಿ ಅಲ್ಲ, ಅವರಿಗೆ ಮೂಡ್ ಬಂದಾಗ ಇದ್ದಕ್ಕಿದ್ದಂತೆ "ಬನ್ನಿ, ಎಲ್ಲರೂ ಹೋಟೆಲ್‌ಗೆ ಊಟಕ್ಕೆ ಹೋಗೋಣ" ಎಂದು ಹೇಳಿ ಹಲವೇ ನಿಮಿಷಗಳಲ್ಲಿ ಎಲ್ಲರೂ ತಯಾರಾಗಬೇಕು ಎನ್ನುತ್ತಿದ್ದರು. ಹೇಗಿದ್ದರೂ ಅವರೊಂದಿಗೆ ಹೋಗುವುದು ಅಪರೂಪವಾಗಿದ್ದರಿಂದ ನಾವೆಲ್ಲರೂ ಆದಷ್ಟು ಬೇಗ ರೆಡಿ ಆಗುತ್ತಿದ್ದೆವು. ಲಂಕೇಶರಿಗೆ ಚೈನೀಸ್ ಊಟ ತುಂಬ ಇಷ್ಟವಾಗಿದ್ದರಿಂದ ನಾವು ಹೆಚ್ಚಾಗಿ ಚೈನೀಸ್ ಹೋಟೆಲ್‌ಗಳಿಗೆ ಹೋಗುತ್ತಿದ್ದೆವು.

ಬನಶಂಕರಿಯಲ್ಲಿ ಮನೆ ಕಟ್ಟಿಸಿದ ನಂತರ ಲಂಕೇಶರು ಗಾಂಧಿಬಜಾರಿನಲ್ಲೇ ಇರುವ ಇಎಟಿ ರಸ್ತೆಯಲ್ಲಿ ಒಂದು ಸೈಟನ್ನು ಕೊಂಡು ಅಲ್ಲಿ ಪತ್ರಿಕೆಯ ಆಫೀಸು ಕಟ್ಟಡವನ್ನು ಕಟ್ಟಿಸಿದರು. ಪತ್ರಿಕೆಯ ಕಚೇರಿ ಹೊಸ ಕಟ್ಟಡಕ್ಕೆ ಶಿಫ್ಟ್ ಆಯಿತು. ಪರಿಣಾಮವಾಗಿ ನಾವು 20 ವರ್ಷಗಳಿಂದ ಬದುಕಿದ್ದ ಲಂಕೇಶರು ತಮ್ಮ ಪತ್ರಿಕೆಯನ್ನು ಪ್ರಾರಂಭಿಸಿದ್ದ ಗೋವಿಂದಪ್ಪ ರಸ್ತೆಯ ಕಟ್ಟಡವನ್ನು ನಾವು ಕೊನೆಗೂ ತೊರೆದಿದ್ದೆವು. ಅದಾದನಂತರ ಆ ಮನೆಯ ಮಾಲೀಕರಾದ ನಾರಾಯಣರಾವ್ ಅವರು ಆ ಇಡೀ ಕಟ್ಟಡವನ್ನು ಡೆಮಾಲಿಷ್ ಮಾಡಿ ತಮಗೆ ಸ್ವಂತದ ಹೊಸ ಮನೆಯಲ್ಲಿ ಅದೇ ಜಾಗದಲ್ಲಿ ಕಟ್ಟಿಸಿದರು. ನಾನು ಈಗಲೂ ಆ ಗೋವಿಂದಪ್ಪ ರಸ್ತೆಯಲ್ಲಿ ಹಾದುಹೋಗುವಾಗ ನನ್ನ ಬದುಕಿನ ಬಹಳಷ್ಟು ವರ್ಷಗಳ ಏರುಪೇರುಗಳನ್ನು ಕಂಡ ಆ ಮ... ನೆನೆಯುತ್ತೇನೆ.

* * * * *

ಗೋಕಾಕ್ ಚಳವಳಿಗೆ ಡಾ. ರಾಜ್‌ಕುಮಾ... ಎಲ್ಲ ಕಡೆ ಹೋಗಿ ಹಣ ಸಂಗ್ರಹಿಸುತ್ತಿದ್ದರು. ಆಗ ಒಮ್ಮೆ ನನ್ನ ಅಂಗಡಿಗೂ ನಮ್ಮ ಕಟ್ಟಡದ ಮಾ... ಆರ್.ಎಂ.ಬಿ. ಆರಾಧ್ಯ ಅವರೊಂದಿಗೆ ಬಂದರು. ... ಲಂಕೇಶರು ನಿರ್ದೇಶಿಸಿದ್ದ 'ಅನುರೂಪ' ಚಿತ್ರಕ್ಕೆ ... ಬಂದಿದ್ದಾಗ ಆ ಫಂಕ್ಷನ್‌ನಲ್ಲಿ ನಾನು ರಾಜ್‌ಕು... ಅವರನ್ನು ಹತ್ತಿರದಿಂದ ನೋಡಿದ್ದೆ.

ಅದಕ್ಕೂ ಮುನ್ನ ನನಗೆ ಹತ್ತೋ, ಹನ್ನೊಂದೋ ವಯಸ್ಸಾಗಿದ್ದಾಗ ನಾವು ವಾಸಿಸುತ್ತಿದ್ದ ದಾವಣಗೆ... ರಾಜ್‌ಕುಮಾರ್ ಅವರ ಪ್ರಥಮ ಚಿತ್ರ 'ಬೇಡರ...' ಬಿಡುಗಡೆಗೊಂಡಿತ್ತು, ಆಗ ಅವರು ಒಂದು ದಿ... ಮನೆಯ ಮುಂದೆಯೇ ನಡೆದುಕೊಂಡು ಹೋ... ರಸ್ತೆಯಲ್ಲಿ ವಾಸಿಸುತ್ತಿದ್ದ ಎಲ್ಲರೂ ಅವರನ್ನು ನೋಡ... ಮನೆಯಿಂದ ಓಡಿಹೋಗಿದ್ದರು. ಆದರೆ ನನಗಾಗ ... ಹೋಗಿ ನೋಡಬೇಕು ಅನ್ನಿಸಿರಲಿಲ್ಲ.

ಒಮ್ಮೆ ಲಂಕೇಶರು ಡಾ. ರಾಜ್‌ಕುಮಾರ್ ಬ... ಯಲ್ಲಿ ಏನೋ ಬರೆದರು ಅಂತ ಕೃಷ್ಣರಾವ್ ಪಾ... ಲಂಕೇಶರನ್ನು ಹೊಡೆಯಲು ಒಂದು ಗುಂಪು ಬ... ಆದು ಹೇಗೋ ಲಂಕೇಶರು ಅವತ್ತು ಆ ಗುಂ... ತಪ್ಪಿಸಿಕೊಂಡು ಬಂದಿದ್ದರು.

ನನಗೆ ಯಾವಾಗಲೂ ರಾಜ್‌ಕುಮಾರ್ ಅವ... ಜಿಕ ಚಿತ್ರಗಳಿಗಿಂತ ಅವರ ಪೌರಾಣಿಕ ಚಿತ್ರಗಳೇ ... ತ್ತಿತ್ತು, ರಾಜ್‌ಕುಮಾರ್ ಮತ್ತು ಸುಧಾರಾಣಿ ಅಭಿ... 'ದೇವತಾ ಮನುಷ್ಯ' ಚಿತ್ರವನ್ನು ನೋಡಿದಾಗ ... ಅವರಿಬ್ಬರ ಅಪ್ಪ–ಮಗಳ ಪಾತ್ರ ನನ್ನ ... ತುಂಬಾ ಮುಟ್ಟಿತ್ತು. ಆ ಚಿತ್ರ... ನೋಡಿದಾಗ ನನ್ನ ಅಪ್ಪಯ್ಯನಿಗ... ನಿನ್ನಂಥ ಅಪ್ಪ ಇಲ್ಲ ಅಂತ ಹೇ... ಅನ್ನಿಸಿತ್ತು.

ನನ್ನ ಅಪ್ಪಯ್ಯ ನಮ್ಮನ್ನು ಸಾಕ... ಕಷ್ಟ ನೆನೆಸಿಕೊಂಡರೆ ನಾನು ಅವರ ಕ... ದಲ್ಲಿ ಅವರಿಗೆ ಏನೂ ಮಾಡಲ... ಎನ್ನುವ ಕೊರಗು ಈಗಲೂ ನನ್ನನ್ನು ... ಆದರೆ ಲಂಕೇಶರಿಗೆ ಹೆಂಡತಿ ಆಗಿ ನನ್ನ ಕರ್ತವ್ಯವ... ಮಾಡಿದೆ ಎನ್ನಿಸುತ್ತೆ.

ನಾನು ಗೋಕಾಕ್ ಚಳವಳಿಗೆಂದು ಅವತ್ತು ... ಕುಮಾರ್ ಅವರಿಗೆ ಒಂದು ಸಾವಿರ ರೂಪಾಯಿ ಕೊ... ರೊಂದಿಗೆ ಬಂದಿದ್ದ ಫೋಟೋಗ್ರಾಫರ್ ಒಬ್ಬ ನ... ಫೋಟೊ ತೆಗೆದುಕೊಟ್ಟ.

* * * * *

ಲಂಕೇಶರು ಎಂದೂ ಟಿವಿಯನ್ನು ತಾವಾ... ಮಾಡಿದವರಲ್ಲ, ಕ್ರಿಕೆಟ್ ಮ್ಯಾಚ್ ಅಥವಾ ... ಮ್ಯಾಚ್‌ಅನ್ನು ಅವರು ನೋಡಬೇಕೆಂದರೆ ನಾವು ... ದರೂ ಚಾನೆಲ್‌ಅನ್ನು ಸೆಟ್ ಮಾಡಿಟ್ಟಿರಬೇಕಿತ್ತು. ರಿಮೋಟ್‌ನಲ್ಲಿ ಆನ್/ಆಫ್ ಬಟನ್‌ಗಳನ್ನು ... ಒತ್ತುತ್ತಿದ್ದರು.

ಟಿವಿಯಲ್ಲಿ ಲಂಕೇಶರ ಬಗ್ಗೆ ಯಾವುದಾ... ಕಾರ್ಯಕ್ರಮ ಇದ್ದರೆ ನಾವೆಲ್ಲ ಅದನ್ನು ನೋಡಲು ... ತ್ತಿದ್ದೆವು. "ನೀವು ನೋಡಲ್ಲವಾ?" ಎಂದು ಕೇಳಿದರೆ ... ನಾನೇ ಏನು ನೋಡುವುದು? ನೀವು ನೋಡಿ" ... ಹೊರಟುಹೋಗುತ್ತಿದ್ದರು. ನಾವುಗಳು ಸಿನಿಮಾಗಳ... ತಂದು ನೋಡುತ್ತಿರುವಾಗ ಬೋರ್ ಆದರೆ ಹಾಡು... ಫಾಸ್ಟ್ ಫಾರ್ವರ್ಡ್ ಮಾಡುತ್ತಿದ್ದೆವು. ಆಗ ಲಂಕೇಶರು ... ಥೂ ಹಾಡುಗಳನ್ನು ನೋಡಿ. ಯಾಕೆ ಫಾಸ್ಟ್ ಫಾ... ಮಾಡುತ್ತೀರಾ" ಎನ್ನುತ್ತಿದ್ದರು.

ಲಂಕೇಶರಿಗೆ ತುಂಬಾ ಖುಷಿಯಾಗಿದ್ದರೆ ಅವ... ಸ್ಟಡಿರೂಂನಿಂದಲೇ "ಮೀಯಾಂವ್" ಅಂತ ... ಅನ್ನುತ್ತಿದ್ದರು.

(ಮುಂದುವರೆಯು...


ದುವಾ

ಯಾವ ದುವಾದ ರಿವಾಜುಗಳೂ ನೆನಪಿರದ ನಾವೂ
ಒಮ್ಮೆ ಕೈಯೆತ್ತಿ ಪ್ರಾರ್ಥಿಸೋಣ ಬಾ.
ಪ್ರೀತಿಯ ಸುಡು ಅಗ್ನಿ ಹಾಯುವುದು ಬಿಟ್ಟು
ಇನ್ಯಾವ ದೇವರ, ವಿಗ್ರಹಗಳ ಗುರುತಿಸಲಾರದ ನಾವೂ
ಒಂದು ಹರಕೆ ಹೊತ್ತೇ ಬಿಡೋಣ ಬಾ.

ಇಂದಿನ ವಿಷದ ಬಟ್ಟಲಲ್ಲಿ ನಾಳಿನ ಸಿಹಿ ತುಂಬಲಿ ಎಂದು,
ದಿನದಿನಗಳ ಭಾರ ಹೊರುವ ತ್ರಾಣ ಇರದ ಜೀವಗಳ ರೆಪ್ಪೆಯ ಮೇಲೆ
ಹಗಲುರಾತ್ರಿ ಹಗುರ ವಿರಮಿಸಲಿ ಎಂದು,
ಮುಂಜಾವಿನ ಕಿರಣದ ಕಣ್ಣಲ್ಲಿ ಕಣ್ಣಿಟ್ಟು ದಿಟ್ಟಿಸಲಾರದವರ ರಾತ್ರಿಗಳ
ಬೆಳಗಲಿ ಒಂದೆರಡು ಮೊಂಬತ್ತಿಗಳು ಎಂದು.

ದಿಕ್ಕೆಟ್ಟು ಅಲೆವ ಹೆಜ್ಜೆಗಳಿಗೆ ಹೊಳೆಯಲಿ ಹಾದಿ.
ಸುಳ್ಳು ಸೊಟ್ಟು ಬೂಟಾಟಿಕೆಯೇ ಧರ್ಮವೆಂದು ನಂಬಿದ ಮಂದಿಗೆ
ಬರಲಿ ಎದುರಾಡುವ ಧೈರ್ಯ, ಸತ್ಯ ಅರಸುವ ಛಾತಿ.
ದಬ್ಬಾಳಿಕೆಯ ಬೀಸುಗತ್ತಿಗೆ ತಲೆಬಾಗಿ ಕೂತವರಿಗೆ
ಬರಲಿ ಹಂತಕನ ಕೈಯ್ಯ ಝಾಡಿಸುವ ಶಕ್ತಿ.
ಮನದಲ್ಲಡಗಿ ಜೀವ ಸುಡುವ ಪ್ರೀತಿಯ ಜೊತೆ
ಏರ್ಪಡಲಿ ಏರಿದ ಜ್ವರ ತಣಿಸುವ ಒಪ್ಪಂದ.

ಎದೆಯ ಪ್ರತಿ ಬಡಿತದಲ್ಲಿ ಚುಚ್ಚುವ ಸತ್ಯದ ಮಾತ
ಒಪ್ಪಿ ಅಪ್ಪಿಕೊಳ್ಳೋಣ.
ಅಳಿದು ಹೋಗಲಿ ಈ ತಳಮಳ.




ಮೂಲ : ಫೈಜ್ ಅಹ್ಮದ್ ಫೈಜ್
ಕನ್ನಡಕ್ಕೆ : ಬಾಗೇಶ್ರೀ

...ಭಗವದ್ಗೀತೆ ಅಂದ್ರೆ ಕೆಲಸ ಮಾಡು, ಕೂಲಿ ಕೇಳಬ್ಯಾಡ ಅಂತ!

...ಮಾವನೂ ಜುಮ್ಮಿಯೂ ಬಂಗ ಮಾತನಾಡುತ್ತ ...ಉಗ್ರಿ ಹಳೆ ಪತ್ರಿಕೆಯ ಒಂದಕ್ಷರವನ್ನು ಬಿಡದಂತೆ ...ರ ಸುಮ್ಮನೆ ಕುಳಿತಿದ್ದ.

"...ಬದಿದಾಯ್ತೇನ್ಲೆ?" ಎಂದ ಕಾಳಮಾವ.

"... ಇಲ್ಲ ಕಣಮಾವ. ಸಂಕ್ರಾಂತಿ ಕಳಕಂಡು



...ತ ಇದ್ದೆ" ಎಂದಳು ಜುಮ್ಮಿ.

"...ದ್ದೀಯಾ?"

"...ಂದೇಳೆಂಟು ಜನಕ್ಕೇಳಿದ್ದಿನಿ. ಆ ಎಡೂರನೆಡ್ತಿ ...ಸುರಾಜನೆಡ್ತಿ ಮಾದೇವಿ, ನಿಂಗನೆಡ್ತಿ, ಚಿಕ್ಕನೆಡ್ತಿ ...ಕೇಳಿದ್ದಿನಿ. ನಮ್ಮನಿಯೋನು ನಾಕು ಮನಿಗೆ ...ಗಿದ್ದ, ಅವುರು ನಾಕಜನ ಬತ್ತರೆ. ಒಂದೇ ದಿನ ...ತಾಟ್ರಿಲಿ ವಡಸಕ್ಕೆ ಮಾಡಿದ್ದಿನಿ."

"...ತ್ರಿ (ಟ್ರ್ಯಾಕ್ಟರ್) ಚಕ್ರಕ್ಕೆ ಸಿಕ್ಕಿದ ಹುಲ್ಲು ದನಿಗೆ ...ಡ್ಡೆ, ಒಂಥರಾ ವಾಸನೆ ಬತ್ತದೆ."

"...ಅಂದ್ರೇನು ಮಾಡನಾ. ಕೋಲಲ್ಲಿ ಹುಲ್ಲು ...ಲ ಹೋಯ್ತು ಕಣಮಾವ. ಆ ಜನವೇ ...

"...ಮುಂದೆ ವಲಕುಯ್ಯಕ್ಕು ಜನಸಿಗದಿಲ್ಲ, ಹುಲ್ಲು ...ಆಳು ಸಿಗದಿಲ್ಲ, ಇಂಗಾದ್ರೆ ಬೇಸಾಯದ ಕತೆ ..." ಎಂದ ಸೀರ.

"...ಬಡಿಯೋ ಆಳಿಗೇನು ಕೂಲಿ ಮಾತಾಡಿದ್ದಿ?"

"...ನ್ನರಿಪ್ರಪಾಯಿ ಕೊಟ್ಟು, ವತ್ತರೆ ನಾಸ್ಟ, ..., ರಾತ್ರಿಕೂ ಊಟ ಕೊಡ್ತಿನಿ ಅಂತ ಹೇಳಿದ್ದಿನಿ. ...ದಿನೂಟಾಗಬೇಕಂತೆ. ಅದ್ಕೆ ಪಾರಂಕೋಳಿ ...ಎಂಟು ಕೇಜಿ ಪಾರಂಕೋಳಿ. ಗಂಡುಸುರಿಗ್ಯಲ್ಲ ...ದುಸಬೇಕು ಕಣಮಾವ."

"...ದೇ ಒಂದು ಸಂಕ್ರಾಂತಿ ಹಬ್ಬಾಯ್ತದೇ."

"...ವತ್ತು ಹೆಂಗಸರೇನು ಕಡಿಮೆ. ಅವುರೂ ..." ...ಉ ಜುಮ್ಮಿ ನಕ್ಕಳು.

"...ಟ್ಟೆ ಹೇಳ್ತಿಯಲ್ಲೇ. ನೀನು ತಗಳದಿಲ್ಲವೆ?" ...ನಕ್ಕ.

"...ಮೈ ಕೈ ನವ್ವಾದಾಗ ಒಂಚೂರು ತಗತಿನಿ ..."

"...ಮೋವಿಗೆ ವಳ್ಳೆದೆ ಅದು."

"...ಈ ಉಗ್ರಿ ಮದ್ದಿಗೆ ಕುಡುಸುವಾಗ ಅಂಗಂದಿದ್ದ ...ಕಣಮಾವ. ಕ್ಯಲಸಮಾಡಿ ಸುಸ್ತಾದೋರಿಗೆ ...ತೆ."

"ಏ ಅವ್ವಲ್ಲ ನೀವು ತಿಳಕಂಡಂಗೆ ಕಂಡ್ಳೆ. ಕುಡುದ್ರೆ ಮೈ ಕೈ ನೋವು ಹೋಯ್ತದೆ ಅನ್ನದಾದ್ರೆ ಇಡೀ ದೇಸವೆ ಕುಡಿಯದಪ್ಪ"

"ಆದ್ರು ಕುಡುಕರ ಸಂಖ್ಯೆ ಜಾಸ್ತಿಯಾಗ್ಯದೆ ದ್ವಡಪ್ಪ" ಎನ್ನುತ್ತಾ ವಾಟಿಸ್ಸೆ ಬಂದ.

"ಆ ಬಂಗಾರಪ್ಪ ಸತ್ತಾಗ ಊರುಬುಟ್ಟೋನು ಇವತ್ತು ಬಂದವುನೆ ಕಣಮಾವ. ಎಲ್ಲೋಗಿದ್ದ ಕೇಳು" ಎಂದಳು ಜುಮ್ಮಿ.

"ನಾನು ಸೊರಬ, ಶಿಕಾರಿಪುರ, ಚಂದ್ರಗುತ್ತಿ ಅಲ್ಲಲ್ಲ ಹೋಗಿ ನಮ್ಮ ಗುರು ತಿಥಿ ಮುಗಿಸಿಕೊಂಡು ಬಂದೆ."

"ತಿಥಿ ಮಾಡಕ್ಕೋಗಿದ್ದೊನು ತಲೆನೆ ಬೋಳಿಸಿಗಂಡಿಲ್ಲವಲ್ಲಾ."

"ತಲೆ ಬೋಳಸದೆ ಒಂದು ದೊಡ್ಡ ಕತೆ ಕಣಕ್ಕ. ಕುಮಾರ್ ಬಂಗಾರಪ್ಪ ಯಾರಿಗೂ ಕಾಣದಂಗೆ ಯಲ್ಲಾರಿಗಿಂತ ಮದ್ದೆ ತಲೆಯರಿಸಿಗಂಡು ಅವುನೊಂದು ಕಡೆ ಹೈಟೆಕ್ ತಿಥಿಮಾಡಿದ. ಇನ್ನು ಮದುಬಂಗಾರಪ್ಪನೂ ಇನ್ನೊಂದು ಕಡೆ ತಲೆ ಬೋಳಿಸಿಗಂಡು ರೂರಲ್ ತಿಥಿಮಾಡಿದ. ಅಂತೂ ಬಂಗಾರಪ್ಪನ ತಿಥಿ ಅದ್ವಾನಾಗೋಯ್ತು."

"ತಿಥಿ ಸರಿಯಾಗಿ ಮಾಡಲಿಲ್ಲ ಅಂದ್ರೆ ಸತ್ತೋರು ಗಾಳಿಯಾಯ್ತರೆ" ಎಂದ ಸೀರಮಾವ.

"ಬಂಗಾರಪ್ಪನಿಗೆ ಸುಮಾರು ಕನಸಿದ್ದೊ. ಅವ್ಯಾವು ಈಡೇರಿರಲಿಲ್ಲ, ಅವುನು ಮಾತ್ರ ಗ್ಯಾರಂಟಿ ದೆವ್ವಾಯ್ತನೆ ಕಣೊ."

"ಅವುನಿಗ್ಯಾವ ಕನಸಿದ್ದೊ?"

"ಕುಮಾರಣ್ಣ ಮುಖ್ಯಮಂತ್ರಿಯಾಗಬೇಕು, ಮದು ಬಂಗಾರಪ್ಪ ಗೆದ್ದು ಮಂತ್ರಿಯಾಗಬೇಕು, ಕುಮಾರ್ ಬಂಗಾರಪ್ಪ ಸೋಲಬೇಕು. ಇಂಥವೇ ಮನಿಯಾಳ ಕನಸುಗಳು ಇದ್ದೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಮ್ಮ ಗುರುಗಿದ್ದ ಕನಸ ಮನಿಯಾಳ ಕನಸು ಅನ್ನಬ್ಯಾಡ. ಅವುನ್ನಂಥ ದೊಡ್ಡ ಮನುಸ ಅಂತ ಒಂದೇ ಒಂದೆಗ್‌ಜಾಂಪಲ್ ಹೇಳ್ತಿನಿ ಕೇಳು."

"ಹೇಳಪ್ಪ ಅದೇನು."

"ನಿಮ್ಮ ಕಾಗೋಡು ತಿಮ್ಮಪ್ಪನಿಂದ ನಾಗಸಮುದ್ರಲ್ಲಿ ಗೋಲಿಬಾರಾಗಿ ರೈತರು ರಸ್ತೆ ಮ್ಯಾಲೆ ಸತ್ತೋದ್ರು. ಅವುರ ಕುಟುಂಬಕ್ಕೇ ಏನಾದ್ರೂ ಸಹಾಯ ಮಾಡಿ ಅಂತ ರೈತ ಸಂಘದೋರು ಬಂದಿದ್ರು. ಆಗ ನಾನೂ ಇದ್ದೆ. ಬಂಗಾರಪ್ಪ ಅವುನ ಸೆಕೆಟ್ರಿ ಅಲೆಗ್ಸಾಂಡರ್ ಕರದು 'ನಾಗ ಸಮುದ್ರದ ರೈತರ ವಿಷಯ ಎಲ್ಲಿಗೆ ಬತ್ತು?' ಅಂದ್ರು. ಅಲೆಗ್ಸಾಂಡರ್ ಫೈಲು, ಅರ್ಜಿ ಅಂತ ಏನೇನೊ ಅಂದ. ಆಗ ನಮ್ಮ ಗುರು 'ನೋಡಿ ನಾನು ಬಂಗಾರಪ್ಪ ಅಲ್ಲ ಮಾತಾಡ್ತಯಿರೋದು. ಕರ್ನಾಟಕದ ಮುಖ್ಯಮಂತ್ರಿ ಮಾತಾಡ್ತಯಿರದು. ಇನ್ನ ಒಂದೂವರೆ ಗಂಟೆಲಿ ನಾಗಸಮುದ್ರದ ರೈತರ ಪರಿಯಾರದ ಕಾಪಿ ಅವುರ ಕೈ ಸೇರಬೇಕು' ಅಂದ್ರು ಕಣೊ ಉಗ್ರಿ. ಇವತ್ತಾರವುರೇ ಅಂಥೋರು."

"ಸದಾನಂದ ಗೌಡಿಲ್ಲವೇನೊ."

"ಥೂ ನಿನ್ನ. ಏನೋ ಉಗ್ರಿ ಹೋಲಿಕೆ ಮಾಡದ್ಕೂ ಒಂದಿದಬೇಕು. ನಂಗುರು ಬಂಗಾರಪ್ಪೆಲ್ಲೀ ಈ ಕಾಲ್ಗೇಟ್ ಅಡವಿಟೇಜ್ ಗಿರಾಕಿ ಯೆಲ್ಲಿ, ಅಲ್ಲಾ ಕಣೊ ಆ ಎಡೂರಪ್ಪ ಯಗ್ನಯಾಗ ಮಾಡಿಸಿ ಮಾಡಿಸಿ ಹಾಳಾಗೋದ..."

"ಅವುನ್ಯಾಕಾಳಾದುನ್ನ?" ಎಂದಳು ಜುಮ್ಮಿ.



"ನೋಡಕ್ಕ ಹಾಳಾಗದು ಅಂದ್ರೆ ನಿನ್ನ ಲೆಕ್ಕದಲ್ಲಿ ಮನೆ ಮಠ ಮಾರಿಕಂಡು ಊರುಬುಟ್ಟ ಅಂತ ಅಲವೆ. ಆದ್ರೆ ಎಡೂರಪ್ಪ ಅಂಗಾಳಾಗಲಿಲ್ಲ. ಯಾಗ ಮಾಡಿಸಿದ್ದು ಸರಿಯಾಗದೆ ಅದವುನಿಗೆ ರಿವರ್ಸ್‌ಗೇರಾಯ್ತು. ಅದ್ಕೆ ನೋಡು ಮುಖ್ಯಮಂತ್ರಿ ಕುರ್ಚಿ ಕಳಕಂಡು ಅಲೀತಾ ಅವುನೆ. ಈ ಸದಾನಂದ ಗೌಡ ಅದ ನೋಡಿ ತಿಳಕಳದ ಬುಟ್ರೊ ಇವುನು ಅದ್ನೆ ಮಾಡ್ತನೆ ಅಂದ್ರೇ ರಿಯಲಿ ಪೂಲಿಷ್‌ಫೆಲೊ."

"ಯಜ್ಞ ಯಾಗ ಮಾಡದಕ್ಕಿಂತ ಆ ಬಿಜಾಪುರದ ಕಡೆ ಜನ ಬರಗಾಲ ಬಂದು ಗುಳೆ ಹೋಯ್ತಾಯಿದ್ದರಂತೆ. ಅಲ್ಲಿಗೋಗಿ ಅವುರು ಹೋಗದನ್ನಾದ್ರು ನೋಡ್ತ ನಿಂತಿದ್ರೆ ಅವುರಿಗ್ಯಲ್ಲ ಏನು ಮಾಡಬೇಕು ಅನ್ನದಾದ್ರು ಹೊಳಿಯದಲ್ಲೋ."

"ಅದೇ ಕಣೊ ಉಗ್ರಿ ನಾನೇಳಿದ್ದೂ. ಸ್ಕೂಲುಗಳೇ ಬಾಗ್ಲಾಕ್ತಾಯಿರುವಾಗ ಅದರ ಬಗ್ಗೆ ಯೋಚನೆ ಮಾಡದ ಬುಟ್ಟಾ. ಸ್ಕೂಲುಗಳಿಗೆ ಭಗವದ್ಗೀತೆ ಅಳವಡುಸ್ತನಂತೆ ಭಗವದ್ಗೀತೆಯ."

"ಭಗವದುಗೀತೆ ಅಂದ್ರೇನ್ಲ?" ಎಂದ ಕಾಳಮಾವ.

"ಒಳ್ಳೆ ಕ್ವಸ್ನೆ ಕೇಳಿದೆ ದೊಡಪ್ಪ. ನೀನು ಕುರುಕ್ಷೇತ್ರ ನಾಟಕ ನೋಡಿದ್ದೀಯಲ್ಲಾ ಯರಡಗಂಟೆ ರಾತ್ರಿಲಿ ಕೃಷ್ಣ ಅರ್ಜುನನ್ನ ಕುಂದ್ರಿಸಿಗಂಡು, ಯುದ್ಧಮಾಡು, ಹೆದ್ರಿಕಬ್ಯಾಡ ಅಂತ ಒಂದು ಗಂಟೆ ಕ್ವರಿತನೆ ನೋಡು, ಅದೇ ಭಗವದ್ಗೀತೆ."


"ಓಹೋಹೊ, ಅದ ಕ್ರಿಷ್ಣನ ತರ ಮೇಷ್ಟ್ರು ನಿಂತಗಂಡು ಹುಡ್ರಿಗ್ಯಲ್ಲ ಹೇಳಬೇಕು ಅನ್ನು" ಎಂದ ಕಾಳಮಾವ.

"ಊ ದೊಡಪ್ಪ, ಕರ್ಮ ಮಾಡು, ಅಂದ್ರೆ ಕೆಲಸ ಮಾಡು, ಕೂಲಿ ಕೇಳಬ್ಯಾಡ, ಸ್ಥಾನಮಾನ ಕೇಳಬ್ಯಾಡ, ನಾನೇ ದೇವುರು, ಯಲ್ಲಾನು ನನಿಗೆ ಬುಡು ಅಂತ ಮೇಷ್ಟ್ರು ಹೇಳತಾ ಹೋಯ್ತನೆ. ಈ ಪೂಲಿಷ್‌ಫೆಲೊಗಳು ಭಗವದ್ಗೀತೆ ಏನಾರ ಹೇಳಿದ್ರೆ ಏನು ಮಾಡ್ತಿನಿ ಗೊತ್ತ?"


"ಏನು ಮಾಡ್ತಿಲ?"

"ವಿಶ್ವ ಒಕ್ಕಲಿಗರ ಸಂಘಕ್ಕೇಳಿ ಕುವೆಂಪು ವಿಶ್ವಮಾನವ ಸಂದೇಶ ಸೇರಿಸಕ್ಕೆ ಹೋರಾಟ ಮಾಡಿ ಅಂತಿನಿ. ಕುರುಬರಿಗೇಳಿ ಕನಕದಾಸನ ಪದಗಳ ಸೇರಿಸಿ ಅಂತ ಹೋರಾಡಿ ಅಂತಿನಿ. ಇನ್ನ ದಲಿತ ಸಂಘದೋರು ನಾನು ಹೇಳಿದಂಗೆ ಕೇಳ್ತರೆ. ಅವುರುಗೇಳಿ ಅಂಬೇಡ್ಕರ್ ಮಾತುಗಳು ಭಗವದ್ಗೀತೆಗಿಂತ ಚೆನ್ನಾಗ್ಯವೆ. ಅವ ಅಳವಡಸಲಿಲ್ಲ ಅಂದ್ರ ಕೆಂಪು ಕ್ರಾಂತಿಯಾಗತ್ತೆ ಅಂತ ಎಚ್ಚರಿಕೆ ಕೊಡಿ ಅಂತಿನಿ. ಇನ್ನ ನಿಜವಾದ ಲಿಂಗಾಯಿತ ಲೀಡ್ರ ಭೇಟಿ ಮಾಡಿ ಬಸವಣ್ಣನ ವಚನಗಳೇ ಭಗವದ್ಗೀತೆಗಿಂತೂ ಚೆನ್ನಾಗ್ಯವೆ, ಅವ ಸೇರಸಲಿಲ್ಲ ಅಂದ್ರೆ ಮತ್ತೆ ಕಲ್ಯಾಣ ಕ್ರಾಂತಿ ಜರಗತ್ತೆ ಹುಶಾರ್ ಅಂತ ಹೇಳಿ ಅಂತಿನಿ. ಇನ್ನ ಜೇಡರ ದಾಸಿಮ್ಮಯನ ಕಡಿಯೋರು ತರಳಬಾಳಿನ ಟೀಮು ಇವುರನ್ಯಲ್ಲ ಎತ್ತಿಕಟ್ಟದು ಸುಲಭ. ಆಮ್ಯಾಲೆ ಕುರಾನ್ ಸೂಕ್ತಿ ಬೈಬಲ್ ಸುಭಾಷಿತ ಸೇರಸಕ್ಕೆ ಹೋರಾಟ ಸುರುವಾಯ್ತದೆ. ಆಗ ಇರದು ಮಜ" ಎಂದು ವಾಟಿಸ್ಸೆ ನಕ್ಕ.

...ಲನೆಂಬ ವಿಮರ್ಶಕ



ನಾವು ನಮ್ಮ ದೃಷ್ಟಿಯಲ್ಲಿ ಮಹಾ ಬುದ್ಧಿವಂತರಂತೆ ಕಾಣುತ್ತೇವೆ. ಪುಸ್ತಕಗಳನ್ನು ಕುರಿತ ನಮ್ಮ ತೀರ್ಮಾನಗಳು ಸುಳ್ಳಾಗುವುದು ಸಾಧ್ಯವಿಲ್ಲ ಎಂದು ಭ್ರಮಿಸಿರುತ್ತೇವೆ. ಆದರೆ ಕಾಲ ಎಲ್ಲವನ್ನೂ ಅಣಕಿಸುತ್ತದೆ. ಒಂದಾನೊಂದು ಕಾಲದಲ್ಲಿ ಮಹಾನ್ ಸಾಹಿತಿಯಾಗಿ ಕಂಡವನು ಇವತ್ತು ಉತ್ಸಾಹವನ್ನೇ ಹುಟ್ಟಿಸುವುದಿಲ್ಲ; ಆತನ ಮಾತು ತಮ್ಮ ಜೀವಂತಿಕೆ ಕಳೆದುಕೊಂಡಿರುತ್ತವೆ. ಹೀಗೆ ಹೇಳಿದರೆ ಕೇಳುವವರು ನಂಬುವುದಿಲ್ಲ. ಹೇಳುವವನ ಜಂಬ ಅವರನ್ನು ರೇಗಿಸುತ್ತದೆ. ಇದನ್ನು ವಿವರಿಸಲಿ? ನೂರು ವರ್ಷದ ಹಿಂದೆ ಜನರಲ್ಲಿ ಆನಂದ ಹುಟ್ಟಿಸಿದ ಪುಸ್ತಕ ಇವತ್ತು ಕೆಟ್ಟದಾಗಿ ಕಾಣಿಸಬಹುದು. ಭಾಷೆ ಬದಲಾಗಿರುತ್ತವೆ; ಬರೆಯುವ ಲಯ, ಮಾತಿನ ಬಳಕೆ, ಆಡುಮಾತಿಗೂ ಬರೆಯುವ ಮಾತಿಗೂ ಇರುವ ಸಂಬಂಧ ಬದಲಾಗಿರುತ್ತವೆ. ಆದರೆ ಇವತ್ತು ಓದಿದಾಗ ಆ ಪುಸ್ತಕ ಬೇಸರ ತರಿಸಿದರೂ ಹಾಗೆ ಹೇಳಲು ಹೆದರಿಕೊಂಡಿರುತ್ತೇನೆ; ಎಲ್ಲರೂ ಈ ಪುಸ್ತಕವನ್ನು ...ನ ನಾನು ಈಗ ನಸುಗನ್ನಿಸುವುದನ್ನು ಹೇಳಿದರೆ ಹೇಗೆ? ತ.ರಾ. ಸುಬ್ಬರಾಯರ 'ಕಂಬನಿಯ ಕುಯಿಲು' ಪ್ರಕಟವಾದಾಗ ...ಸಂತೋಷದಿಂದ ಕುಣಿದಾಡಿದ್ದೆವು; ಅದು ಎಷ್ಟು ಚಿತ್ರವತ್ತಾಗಿ, ಭಾವುಕವಾಗಿ ಕಂಡಿತ್ತೆಂದರೆ ಅದರಲ್ಲಿ ದೋಷಗಳಿರಲು ...ಸಿತ್ತು. ಆದರೆ ಈಗ ಓದಲು ಆಗುತ್ತಿಲ್ಲ. ಕಾರಂತರ 'ಮುಗಿದ ಯುದ್ಧ' ನಾನು ಚಿಕ್ಕವನಾಗಿದ್ದಾಗ ಓದಿ ಖುಷಿಪಟ್ಟಿದ್ದ ...ಾ ತಮಾಷೆಯ, ವ್ಯಂಗ್ಯದ ರಂಜನೀಯ ಪುಸ್ತಕ. ಆದರೆ ಅದು ಈಗ ಪೂರ್ತಿ ಜಡವಾಗಿದೆ. ಹಾಗೆಯೇ ಗೊರೂರು ...ದಷ್ಟು ಬರಹಗಳು; ಕುವೆಂಪುರವರ 'ಮಲೆನಾಡಿನ ಚಿತ್ರಗಳು', 'ನನ್ನ ದೇವರು' ಸಂಗ್ರಹಗಳನ್ನು ಮತ್ತೆ ಓದಿ ...ಕೊಂಡೆ. ಕಾಲ ಕೃತಿಗಳನ್ನು ಹೇಗೆ ಸಡಿಸಿಕೊಂಡು ಬರುತ್ತದೆ ಎಂದು ಬಹು ಸೂಕ್ಷ್ಮರಾದವರು, ಪ್ರಾಮಾಣಿಕರಾದವರು, ಧೈರ್ಯವಂತರು ಮಾತ್ರ ಹೇಳುವುದು ಸಾಧ್ಯ. ಕೆಲವು ಪುಸ್ತಕಗಳು ಜಡವಾಗುವುದಕ್ಕೆ ಬದಲು ಬೆಳೆಯುತ್ತವೆ.... 'ಜಲಗಾರ', 'ಬೊಮ್ಮನಹಳ್ಳಿ ಕಿಂದರಿಜೋಗಿ', 'ಶಾಲು ಸಾಬಿ', 'ಗರುಡಗಂಬದ ದಾಸಯ್ಯ' ಮುಂತಾದವು ಬೆಳೆದಂತೆ ಅನ್ನಿಸಿತು.... ಅನೇಕ ದಶಕಗಳ ಹಿಂದಿನ ಕೃತಿಗಳನ್ನು ನೋಡಿ. ಗ್ಯಾಲ್ಸ್‌ವರ್ದಿ, ಹಾರ್ಡಿ, ಕಿಪ್ಲಿಂಗ್, ಡಿಕನ್ಸ್ ಮುಂತಾದವರು ಪ್ರಖ್ಯಾತರು; ಗ್ಯಾಲ್ಸ್‌ವರ್ದಿ ಮತ್ತು ಕಿಪ್ಲಿಂಗ್‌ಗೆ ನೊಬೆಲ್ ಬಹುಮಾನ ದೊರೆಯಿತು; ಹಾಗೆಯೇ ಚರ್ಚಿಲ್, ರಸೆಲ್... ಇವರನ್ನು ಇವತ್ತು ಎಷ್ಟು ಪ್ರಯತ್ನಿಸಿದರೂ ಓದಲಾಗುವುದಿಲ್ಲ. ಟಾಲ್‌ಸ್ಟಾಯ್‌ನ ಕೆಲವು ಕತೆಗಳು ಬೆಳೆದಿವೆ, ಇನ್ನೂ ಕೆಲವು ತೀರಿಕೊಂಡಿವೆ. ದೋಸ್ತೋವಸ್ಕಿಯ ಕೃತಿಗಳು ಕೂಡ... ಆದರೆ ಕೆಳದನಿಯ, ಸಹಜವಸ್ತುಗಳ, ಇಂದ್ರಿಯಗಳಿಗೆ ಹತ್ತಿರ ಇರುವ, ಬದುಕಿನ ಸರಳ ಚಿರಗುಗಳಲ್ಲಿ ಕಣ್ಣು ನೆಟ್ಟ ಆಂಟನ್ ಚೆಕಾವ್ ಬೆಳೆದಿದ್ದಾನೆ. ಕೆಲವು ಕತೆ, ನಾಟಕಗಳಲ್ಲಿ ಸತ್ತಿದ್ದರೂ ಈತ ತನ್ನ 'ಡಾರ್ಲಿಂಗ್', 'ಚೆರ್ರಿ ಆರ್ಚರ್ಡ್'ಗಳಲ್ಲಿ ನಗುತ್ತಿದ್ದಾನೆ. ಹಾಗೆಯೇ ಇಂಗ್ಲೆಂಡಿನ ಆರ್ವೆಲ್, ಈತ ಸಹಜ ಲೇಖಕ. ಅನ್ನಿಸಿದ್ದನ್ನು ಸ್ಪಷ್ಟವಾಗಿ ಸಾಮಾನ್ಯನಂತೆ ಬರೆಯುವವನು. ಇವನು ಉದ್ದೇಶಪೂರ್ವಕವಾಗಿ, ಮಹತ್ವಾಕಾಂಕ್ಷೆಯಿಂದ ಬರೆದ ಕಾದಂಬರಿಗಳು ಹೆಚ್ಚುಕಮ್ಮಿ ತೀರಿಕೊಂಡಿವೆ. ಆದರೆ ಇವನ ಕಾಲಂಗಳು, ಲೇಖನಗಳು ಬೆಳೆದುನಿಂತಿವೆ; ಇವತ್ತು ಬರೆದಂತಿವೆ.... ಕಾಲ ಹೇಗೆ ಎಲ್ಲವನ್ನೂ ಸೋಸಿ, ಆರಿಸಿ ನಿಲ್ಲಿಸುತ್ತದೆ ಅಥವಾ ಗಟಾರಕ್ಕೆ ತಳ್ಳುತ್ತದೆ...



ಕಾಲನೆಂಬ ವಿಮರ್ಶಕನ ಎದುರು ಎಲ್ಲ ವಿಮರ್ಶಕರೂ ಶಿಷ್ಯರು. ಬರಿಯ ಸಾಮಾನ್ಯ ಓದುಗರು. ಆದರೆ ಈ ಕಾಲನ ಕೃತ್ಯಗಳನ್ನು ಪತ್ತೆಹಚ್ಚಲು ಈ ಸಾಮಾನ್ಯ ಓದುಗನಿಗೆ ಸರಳತೆ, ಪ್ರಾಮಾಣಿಕತೆ ಮತ್ತು ಅಭಿರುಚಿ ಬೇಕು. ಬದುಕಿನ ರೀತಿ ಮತ್ತು ಉದ್ದೇಶದ ಅರಿವು ಬೇಕು. ಹಾಗೆಂದು ಈ ಬಗ್ಗೆ ಓದಿ ಓದಿ ಪಂಡಿತನಾದವನು ಅಹಂಕಾರಪಡಬಲ್ಲ ಅಂಥವನನ್ನು ಕಾಲ ಎಲ್ಲಿ ತಳ್ಳುತ್ತದೆ ಎಂದು ನೀವು ಈಗ ಊಹಿಸಬಹುದು!

–ಏಪ್ರಿಲ್ 24, 1996

ಮುಸುಕು ತೆಗೆಯೊ ಚುನಾವಣಾಂಗನೆ

ಕೆಲವರಿಗೆ ಭ್ರಮೆ.

ತಾವು ದೊಡ್ಡವರು ಎಂಬ ಭ್ರಮೆ.

ಜನರ ಅಭಿಪ್ರಾಯ?


ಅದೂ ಅದೇ ಎಂಬ ಭ್ರಮೆ!

'ನಿಮ್ ಬುಟ್ಟಿ ಇನ್ಯಾವನಿದ್ದಾನು ಸಾ' ಎಂಬ ಸಮಯಸಾಧಕರ ಮಾತು ವೇದವಾಕ್ಯ. ಅವರಿಗೆ ಕೇಳಲು ಬಲು ಇಂಪು. ಭ್ರಮೆಯ ಬೇರು ಭದ್ರಪಡಿಸುವ ಸಂಜೀವಿನಿ: ಪ್ರತಿಮೆ ಸ್ಥಾಪಿಸುವ ಮೂಲಕ ಇದರ ಸಾಕ್ಷಾತ್ಕಾರ.

ಇವರು 'ಪ್ರತಿಮೆ ದೊಡ್ಡವರು!'

ಇದಕ್ಕೆ ಕಾಲದೇಶ ನಿರ್ಬಂಧ ಇಲ್ಲ. ಇವರು ಕಾಲಾತೀತರು, ದೇಶಾತೀತರು.

ಇಂತಹ 'ಪ್ರತಿಮಾರೋಗ' ಮಾಯಾವರೆಗೂ ಬಡಿದಿತ್ತು.



ದೇಶದೆಲ್ಲೆಡೆ ದಲಿತೇತರ ನಾಯಕರ ಪ್ರತಿಮೆಗಳ ಮೆರೆದಾಟ. ಅದೂ ಸಾರ್ವಜನಿಕರ ಹಣದಲ್ಲಿ! ಇದು ಕ್ರೂರ ಅನಿಸಿತು. ಹಟಕ್ಕೆ ಎಂಬಂತೆ ಬಿದ್ದರು ಮಾಯಾವತಿ. ತುಂಬಿತು ಉತ್ತರ ಪ್ರದೇಶ ದಲಿತ ನಾಯಕರ ಪ್ರತಿಮೆಗಳಿಂದ. ಇದು ಸಾಧ್ಯ ಆದದ್ದು ತನ್ನ ಪಕ್ಷದಿಂದ. ಅದರ ಚಿಹ್ನೆ ಆನೆ. ರಾರಾಜಿಸಿದವು ಆನೆಗಳ ಪ್ರತಿಮೆ!

ಇಷ್ಟಕ್ಕೆ ತೃಪ್ತಿ ಆಗಲಿಲ್ಲ. ದಲಿತ ನಾಯಕರ ಗೌರವದ ಸಂಕೇತವಾಗಿ ಸ್ಥಾಪಿಸಿದರು 'ನೊಯ್ಡ ಸ್ಮಾರಕ ಉದ್ಯಾನವನ!' ಪ್ರತಿಷ್ಠಾಪಿಸಿದರು ದಲಿತ ನಾಯಕರ ಪ್ರತಿಮೆಗಳ. ದಲಿತ್ ಕೀಚೇಟಿ ಪ್ರತಿಮೆಯೂ ಇತ್ತು. ಆನೆಗಳ ವಿಗ್ರಹಗಳಿಗೆ ಎಂದಿನಂತೆ ಕಾಯಂ ಸ್ಥಾನ. ಇದಕ್ಕೆ ತಗುಲಿದ ಖರ್ಚು ಆರುನೂರೋ ಏಳು ನೂರೋ ಕೋಟಿ ರೂಪಾಯಿಗಳಂತೆ. ಆಗದವರು 'ಸಾರ್ವಜನಿಕ ಹಣದ ಪೋಲು' ಎಂದೆಲ್ಲ ಚೀರಾಡಿದರು. 'ದೇಶದ ತುಂಬ ಇರುವ ದಲಿತೇತರರ ಪ್ರತಿಮೆಗಳೇನು ಉದ್ಭವಮೂರ್ತಿಗಳೆ' ಎಂದು ಹೀಯಾಳಿಸಿ ಅವರ ಬಾಯಿ ಮುಚ್ಚಿಸಿದರು ಮಾಯಾವತಿ.

ಇದೆಲ್ಲ ಹಳೆಕತೆಯಾಯಿತು. ಈಗ ಪ್ರತಿಮೆಗಳು ಮತ್ತೆ ಸುದ್ದಿಯಲ್ಲಿವೆ. ಇಂತಹ ಪ್ರತಿಮೆಗಳಿಂದ ಮಾಯಾವತಿ ಪಕ್ಷಕ್ಕೆ ಪರೋಕ್ಷವಾಗಿ ಪ್ರಚಾರ ಸಿಗುತ್ತಿದೆ ಎಂದು ಕೆಲವರ ಆಕ್ಷೇಪ. ಚುನಾವಣಾ ಆಯೋಗಕ್ಕೆ ದೂರು. ಆಯೋಗದಲ್ಲಿರುವವರೂ ಬುದ್ಧಿವಂತರೇ. ಹೌದು ಹೌದು ಚುನಾವಣೆ ಅಂದಮೇಲೆ ಸಮಾನ ಅವಕಾಶ ಇರಬೇಕು. ಇಲ್ಲಿ ಅದೇ ಇಲ್ಲವಾಗಿದೆ ಅನ್ನಿಸಿತು. ಇದನ್ನು ಸರಿಪಡಿಸುವುದು ಹೇಗೆ? ಬುದ್ಧಿವಂತರು ಅಳೆದು ಸುರಿದರು. 'ಪ್ರತಿಮೆಗಳಿಗೆ ಹೊದಿಕೆ ಹೊದಿಸಿ' ಎಂದು ಆಜ್ಞೆ ಮಾಡಿದರು! ಎಷ್ಟೇ ಆಗಲಿ ಬುದ್ಧಿವಂತರು ಅವರು!


ಬುದ್ಧಿವಂತರೇನೋ ಹೀಗೆ ಆರ್ಡರ್ ಮಾಡಿದರು. ಮತದಾರ ದಡ್ಡರಿದ್ದರಲ್ಲ ಅವರು ಪ್ರತಿಮೆಗಳು ಇರುವುದನ್ನೇ ಮರೆತಿದ್ದರು. ಈಗ 'ಪ್ರತಿಮಾ ಹೊದಿಕಾ' ಕಾರ್ಯಕ್ರಮದಿಂದ ಅವರಿಗೆಲ್ಲ ಕುತೂಹಲ. ಹೊದಿಕೆ ಹಾಕಲು ಪ್ರಾರಂಭಿಸಿದಾಗ 'ಇದೇನು ಮಾಡ್ತಿದಾರೆ' ಎಂಬ ಕುತೂಹಲ ಸೆಳೆಯಿತಂತೆ. ಆನಂತರ 'ಯಾಕೆ ಹೀಗೆ ಮಾಡಿದರು' ಎಂಬ ಚರ್ಚೆಗೆ ಗ್ರಾಸ ಒದಗಿತಂತೆ. ಇದ್ದೂ ಇಲ್ಲದಂತಹ ಪ್ರತಿಮೆಗಳಿಗೆ ಹೊದಿಕೆ ಹಾಕಿ ಆಯೋಗವೇ ಪರೋಕ್ಷವಾಗಿ ಪ್ರಚಾರ ನೀಡುತ್ತಿದೆ ಅನ್ನುವುದು ಕೆಲವರ ಅನ್ನಿಸಿಕೆಯಂತೆ.

ಅದು ಹಾಗಿರಲಿ. ಮಾಯಾವತಿ ಪಕ್ಷದ ಚಿಹ್ನೆ ಆನೆ. ಅದರ ವಿಗ್ರಹಕ್ಕೆ ಮುಸುಕು ಹಾಕಿದರು. ಮುಲಾಯಂಸಿಂಗ್ ಯಾದವ್ ಪಕ್ಷದ ಚಿಹ್ನೆ ಬೈಸಿಕಲ್ಲು. ಬುದ್ಧಿವಂತರು ಅವನ್ನೂ ನಿಷೇಧಿಸುತ್ತಾರೋ ಏನೊ! ಇನ್ನು ಭಾರತೀಯ ಜನತಾ ಪಕ್ಷದ ಚಿಹ್ನೆ ಕಮಲ. ಅದು ಬೆಳೆಯುವ ಕಡೆ ಎಲ್ಲ ಹೊದಿಕೆ ಹಾಕಿಸುತ್ತಾರೋ ಇಲ್ಲ ಅದರ ಗಿಡವನ್ನೇ ಮೂಲೋತ್ಪಾಟನೆ ಮಾಡುತ್ತಾರೋ ಗೊತ್ತಿಲ್ಲ. ಇನ್ನು ಪಕ್ಷೇತರ ಅಭ್ಯರ್ಥಿಗಳು ಬೇರೆ ಇರುತ್ತಾರೆ. ಅವರ ಚಿಹ್ನೆಗಳು ಇರುವ ಜೀವಿಗಳಿಗೆ ವಸ್ತುಗಳಿಗೆಲ್ಲ ಹೇಗೇ ಮೋಕ್ಷ ಕಾಣಿಸುತ್ತಾರೋ... ಬುದ್ಧಿವಂತರೇ ಹೇಳಬೇಕು!

ಮಾಟ್ಟುಕರಿ ಸಾಪುಡಂ ಮಾಮಿ ನಾನ್

'ಕುರಿ ಕೋಳಿ ಮಾಂಸ ತಿನ್ನುವ ಬ್ರಾಹ್ಮಣ ನಾನು, ಯಾರಿಗೂ ಬಗ್ಗೋನಲ್ಲ' ಎಂದು ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಅವರು 'ಪುಳ್ಚಾರ್ ಬ್ರಾಹ್ಮಣ' ಅಂತ ತಿಳಿದುಕೊಂಡು ಹಾರಾಡುತ್ತಿದ್ದವರಿಗೆ ಗುಡುಗಿದ್ದರಂತೆ. ಅದೇ ವರಸೇಲಿ ಅಲ್ಲದಿದ್ದರೂ ಮುಖ್ಯಮಂತ್ರಿ ಆಗಿದ್ದ ಪಟೇಲರು ಮೊಟ್ಟೆ ತಿನ್ನುತ್ತಿದ್ದುದನ್ನು ಕಂಡು ವೀರಶೈವ ಧರ್ಮಾವಲಂಬಿಯೊಬ್ಬರು 'ನೀವು ಮೊಟ್ಟೆ ತಿನ್ತೀರಾ ಸಾರ್' ಎಂದು ದಿಗ್ಭ್ರಾಂತ ವ್ಯಕ್ತಪಡಿಸಿದಾಗ ಅವರು 'ಮೊಟ್ಟೆ ಏನು ಕಂಡ್ರಿ, ಮೊಟ್ಟೆ ತಾಯೀನೂ ತಿನ್ತೀನಿ' ಅಂದಿದ್ದರಂತೆ. ಕರ್ನಾಟಕದ ಈ ಗಾಳಿ ತಮಿಳುನಾಡಿಗೆ ಬೀಸಿದೆಯೋ ಅಥವಾ ತಮಿಳುನಾಡಿನ ಗಾಳಿ ಈ ಕಡೆಗೆ ಬೀಸಿತೋ ಎಂಬ ಜಿಜ್ಞಾಸೆ ಮೂಡುತ್ತಿದೆ. ಯಾಕೆಂದರೆ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರು 'ಮಾಟ್ಟು ಕರಿ ಸಾಪುಡಂ ಮಾಮಿ ನಾನ್' ಎಂದು ಹೇಳಿದ್ದಾರಂತೆ!

ಅದು ಏನು ಆಗಿತ್ತು ಎಂದರೆ ತಮ್ಮ ನಾಲ್ಕು ದಶಕಗಳಿಗೂ




ಅಣಕ

ದೀರ್ಘ ಕಾಲದ ಸಂಗಾತಿ ಶಶಿಕಲಾ ಅಂಡ್ ಕಂಪೆನಿಯ
ಜಯಲಲಿತಾ ಒದ್ದು ಓಡಿಸಿದರಲ್ಲಾ ಆಗ ಕಿಚನ್ ಕ್ಯಾಬಿ
ಬಣಗುಟ್ಟುತ್ತಿತ್ತಂತೆ. ಅದಿಲ್ಲದೆ ಮುಖ್ಯಮಂತ್ರಿ ಆ
ನಡೆಸಲು ಸಾಧ್ಯ ಇಲ್ಲ ಎನ್ನುವುದನ್ನು ಜಯಲ
ಅರಿತಿದ್ದರು. ಇದುವರೆವಿಗೂ ಆ ಸ್ಥಾನವನ್ನು ಶಶಿಕಲಾ ಅ
ಕಂಪನಿ ತುಂಬಿತ್ತು. ಆ ಅಮ್ಮನಿಗೂ ಈ ಅಮ್ಮನಿ
ಹೊಂದಾಣಿಕೆಯೂ ಇತ್ತಂತೆ. ಇದರ ದುರುಪಯೋಗ
ಸಿಕೊಂಡ ಈ ಅಮ್ಮ ಏನು ಮಾಡಿದರಂತೆ ಅಂದರೆ
ಕುಲಬಾಂಧವರೇ ಹೆಚ್ಚು ಜನರು ಚುನಾವಣೆಯಲ್ಲಿ
ಬರುವಂತೆ ನೋಡಿಕೊಂಡಿದ್ದರಂತೆ. ಸಮಯ ನೋಡಿ ಜ
ಲಲಿತಾ ಅವರನ್ನೇ ಕಿತ್ತು ಒಗೆದು ತನ್ನ ಗಂಡನನ್ನೇ ಮ
ಮಂತ್ರಿ ಮಾಡಬೇಕು ಅನ್ನುವ ಸಂಚು ರೂಪಿಸಿದ್ದರಂತೆ.
ಸುಳಿವನ್ನು ಚೋ. ರಾಮಸ್ವಾಮಿ ಜಯಲಲಿತಾ ಕಿವಿ
ಉಸುರಿದರಂತೆ. 'ಅಂತೋಳಾ ಇವಳು' ಎಂದು ಹೌಹಾ
ಅವರು ಶಶಿಕಲಾ ಅಂಡ್ ಕಂಪನಿಯನ್ನು ಹೊ
ಹಾಕಿದರಲ್ಲಾ ಆಗ ಕಿಚನ್ ಕ್ಯಾಬಿನೆಟ್ ಖಾಲಿ ಬಿದ್ದಿತು.
ಇದ್ದದ್ದನ್ನು ಭರ್ತಿ ಮಾಡಬೇಕಲ್ಲ ಎಂದು ಕೆಲವರನ್ನು ಹ
ಎಳಕೊಂಡರಂತೆ. ಡಿಎಂಕೆ ಪಕ್ಷದವರಿಗೆ ಈ ಸದ
ಮೈಲಾಪುರ ಮಾಫಿಯಾ ಆಗಿ ಗೋಚರಿಸಿತಂತೆ.
ಜಯಲಲಿತಾ ನಲವತ್ತು ವರ್ಷಗಳಿಗೂ ಹೆಚ್ಚುಕಾಲ ನಂಬ
ಶೂದ್ರಿ ಶಶಿಕಲಾಳೇ ಬತ್ತಿ ಹೊಸೆದಿದ್ದಳು. ಹಾಳಾದ
ಸಹವಾಸವೇ ಬೇಡ ಎಂದು ಬ್ರಾಹ್ಮಣರನ್ನು ಹಿಡಿದು ಹ
ಬಹುದು. ಅದೇ ಘೋರ ಅಪರಾಧವಾಗಿ ಡಿಎಂಕೆ ಪಕ್ಷ
ರಿಗೆ ಗೋಚರಿಸಿತಂತೆ. ಬ್ರಾಹ್ಮಣ ವಿರೋಧಿ ಎಐಡಿ

ಪಾಕಿಸ್ತಾನಿ ಪ್ರೇಮಿ ಮುತಾಲಿಕನನ್ನು ಆ ದೇಶಕ್ಕೇ ಕಳುಹಿಸಬೇಕು

ಜನವರಿ 18, 2012ರ ಸಂಚಿಕೆಯಲ್ಲಿ 'ಸಿಂದಗಿ: ಪಾಕಿಸ್ತಾನಿ ಧ್ವಜ ಹಾರಿಸಿದ ಸಂಘಪರಿವಾರ' ಎಂಬ ಮುಖಪುಟದ ವರದಿ ಓದಿ ದಿಗ್ಭ್ರಮೆಗೊಂಡೆ. ಆರೆಸ್ಸೆಸ್‌ನ ಅತಿರೇಕಿ ಅಂಗಸಂಸ್ಥೆಯಾದ ಶ್ರೀರಾಮ ಸೇನೆಯ ಮಂಗಾಟ ಕೊನೆಗೂ ಬಯಲುಗೊಂಡಿದೆ. ಸಿಂದಗಿ ತಾಲ್ಲೂಕಿನ ತಹಶೀಲ್ದಾರ್ ಕಚೇರಿ ಮೇಲೆ ಪಾಕಿಸ್ತಾನದ ಧ್ವಜ ಹಾರಿಸಿ ಮುಸ್ಲಿಮರ ಮೇಲೆ ಗೂಬೆ ಕೂರಿಸುವ ನೀಚ ಹುನ್ನಾರ ಇದಲ್ಲದೆ ಮತ್ತೇನು? ದೇಶದ ಐಕ್ಯತೆಯನ್ನು ಹಾಳು ಮಾಡಲು ನಿಂತಿರುವ ಶ್ರೀರಾಮ ಸೇನೆಯ ನೀಚರನ್ನು ಜಾಲಾಡಿದ ನಮ್ಮ ಲಂಕೇಶ್ ಬಳಗಕ್ಕೆ ಅಭಿನಂದನೆಗಳು. ಗೃಹ ಸಚಿವ ಆರ್.ಅಶೋಕ್ ಇತ್ತಕಡೆ ಸ್ವಲ್ಪ ಗಮನ ಹರಿಸಲಿ. ದೇಶದ ಸಾರ್ವಭೌಮತ್ವ ಹಾಳುಗೆಡುವುತ್ತಿರುವ ಮತಿಗೇಡಿಗಳಿಗೆ ಅತ್ಯುಗ್ರ ಶಿಕ್ಷೆ ವಿಧಿಸಲಿ.



- ರಮಜಾನ ಕೆ.ಕೊರ್ತಿ, ಬಾದಾಮಿ

ಸಿಂದಗಿಯನ್ನು ಇನ್ನೊಂದು 2002ರ ಗುಜರಾತ್ ಮಾಡಲು ಶ್ರೀರಾಮ ಸೇನೆ ಇನ್ನೊಂದು ವ್ಯರ್ಥ ಪ್ರಯತ್ನ ನಡೆಸಿದೆ. ನಮ್ಮ ರಾಜ್ಯದಲ್ಲಿ ಇನ್ನೊಂದು ರಾಷ್ಟ್ರದ ಧ್ವಜವನ್ನು ಹಾರಿಸುವ ಮೂಲಕ ದೇಶದ್ರೋಹದ ಕೆಲಸಕ್ಕೆ ಪ್ರಮೋದ್ ಮುತಾಲಿಕನ ಪರಿವಾರ ಮುಂದಾಗಿದ್ದು ಇದೊಂದು ಘೋರ ಅಪರಾಧವೇ ಸರಿ. ಬಿಜಾಪುರ ಪೊಲೀಸರ ಕ್ರಮ ಮೆಚ್ಚಿಕೊಳ್ಳುವಂತದ್ದು. ಆದರೂ ಇಷ್ಟಕ್ಕೆ ಪೊಲೀಸರ ಕೆಲಸ ಮುಗಿದುಹೋಗಬಾರದು. ವಿಶೇಷ ತನಿಖೆ ನಡೆಸಿ ಪರೋಕ್ಷವಾಗಿ ಕಾರಣನಾದ ಮುತಾಲಿಕ ಸಹಿತ ರಾಮಸೇನೆ ಮತ್ತು ಆರೆಸ್ಸೆಸ್‌ನ ಚೆಡ್ಡಿಗಳನ್ನು ಕಂಬಿ ಹಿಂದೆ ಕಳುಹಿಸುವುದು ಪೊಲೀಸರ ಮುಂದಿರುವ ಜವಾಬ್ದಾರಿ ಎಂದು ನಾವು ಭಾವಿಸುತ್ತೇವೆ. ಅಲ್ಲದೆ ರಾಜ್ಯ ಸರ್ಕಾರವು ಮುತಾಲಿಕನ 'ಪಾಕಿಸ್ತಾನ ಪ್ರೇಮ' ವ್ಯಕ್ತಪಡಿಸಲು ಆತನಿಗೆ ಆ ದೇಶದಲ್ಲಿ ವಾಸಿಸುವ ವ್ಯವಸ್ಥೆ ಮಾಡಿ, ಸಾಧ್ಯವಾದರೆ ರಾಮ ಸೇನೆಯ ಎಲ್ಲಾ ಕಾರ್ಯಕರ್ತರನ್ನು ಪಾಕಿಸ್ತಾನಕ್ಕೆ ಗಡಿಪಾರು ಮಾಡಬೇಕಿದೆ.

ವಾಸ್ತವವಾಗಿ ಇದೇ ಘಟನೆ ದಕ್ಷಿಣ ಕನ್ನಡ ಅಥವಾ ಉಡುಪಿ ಜಿಲ್ಲೆಯಲ್ಲಿ ನಡೆದಿದ್ದರೆ ಅದರ ಬಲಿಪಶುಗಳು ಮುಸ್ಲಿಮರೇ ಆಗಿರುತ್ತಿದ್ದರು. ಏಕೆಂದರೆ ಪೊಲೀಸರಿಗೂ, ರಾಮಸೇನೆಯವರಿಗೂ ಯಾವ ವ್ಯತ್ಯಾಸವೂ ಇರದು.

- ಮೊಹಮ್ಮದ್ ಇರ್ಷಾದ್, ಮಂಗಳೂರು

ಗೌರಿ ಲಂಕೇಶ್ ತಂಡಕ್ಕೆ ಪ್ರೆಸ್ ಕ್ಲಬ್ ಪ್ರಶಸ್ತಿ ದೊರಕಿದ್ದು ಪತ್ರಿಕೆಯ ನಮ್ಮೆಲ್ಲ ಓದುಗರಿಗೂ ಬಹಳ ಸಂತಸ ತಂದಿದೆ. ಮೇಷ್ಟ್ರು ಪಿ. ಲಂಕೇಶರ ಎಲ್ಲಾ ನಿಷ್ಠುರತೆಗಳನ್ನು ಮೈಗೂಡಿಸಿಕೊಂಡು ಅವರ ಸಿದ್ಧಾಂತಕ್ಕೆ ಬದ್ಧರಾಗಿ ಬೆಳೆಯುತ್ತಿರುವ ಈ ಗಂಡು ಮಗಳು ಮತ್ತು ಆಕೆಯ ತಂಡ ನಿಜಕ್ಕೂ ಲಂಕೇಶರನ್ನು ಸದಾ ಸ್ಮರಿಸುವಂತೆ ಮಾಡುತ್ತಿದ್ದಾರೆ.


ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಕುರಿತಂತೆ ಪ್ರಕಟಗೊಂಡ ಚಿಲ್ಲರೆ ರಾಜಕಾರಣದಿಂದ ಬೀದಿಗೆ ಬೀಳುವ ಬದುಕುಗಳು ಲೇಖನವು ಸತ್ಯವಾಗಿದೆ. ಇಂತಹ ಬೆಳವಣಿಗೆ ಖಂಡಿತ ಬಡವರ್ಗದ ಕಷ್ಟಗಳಿಗೆ ಕೊಡಲಿ ಏಟನ್ನು ನೀಡುತ್ತದೆ. ನಮ್ಮ ದೇಶದಲ್ಲಿ ತಳ್ಳುಗಾಡಿಗಳು, ಕಾಯಿಪಲ್ಯೆ, ಸೊಪ್ಪು ಸದೆ, ಧಾನ್ಯ, ಡಬ್ಬಾ ಅಂಗಡಿ, ಒಪ್ಪರದ ಹೋಟೆಲ್ಲು, ಕಾಕ ಅಂಗಡಿ, ಮಿಠಾಯಿ ಅಂಗಡಿ ಇತ್ಯಾದಿ ಇಟ್ಟುಕೊಂಡಿರುವ ಲಕ್ಷಾಂತರ ಚಿಕ್ಕಪುಟ್ಟ ವ್ಯಾಪಾರಿಗಳು ಅಂದಂದಿನ ಸಂಪಾದನೆಯ ಮೇಲೆ ಬದುಕು ಸಾಗಿಸುತ್ತಿದ್ದಾರೆ. ಅವರೆಲ್ಲ ವಿದೇಶಿ ಬಂಡವಾಳದಿಂದ ತಮ್ಮ ಬದುಕಿನ ಮೂಲವನ್ನೇ ಕಳೆದುಕೊಳ್ಳುವಂತಾಗುತ್ತದೆ.

'ಸೋಲಿಲ್ಲದ ಸರದಾರ' ಸೊರಬದ ಬಂಗಾರಪ್ಪನವರ ಬಗ್ಗೆ ರವೀಂದ್ರ ರೇಶ್ಮೆ, ಬಿ.ಚಂದ್ರೇಗೌಡ ಮತ್ತು ಸರ್ಜಾ ಶಂಕರ್ ಅವರ ಲೇಖನಗಳು ಚೆನ್ನಾಗಿದ್ದವು.

ಹಾಗೆಯೇ ಎಚ್.ಎಲ್.ಕೇಶವಮೂರ್ತಿ ಅವರು ಪೇಜಾವರ-ನಿಡುಮಾಮಿಡಿ ನಡುವಿನ ಚರ್ಚೆಯನ್ನು ಕುರಿತು ಬರೆದ ಹಾಸ್ಯ ಲೇಖನವೂ ಚೆನ್ನಾಗಿತ್ತು.

-ಉತ್ತನೂರು ರಾಜಮ್ಮ ವಿ.ಶೆಟ್ಟಿ, ಚಿಂತಾಮಣಿ


'ಮನುಸ್ಮೃತಿ'ಯ ಛಾಯೆಯುಳ್ಳ ಇಸ್ಕಾನ್‌ನ ಭಗವದ್ಗೀತೆ ನಿಷೇಧಕ್ಕೆ ಯೋಗ್ಯವಾದದ್ದು. ನನ್ನ ಹತ್ತಿರ ಇಸ್ಕಾನ್‌ನ ಕನ್ನಡ ಹಾಗೂ ಇಂಗ್ಲಿಷ್‌ನ ಎರಡೆರಡು ಭಗವದ್ಗೀತೆಯಿದೆ (ಅವರು ಒತ್ತಾಯಪೂರ್ವಕ ಕೊಟ್ಟಿದ್ದು).



ಕುರಾನ್ ಕಳೆದ 1400 ವರ್ಷಗಳಲ್ಲಿ ಜಗತ್ತಿನ ನಾನಾ ಭಾಷೆಗಳಿಗೆ ಅನುವಾದವಾಗಿದ್ದರೂ ಅನುವಾದಕರು ತಮ್ಮ ಸ್ವಂತ ವಿವೇಚನಾ ಸಾಮರ್ಥ್ಯ ಬಳಸಲು ಅನುಮತಿ ಇಲ್ಲದಿರುವುದರಿಂದ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಕುರಾನ್ ತನ್ನ ಮೂಲರೂಪವನ್ನು ಯಥಾವತ್ ಉಳಿಸಿಕೊಂಡು ಬಂದಿದೆ. ಬೈಬಲ್ ಸಹ ಜಗತ್ತಿನ ಎಲ್ಲಾ ಭಾಷೆಗಳಿಗೆ ಅನುವಾದಗೊಂಡಿದ್ದರೂ ಅದರ ಮೂಲ ಸ್ವರೂಪಕ್ಕೆ ಸ್ವಲ್ಪವೂ ಧಕ್ಕೆ ಬಂದಿಲ್ಲ.

ಆದರೆ ಹಿಂದೂ ಧಾರ್ಮಿಕ ಗ್ರಂಥಗಳನ್ನು ಯಾರು ಬೇಕಾದರೂ ತಮಗೆ ಸರಿ ಕಂಡಂತೆ, ತಮ್ಮ ಸೀಮಿತ ವಿವೇಚನಾ ಶಕ್ತಿಗೆ ತಕ್ಕಂತೆ ವಿಶ್ಲೇಷಿಸಿ ಟೀಕೆ-ಟಿಪ್ಪಣಿ ಬರೆಯಲು ನಿರ್ಬಂಧವಿಲ್ಲವಾದ್ದರಿಂದ ಸ್ಥಾಪಿತ ಹಿತಾಸಕ್ತಿಗಳ ಸ್ವಾರ್ಥಕ್ಕೆ ಅನುಗುಣವಾಗಿ ಹಿಂದೂ ಗ್ರಂಥಗಳನ್ನು ತಿರುಚಿ ವಿರೂಪಗೊಳಿಸಿ ತಮ್ಮ-ತಮ್ಮ ಜಾತಿ-ಉಪಜಾತಿ-ಪಂಥಗಳಿಗೆ ಅನುಕೂಲವಾಗುವಂತೆ ಬದಲಾಯಿಸಿ ಕೃತಾರ್ಥರಾಗಿದ್ದಾರೆ. ಇದನ್ನು ವಿರೋಧಿಸಿದವರಿಗೆ ಇಡೀ ಹಿಂದೂ ಧರ್ಮದ ದ್ವೇಷಿಗಳೆಂಬ ಹಣೆಪಟ್ಟಿ ತಗಲುತ್ತದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಕೇವಲ ಹಣವಂತರ ಕ್ಲಬ್ ಆಗಿರುವ ಇಸ್ಕಾನ್ ಹರಡುವ ಮತಾಂಧತೆ ತುಂಬಾ ಆತಂಕಕಾರಿ. 25 ವರ್ಷಗಳಿಂದ ಅಯ್ಯಪ್ಪನ ವ್ರತಾಧಾರಿಯಾಗಿದ್ದವನೊಬ್ಬ ಹರೇಕೃಷ್ಣ ಪಂಥದವರ ಸಹವಾಸ ಮಾಡಿದ ನಂತರ ಶಬರಿಮಲೆ ಯಾವ ದಿಕ್ಕಿನಲ್ಲಿದೆಯೆಂಬುದನ್ನೇ ಮರೆತಿದ್ದಾನೆ. ಒಂದು ಖಾಸಗಿ ಕಂಪೆನಿಯ ನೌಕರನಾಗಿದ್ದ ಬೆಳಗಾವಿಯ ಸಂಪ್ರದಾಯಸ್ಥ ಅಯ್ನೋರು ಲಿಂಗಾಯತನೊಬ್ಬ ತನ್ನ ಮೇಲಧಿಕಾರಿಯ ಪ್ರಭಾವದಿಂದ ಹರೇಕೃಷ್ಣ ಪಂಥ ಸೇರಿದ ಮೇಲೆ ತನ್ನ ಇಷ್ಟ-ಲಿಂಗ ಕಳಚಿಟ್ಟು, ಹಣೆಯಿಂದ ಮೂಗಿನವರೆಗೆ ಪುಂಡ್ರನಾಮ ಹಾಕಿ, ವಿಭೂತಿ ಕಂಡರೆ ಅಲರ್ಜಿಯಂತಾಡುತ್ತಾನೆ. ಭೂತಾರಾಧನೆ-ನಾಗಾರಾಧನೆಯ
ಕರಾವಳಿಯ ತುಳು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದರೂ, ಇಸ್ಕಾನಿಗಳ
ತಮ್ಮ ತುಳು ಭಾಷಿಕ ಸದಸ್ಯರಿಗೆಲ್ಲ ತಮ್ಮದೇ ಕುಟುಂಬದ ಭೂತಾರಾಧ
ನಾಗಾರಾಧನೆಗಳಲ್ಲೂ ಪಾಲ್ಗೊಳ್ಳಬಾರದೆಂದು ನಿಬಂಧನೆ ಹಾಕುತ್ತಾರೆ.

ಒಟ್ಟಿನಲ್ಲಿ ಕೃಷ್ಣನನ್ನು ಬಿಟ್ಟು ಬೇರಾವುದೇ ಹಿಂದೂ ದೇವರನ್
ನಂಬಬಾರದು, ಪೂಜಿಸಬಾರದು, ಆ ದೇವಸ್ಥಾ
ಗಳಿಗೆ ಹೋಗಬಾರದೆಂದು ಇಸ್ಕಾನ್‌ನವರು ಬ್ರೇನ್
ವಾಷ್ ಮಾಡುತ್ತಾರೆಂದರೆ ಅವರ ಮತಾಂಧತೆಯ
ಆಳ ಊಹಿಸಿ. ಆದರೂ ಇವರು ತಾವು ಸಮ
ಹಿಂದೂ ಧರ್ಮದ ರಕ್ಷಕರಂತೆ ಪೋಜ್ ಕೊಟ್ಟು
ತಮ್ಮ ದೇವರ ವ್ಯಾಪಾರ ವಿಸ್ತರಿಸುತ್ತಾರೆ.

- ಪ್ರವೀಣ್ ಎಸ್.ಶೆಟ್ಟಿ, ಮಂಗಳೂ

ಭಗವದ್ಗೀತೆಯನ್ನು ರಷ್ಯಾದಲ್ಲಿ ಮಾತ್ರವಲ್ಲ, ಇಡೀ
ಜಗತ್ತಿನಲ್ಲೇ ಬ್ಯಾನ್ ಮಾಡಬೇಕು. ಇದನ್ನು ಮಾಡು
ತಾಕತ್ತು ಯಾರಿಗಿದೆ?

- ಬಸು ಎಚ್, ಗುಡಗುಂ

ಜನವರಿ 11, 2012ರ ಸಂಚಿಕೆಯಲ್ಲಿ 'ಗುಡ್ ಬೈ ಬಂ' ಎಂಬ
ಲೈನ್ ಅಡಿ ಪ್ರಕಟಗೊಂಡ 'ಕರಾವಳಿಯ ಜಾದೂಗಾರ', 'ದಾರಿ ತಪ್ಪಿದ
ನಾಯಕ', 'ಸೆಟಗೊಂಡ ಯುವಕ ಊರುಬಿಟ್ಟು ನಡೆದ', 'ನಿರರ್ಥ
ಬಂಡಾಯಗಳ ಸಾರ್ಥಕ ಬದುಕು' ಎಂಬ ಲೇಖನಗಳ
ಬಂಗಾರಪ್ಪನವರ ಇಡೀ ವ್ಯಕ್ತಿತ್ವ ಮತ್ತು ರಾಜಕೀಯ ಜೀವನವ
ಸೆರೆಹಿಡಿದಿದ್ದರು. ಬಂಗಾರಪ್ಪನವರು ಎಂದೂ ಜಾತಿ ರಾಜಕಾರ
ಮಾಡದ ಏಕೈಕ ನಾಯಕನೆಂದರೆ ತಪ್ಪಾಗಲಾಗದು. ಅವರು ಎಲ
ಜಾತಿಗಳ ನಾಯಕನಾಗಿ ಜನಬೆಂಬಲದಿಂದ ಗೆದ್ದು ಬಂದರ
ಹೊರತು ಜಾತಿ ಅಥವಾ ಹಣ ಬಲದಿಂದಲ್ಲ.

ಬೇಸರದ ಸಂಗತಿಯೆಂದರೆ ಜಾತ್ಯತೀತ ಸಮಾನತೆ, ವಿ
ಮಾನವ ಆಶಯಗಳನ್ನು ಸಾರಿದ್ದ ಕುವೆಂಪು ಅವರ ನೆಲವನ್
ಕೇಸರೀಕರಣಗೊಳಿಸಿದ್ದು, ಅಲ್ಲಿ ಮತೀಯ ವಾದಿಗಳನ್ನು ಬೆಳೆಸಿದ್
ಇದೇ ಬಂಗಾರಪ್ಪ ಎಂಬುದು. ರಾಜ್ಯದಲ್ಲಿ ಕೋಮುವಾ
ಶಕ್ತಿಗಳಾದ ಆರೆಸ್ಸೆಸ್, ಬಿಜೆಪಿ, ವಿಶ್ವಹಿಂದೂ ಪರಿಷತ್ ಮತ್ತು ರಾಮ ಸೇ
ಬೆಳೆಯಲು ಪರೋಕ್ಷವಾಗಿ ಬಂಗಾರಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ ಎಂಬ
ಪತ್ರಿಕೆಯು ಬರೆದದ್ದು ಸೂಕ್ತ ಹಾಗೂ ಸಮಂಜಸವಾಗಿತ್ತು.

ಬಂಡಾಯದ ಬಂಗಾರಪ್ಪ ತಮ್ಮ ವೈರಿಗಳ ವಿರುದ್ಧ ಅದೆಷ್ಟು ಸಿಟ್ಟನ್
ಬೆಳೆಸಿಕೊಂಡಿದ್ದರು ಎಂಬುದಕ್ಕೆ ಅವರು ತಮ್ಮ ಪುತ್ರ ಕುಮಾರ್ ಬಂಗಾರಪ್ಪನ
ರಾಜಕೀಯದಿಂದ ದೂರ ಮಾಡಲು ಪ್ರಯತ್ನಿಸಿದ್ದು ಒಂದು ಉದಾಹರ
ಯಾವುದೇ ರಾಜಕಾರಣಿ ತನ್ನ ಮಕ್ಕಳನ್ನು ದ್ವೇಷಿಸಿದ ಉದಾಹರಣೆಗಳು ಕಡಿ
ಆದರೆ ಹಠವಾದಿ 'ಬಂ' ತನ್ನ ಮಗನನ್ನು ಮುಗಿಸುವಷ್ಟು ರಾಜಕಾ
ಮಾಡಿದವರು. ಇನ್ನು ಮೇಲಾದರೂ ಬಂಗಾರಪ್ಪನವರ ಪುತ್ರರು ಸಮಾನ ಮ
ನಿಂದ ಒಂದಾಗಿ ಸಕ್ರಿಯ ರಾಜಕಾರಣ ಮಾಡುತ್ತಾ ಜನರ ಆಶೋತ್ತರಗಳ
ಈಡೇರಿಸಲಿ ಎಂಬ ಆಶೆಯನ್ನು ಪತ್ರಿಕೆ ವ್ಯಕ್ತಪಡಿಸಿದೆ. ಇಂತಹ ಆಶ

...ಣಾರೇ ನಿಯಂತ್ರಿಸುತ್ತಿದ್ದಾರೆ ಅನ್ನುವ ಅಪಪ್ರಚಾರ ...ದರಂತೆ. ಅದು ಹಾಗಲ್ಲ, ನಮ್ಮ ಪಕ್ಷ ಈಗಲೂ ...ತ್ಯಜಿಸಿಲ್ಲ ಎಂಬುದನ್ನು ಮನವರಿಕೆ ಮಾಡಬೇಕಿ... ಹಿಂದಿನ ಸಂಗತಿಗಳನ್ನು ಜಯಲಲಿತಾ ನೆನಪಿಸಿ... "ಇಂತಹ ಆಪಾದನೆಗಳು ಬರುತ್ತಿರುವುದು ...ದಲು ಅಲ್ಲ. ಎಂಜಿಆರ್ ಅವರು ನನ್ನನ್ನು ಪ್ರಚಾರ ...ರಾಯಾಗಿ ನೇಮಿಸಿದಾಗಲೂ ಹೀಗೇ ಆಗಿತ್ತು. ಆಗ ...ವು ಹಿರಿಯ ನಾಯಕರು 'ಬ್ರಾಹ್ಮಣಗಿತ್ತಿ'ಯನ್ನು ...ಮುಖ ಸ್ಥಾನಕ್ಕೆ ನೇಮಿಸುವುದು ಅಪಾಯಕಾರಿ ...ದು ಆಕ್ಷೇಪಿಸಿದ್ದರು. ಅದಕ್ಕೆ ಎಂಜಿಆರ್ ಅವರು ...ನನ್ನು ಬ್ರಾಹ್ಮಣತಿ ಎಂದು ತಿಳಿಯಬೇಡಿ. ಆಕೆ ...ಮಾಂಸದ ಅಡುಗೆಯನ್ನೂ ಮಾಡಿಕೊಡುತ್ತಾಳೆ' ಅಂದರಂತೆ!

...ಂತೆಕಂತೆಗಳನ್ನೆಲ್ಲ ನಕ್ಕೀರನ್ ಪತ್ರಿಕೆ ಏನು ...ನದ ಮಾಂಸದ ಅಡುಗೆ ಮಾಡಿಬಡಿಸಿದ ಮೇಲೆ ...ದ ಇರುತ್ತಾರೆಯೇ ಎಂದು 'ಮಾಟ್ಟು ಕರಿ ...ಮಿ ನಾನ್' ಎಂಬ ಶೀರ್ಷಿಕೆಯಲ್ಲಿ ಸಾಂಗವಾಗಿ ...ತು.

...ಲಿತಾ ಹೇಳಿಕೇಳಿ ಅಯ್ಯಂಗಾರ್ ಹೆಣ್ಣುಮಗಳು. ... ಕೋಳಿ ತಿನ್ನುತ್ತಾರೆ ಎಂಬುದೇ ಅವಮಾನ. ...ಮಾಂಸ ತಿನ್ನುತ್ತಾರೆ ಅಂದರೆ.... ದನದ ಮಾಂಸದ ...ಡುವುದಕ್ಕೂ ತಿನ್ನುವುದಕ್ಕೂ ವ್ಯತ್ಯಾಸ ಇಲ್ಲವೆ? ...ಕರ್ತರಿಗೆ ಉರಿ ಹತ್ತಿತು. ಅದೇ ಸಿಟ್ಟಿನಲ್ಲಿ ಪತ್ರಿಕೆ ...ಗ್ಗಿ ಧ್ವಂಸವೀರರಾದರು!

...ಗಬಹುದು ಎಂದು ಊಹಿಸಿದ್ದ ಸಂಪಾದಕರು ... ಪೊಲೀಸ್ ವರಿಷ್ಠರಲ್ಲಿ ಕೋರಿಕೊಂಡಿದ್ದರಂತೆ. ...ಡಲೆ ಕಾರ್ಯಪ್ರವೃತ್ತರಾದರಂತೆ. ಪೊಲೀಸ್ ...ನ್ನು ತಕ್ಷಣ ಕಳುಹಿಸಿದರಂತೆ. ಈ ಎಲ್ಲ ...ಾ ಧ್ವಂಸ ನಡೆಯುವಾಗ ಮೂಕ ...ದ್ದರಂತೆ! ಅಕಸ್ಮಾತ್ ಇದರ ಕೇಸೇನಾದರೂ ಆದರೆ ...ಕ್ಷಿ ಇರಬೇಕಲ್ಲ ಎಂದು ಹೀಗೆ ಮಾಡಿರ...

...ಬರೆದದ್ದು ಕೇವಲ 'ಲಂಕೇಶ್' ಮಾತ್ರ. ... ಪತ್ರಿಕೆ ಜನರ ನಾಡಿ ಮಿಡಿತದ ಪತ್ರಿಕೆ ...ು.

- ಡಿ.ಎಲ್.ನಾಗರಾಜ್, ಚೆನ್ನಗಿರಿ

...ಶಂಕರ್ ಹರಳೀಮಠ ಅವರು ಬರೆದಿದ್ದ ...ಯುವಕ..' ಶೀರ್ಷಿಕೆಯೇ ಬಂಗಾರಪ್ಪನವರ ...ು. ಬರಹ ಬಹಳ ಸರಳ, ಪ್ರಾಮಾಣಿಕ ಮತ್ತು ...ೋಟಗಳದ್ದು.

...ಟುಲ್ಲಿ ಲಂಕೇಶರ ಜಪ ನಡೆದರೆ ನಮ್ಮ ಅಡ್ಡಿ...

- ...ಡಿ.ಕುಮಾರ್ ಮತ್ತು ಎಸ್.ಡಿ. ಶರ್ಮ

...ಸ್ ಕಪಟತನದ ಲೇಖನ ಚೆನ್ನಾಗಿತ್ತು. ...ಶ್ರೀಗೌಡರ 'ಬಯಲು ಸೀಮೆ ಕಟ್ಟೆ ಪುರಾಣ' ...ು ವಾರಗಳಿಂದ ಪ್ರಕಟಗೊಂಡಿಲ್ಲ?

-- ಓದುಗ, ಎಸ್ ಎಂ ಎಸ್ ಮೂಲಕ

...ಶ್ರೀಗೌಡರ ಜನಪ್ರಿಯ ಅಂಕಣ ...ಸೀಮೆಯ ಕಟ್ಟೆ ಪುರಾಣ' ಇಲ್ಲದ 'ಲಂಕೇಶ್' ...

...ಕಾಶ್ ಕುಮಾರ್ ಹೆರೂರು, ಉಡುಪಿ

...ನಕ್ಕಿಂತ ಧರ್ಮ ಮುಖ್ಯ ಎಂದು ಪೇಜಾವರ ...ದ್ದಾರೆ. ಅವರಿಗೆಲ್ಲೋ ಹುಚ್ಚು ಹಿಡಿದಿದೆ. ... ಅವರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ.

... ರಘೋತ್ತಮ ಹೊ.ಬ, ಬೆಂಗಳೂರು

...ಹೇಂದರ್ ಅವರನ್ನು ಸಿಕ್ಕಾಪಟ್ಟೆ ತೆಗಳಿದ್ದೀರಿ ...ೋತ್ತಮ ಹೊ.ಬ ಅವರು ಬಹಳ ಬೇಸರ ...ದ್ದಾರೆ. ತಪ್ಪು ಮಾಡಿದ್ದರೂ ದಲಿತ ಎಂಬ ...ಸಬೇಕೆ. ರಘೋತ್ತಮ ತರಹದ ಹಿರಿಯರು ...ಾಜಕಾರಣ ಮಾಡಬಾರದು. ಮಹೇಂದರ್ ...ಎಂದುಕೊಂಡು ತಪ್ಪು ಮಾಡಿಲ್ಲ ಅನ್ನಿಸುತ್ತೆ.

- ...ತೋಷ್ ಗುಡ್ಡಿಯಂಗಡಿ, ಕುಂದಾಪುರ

...ಜಾರೆ ಅವರ ಹೋರಾಟವನ್ನು ಬೆಂಬಲಿಸದ ...ಶ್ ಬೋಸ್ ಅವರ ಅನಿಸಿಕೆ ತುಂಬಾ ...ಿ.

- ಸುರೇಶ್ ಅರಸ್, ಶಿವಮೊಗ್ಗ

...ತ್ರ ಮತ್ತು ಈ-ಮೇಲ್
...ೊತೆಗೆ ಇನ್ನು ಮುಂದೆ
...ಮ್ಮ ಪ್ರತಿಕ್ರಿಯೆಗಳನ್ನು
9980331427
...ಂಬರ್‌ಗೂ ಚಿಕ್ಕದಾಗಿ
... ಮತ್ತು ಚೊಕ್ಕದಾಗಿ
... ಕಳುಹಿಸಬಹುದು.

ಕಿಚ್ಚನ ತಂಡ: ಶಿವಣ್ಣ ಔಟ್ ದರ್ಶನ್ ಇನ್

ಕ್ರಿಕೆಟ್ ಆಟದಿಂದ ಕೆಲವೊಮ್ಮೆ ಭಾರತ ಮತ್ತು ಪಾಕಿಸ್ತಾನ ನಡುವಿನ ಬಾಂಧವ್ಯ ವೃದ್ಧಿಯಾಗಿದೆ, ಕೆಲವೊಮ್ಮೆ ಎರಡೂ ದೇಶಗಳ ನಡುವಿನ ವೈರತ್ವ ಬಿಗಡಾಯಿಸಿದೆ. ಆದರೆ ಈಗ ಇದೇ ಕ್ರಿಕೆಟ್ ಆಟದಿಂದಾಗಿ ಕನ್ನಡ ಚಿತ್ರರಂಗದಲ್ಲಿ ಸ್ನೇಹದ ಬದಲು ವೈರತ್ವದ ವಾತಾವರಣ ಸೃಷ್ಟಿಯಾಗಿದೆ.

ಎರಡು ತಿಂಗಳ ಹಿಂದೆ ಹುಬ್ಬಳ್ಳಿಯಲ್ಲಿ ಡಾ. ರಾಜ್ ಕಪ್ ಕ್ರಿಕೆಟ್ ಸ್ಪರ್ಧೆ ನಡೆದಾಗ ಕಿಚ್ಚ ಸುದೀಪ್ ಮತ್ತು ಸೆಂಚುರಿ ಹೀರೋ ಶಿವರಾಜ್‌ಕುಮಾರ್ ತಂಡಗಳ ನಡುವೆ ಒಂದಿಷ್ಟು ಗಲಾಟೆಯಾಗಿ ಉದ್ವಿಗ್ನದ ವಾತಾವರಣ ಸೃಷ್ಟಿಯಾಗಿದ್ದು ಈಗ ಹಳೇ ವಿಷಯ. ಅಂದು ಸುದೀಪ್ ತಂಡ ಕೊನೆಗೆ ಶಿವಣ್ಣನ ತಂಡದ ಎದುರು ಸೋತಾಗ ಶಿವಣ್ಣನ ಅಭಿಮಾನಿಗಳು ಭಾರೀ ವಿಜಯೋತ್ಸವ ಆಚರಿಸಿದ್ದರು. ಆ ಸಣ್ಣ ವೈಷಮ್ಯವನ್ನು ಶಿವಣ್ಣನ ಸಹೋದರ ರಾಘವೇಂದ್ರ ರಾಜ್‌ಕುಮಾರ್ ಅಲ್ಲೇ ಸರಿಪಡಿಸಿದರೂ ಕೂಡ ಎರಡೂ ಬಣದ ನಡುವೆ ಒಳಗೊಳಗೆ ಆಕ್ರೋಶ ಕುದಿಯುತ್ತಲೇ ಇತ್ತು.

ಈಗ ಆ ಆಕ್ರೋಶ ಮತ್ತು ಅಸಮಾಧಾನ ಇನ್ನೊಂದು ರೀತಿಯಲ್ಲಿ ಹೊರಹೊಮ್ಮಿದೆ. ಅದೇನೆಂದರೆ ಪ್ರತಿಷ್ಠೆಯ ಸಿ.ಸಿ.ಎಲ್. ಕ್ರಿಕೆಟ್ ಟೂರ್ನಮೆಂಟ್‌ಗೆ ಈ ಬಾರಿ ಸುದೀಪ್ ತನ್ನ ತಂಡವನ್ನು ಪ್ರಕಟಿಸಿದ್ದು, ಅದರಲ್ಲಿ ಶಿವಣ್ಣನಿಗೆ ಸ್ಥಾನವಿಲ್ಲ. ಇದಕ್ಕಿಂತಲೂ ಅಚ್ಚರಿಯ ವಿಷಯವೆಂದರೆ ಶಿವಣ್ಣನ ಬದಲಿಗೆ ತನ್ನ ಆಜನ್ಮವೈರಿಯಂತಿದ್ದ ದರ್ಶನ್‌ರನ್ನು ಸುದೀಪ್ ತನ್ನ ತಂಡಕ್ಕೆ ಸೇರಿಸಿಕೊಂಡಿರುವುದು. ಅಂದರೆ 'ಶತ್ರುವಿನ ಶತ್ರು ನನ್ನ ಮಿತ್ರ' ಎಂಬ ಹಳೆಯ ಮಾತಿನಂತಿದೆ ಸುದೀಪ್ 'ಆಟದ ವೈಖರಿ'.



ಇಡೀ ಗಾಂಧಿನಗರ ಈಗ ಈ ಕ್ರಿಕೆಟ್ ವಿರುದ್ಧ ಶಾಪ ಹಾಕುತ್ತಿದ್ದಾರೆ. "ಈ ಕ್ರಿಕೆಟ್ ಆಟದಿಂದಾಗಿ ನಮ್ಮ ಪ್ರೇಕ್ಷಕರು ಸಿನಿಮಾ ಥಿಯೇಟರ್‌ಗೆ ಬರುವುದನ್ನೇ ಬಿಟ್ಟಿದ್ದಾರೆ. ಈಗ ಈ ಹಾಳು ಆಟದಿಂದಾಗಿ ಕನ್ನಡ ಚಿತ್ರರಂಗದಲ್ಲಿದ್ದ ಒಗ್ಗಟ್ಟು ಮತ್ತು ಸ್ನೇಹಪೂರ್ಣ ವಾತಾವರಣ ಹಾಳಾಗಿದೆ" ಎಂದು ಕಿಡಿಕಾರುತ್ತಿದ್ದಾರೆ.

ಒಂದು ಮಾತಂತೂ ನಿಜ. ಇಡೀ ಗಾಂಧಿನಗರವೇ ಅಚ್ಚರಿಪಡುವಂತೆ ಸುದೀಪ್ ಮತ್ತು ದರ್ಶನ್ ಹೆಗಲ ಮೇಲೆ ಕೈಹಾಕಿಕೊಂಡು ದೋಸ್ತಿಗಳಂತೆ ಓಡಾಡುತ್ತಿದ್ದಾರೆ. ಒಂದು ಕಾಲದಲ್ಲಿ ಇವರಿಬ್ಬರನ್ನು ಒಟ್ಟು ಸೇರಿಸಲು ಅದೆಷ್ಟೋ ನಿರ್ಮಾಪಕರು ಮತ್ತು ನಾಯಕನಟರು ಪ್ರಯತ್ನಿಸಿ ಕೈಚೆಲ್ಲಿದ್ದರು. ಆಗ ಏನೇ ಆದರೂ ಇವರಿಬ್ಬರೂ ಉತ್ತರ-ದಕ್ಷಿಣ ಧ್ರುವಗಳಂತೆ ವಿರುದ್ಧ ದಿಕ್ಕಿನಲ್ಲಿ ಇರುತ್ತಾರೆ ಎಂದೇ ಎಲ್ಲರೂ ತೀರ್ಮಾನಿಸಿದ್ದರು. ಆದರೆ ಈಗ ಪರಿಸ್ಥಿತಿ ಸಂಪೂರ್ಣವಾಗಿ ತಿರುವುಮುರುವಾಗಿದೆ.

ಇತ್ತೀಚೆಗೆ ದರ್ಶನ್ ನಟಿಸಿದ 'ಚಿಂಗಾರಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದು ಸುದೀಪ್. ಅವತ್ತು ದರ್ಶನ್ ಮತ್ತು ಆತನ ಸಹೋದರ ದಿನಕರ್ ತೂಗುದೀಪ್ ಇಬ್ಬರನ್ನು ಸುದೀಪ್ ಗಂಟೆಗಟ್ಟಲೆ ಹೊಗಳಿದ್ದೇ ಹೊಗಳಿದ್ದು. ಸುದೀಪ್ ಈ ರೀತಿ ಭಾಷಣ ಮಾಡುವಾಗ ಈ ಸಹೋದರರಿಬ್ಬರೂ ಕೈಕಟ್ಟಿ ನಿಂತುಕೊಂಡೇ ಆತನಿಗೆ ಗೌರವ ಸೂಚಿಸಿದ್ದನ್ನು ನೋಡಿ ನೆರೆದಿದ್ದವರೆಲ್ಲ ಆಶ್ಚರ್ಯಪಟ್ಟಿದ್ದರು. ಅಷ್ಟೇ ಯಾಕೆ? 'ಚಿಂಗಾರಿ' ಚಿತ್ರದ ಇಡೀ ಕರ್ನಾಟಕದ ವಿತರಣೆಯನ್ನು ಸುದೀಪ್ ತನ್ನ ಗೆಳೆಯನೊಬ್ಬನಿಗೆ ಕೊಡಿಸಿ ದರ್ಶನ್‌ಗೆ ಸಹಾಯ ಮಾಡಿದ್ದರು ಕೂಡ.

ಕೆಲ ವರ್ಷಗಳ ಹಿಂದೆ ಇದೇ ಸುದೀಪ್-ದರ್ಶನ್ ಜೋಡಿ ಬೇರೆ ರೀತಿಯಲ್ಲಿ ವರ್ತಿಸುತ್ತಿತ್ತು. ಉದಾಹರಣೆಗೆ ಅತ್ತ ಸುದೀಪ್ ಚಿತ್ರ ಬಿಡುಗಡೆಯಾದಾಗ ಅದು ಫ್ಲಾಪ್ ಆಗಲಿ ಎಂದು ದರ್ಶನ್ ಸಂಗಡಿಗರು ಹಾರೈಸುತ್ತಿದ್ದರೆ, ಇತ್ತ ದರ್ಶನ್ ಚಿತ್ರ ಬಿಡುಗಡೆಯಾದಾಗ ಅದು ಮುಗ್ಗರಿಸಲಿ ಎಂದು ಸುದೀಪ್ ಬಳಗ ಆಶಿಸುತ್ತಿತ್ತು. ಆದರೆ ಈಗ ಸುದೀಪ್ ಗೆಲ್ಲಲೇಬೇಕೆಂದು ದರ್ಶನ್ ಎಲ್ಲರ ಬಳಿ ಹೇಳುತ್ತಿದ್ದಾರೆ. ಹಾಗೆಯೇ ದರ್ಶನ್ ಚಿತ್ರಗಳು ಬಾಕ್ಸ್ ಆಫೀಸನ್ನು ಚಿಂದಿ ಮಾಡಬೇಕು ಎಂದು ಸುದೀಪ್ ಮನದುಂಬಿ ಹಾರೈಸುತ್ತಿದ್ದಾರೆ.

ಈ ಆಶ್ಚರ್ಯದಾಯಕ ಬೆಳವಣಿಗೆ ನೋಡಿ ನಿರ್ಮಾಪಕರು ಮತ್ತು ನಿರ್ದೇಶಕರು ದಂಗಾಗಿಹೋಗಿದ್ದಾರೆ. ಏಕೆಂದರೆ ಕನ್ನಡ ಚಿತ್ರರಂಗದಲ್ಲಿ ಹಿಂದೆಂದೂ ನಡೆಯದಂತಹ ತಾರಾಸಮರಕ್ಕೆ ಈ ಬೆಳವಣಿಗೆಗಳು ಖಂಡಿತ ಒಂದು ಮುನ್ನುಡಿ ಎಂಬುದು ಉದ್ಯಮದವರಿಗೆ ಸ್ಪಷ್ಟವಾಗಿದೆ. ಇದರರ್ಥ ಇಷ್ಟೆ. ಈತನಕ ಸಣ್ಣಪುಟ್ಟ ನಾಯಕ ನಟರನ್ನು ಕಟ್ಟಿಕೊಂಡು ಒಂದು ತಂಡವನ್ನು ನಿರ್ಮಿಸಿದ್ದ ಸುದೀಪ್‌ಗೆ ಈಗ ತನ್ನಷ್ಟೇ ಪವರ್‌ಫುಲ್ ನಾಯಕ ದರ್ಶನ್ ಜೊತೆ ಸೇರಿದ್ದು ಆತನ ಬಲವನ್ನು ಇನ್ನಷ್ಟು ಹಿಗ್ಗಿಸಿದೆ. ಇದು ಬರೀ ಕ್ರಿಕೆಟ್ ಆಟಕ್ಕೆ ಸಂಬಂಧಪಟ್ಟ ವಿಷಯವಲ್ಲ, ಈ ಒಂದು ಹೊಂದಾಣಿಕೆ ಇಡೀ ಗಾಂಧಿನಗರದ ಆರ್ಥಿಕತೆಯ ಮೇಲೆ ಪರಿಣಾಮ ಬೀರುವುದು ಶತಸಿದ್ಧ.

ಗಾಂಧಿನಗರದಲ್ಲಿ ಸದ್ಯಕ್ಕೆ ಅತ್ಯಂತ ಹೆಚ್ಚು ಸಂಭಾವನೆ ಪಡೆಯುತ್ತಿರುವುದು ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್. ಅಷ್ಟೇ ಅಲ್ಲ, ಬಾಕ್ಸ್ ಆಫೀಸ್ ಗಳಿಕೆಯ ದೃಷ್ಟಿಯಿಂದ ನೋಡಿದರೂ ಇಂದಿಗೂ ಪುನೀತ್‌ಗಿರುವ ಜನಾಕರ್ಷಣೆ ಅಥವಾ ಪ್ರೇಕ್ಷಕರ ಬೆಂಬಲ ಬೇರೆ ನಾಯಕ ನಟರಿಗೆ ದೊರಕಿಲ್ಲ. ಆದರೆ ೨೦೧೧ರ ಕೊನೆಯಲ್ಲಿ ದರ್ಶನ್ ನಟಿಸಿದ 'ಸಾರಥಿ' ಚಿತ್ರದ ಅಭೂತಪೂರ್ವ ಯಶಸ್ಸು ಈತ ಮುಂಬರುವ ದಿನಗಳಲ್ಲಿ ಇನ್ನಷ್ಟು ದೊಡ್ಡ ಬಾಕ್ಸ್ ಆಫೀಸ್ ಡಾರ್ಲಿಂಗ್ ಎಂದೆನಿಸಿಕೊಳ್ಳಬಹುದು ಎಂಬುದೇ ಬಾಜೀದಾರರ ಲೆಕ್ಕಾಚಾರ. ಇದಕ್ಕೆ ಪೂರಕವೆಂಬಂತೆ ಅದೇ 2011ರ ಕೊನೆಯಲ್ಲಿ ಸುದೀಪ್ ನಟಿಸಿದ 'ವಿಷ್ಣುವರ್ಧನ' ಚಿತ್ರ ಕೂಡ ಬಾಕ್ಸ್ ಆಫೀಸ್‌ನಲ್ಲಿ ಗೆದ್ದು ಎಲ್ಲ ಕಡೆ ನಿರ್ಮಾಪಕರಿಗೆ ಹಣದ ಥೈಲಿಯನ್ನು ತಂದುಕೊಟ್ಟಿದೆ. ಹೀಗೆ ಈ ಎರಡು ಗೆಲುವುಗಳು ಈ ಇಬ್ಬರು ನಾಯಕನಟರ ತಾರಾಮೌಲ್ಯವನ್ನು ಹೆಚ್ಚಿಸಿದೆ ಮಾತ್ರವಲ್ಲ, ಒಂದು ರೀತಿಯ ಹೊಸ ವರ್ಚಸ್ಸನ್ನು ತಂದುಕೊಟ್ಟಿದೆ.

ಆದರೆ ಅದೇ 2011ರಲ್ಲಿ ಪುನೀತ್ ರಾಜ್‌ಕುಮಾರ್ ಮತ್ತು ಯೋಗರಾಜ್ ಭಟ್ ಜೋಡಿಯ 'ಪರಮಾತ್ಮ' ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ದಾಖಲೆಗಳ ಸುರಿಮಳೆಯನ್ನು ಸುರಿಸಬಹುದೆಂದು ಎಲ್ಲರೂ ಲೆಕ್ಕ ಹಾಕಿದ್ದರು. ಆದರೆ ಆ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸನ್ನು ಕಾಣಲಿಲ್ಲ.

ಒಂದೆಡೆ 'ಪರಮಾತ್ಮ'ನ ಸಾಧಾರಣ ಗಳಿಕೆ, ಮತ್ತೊಂದು ಕಡೆ ಸುದೀಪ್ ಮತ್ತು ದರ್ಶನ್ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿರುವುದು ಗಾಂಧಿನಗರದ ಮಟ್ಟಿಗೆ ಒಂದು ಹೊಸ ಸಮೀಕರಣವನ್ನು ಹುಟ್ಟುಹಾಕಿದೆ. ಇದರ ಫಲವಾಗಿಯೇ ದರ್ಶನ್ ಮತ್ತು ಸುದೀಪ್ ಜೊತೆಯಾಗಿದ್ದಾರೆ ಎಂಬುದು ಹಲವು ಗಾಂಧಿನಗರಿಗಳ ವಾದ.

ಆದರೆ ಪುನೀತ್ ಬೆಂಬಲಿಗರ ಪ್ರಕಾರ ಈ ಹಿಂದೆ 'ಜಾಕಿ' ಚಿತ್ರದಲ್ಲಿ ಹೇಗೆ ಅಪ್ಪು ಮತ್ತು ಸೂರಿ ಜೋಡಿ ಬಾಕ್ಸ್ ಆಫೀಸನ್ನು ಚಿಂದಿ ಮಾಡಿತ್ತೋ ಅದೇ ರೀತಿ 'ಅಣ್ಣಾ ಬಾಂಡ್' ಚಿತ್ರದ ಮೂಲಕ ಅದೇ ಅಪ್ಪು-ಸೂರಿ ಜೋಡಿ ಮತ್ತೊಮ್ಮೆ ಪ್ರೇಕ್ಷಕರನ್ನು ಮೋಡಿ ಮಾಡುತ್ತದೆ.

ಎಲ್ಲರ ತರ್ಕಗಳು ಏನೇ ಇದ್ದರೂ ಒಂದು ಮಾತಂತೂ ನಿಜ. ಅದೇನೆಂದರೆ ಉದ್ಯಮದಲ್ಲಿ ಈಗ ಪುನೀತ್, ಯೋಗರಾಜ್ ಭಟ್ ಮತ್ತು ಸೂರಿ ಒಂದು ಕಡೆಯಾದರೆ, ಮತ್ತೊಂದು ಕಡೆ ಸುದೀಪ್, ದರ್ಶನ್ ಮತ್ತು ಇನ್ನಿತರ ನಿರ್ದೇಶಕರು ಗಟ್ಟಿಯಾಗಿ ನಿಂತಿದ್ದಾರೆ. ಇದೆಲ್ಲವೂ ನಿಜವಾಗಿಯೂ ಒಂದು ಆರೋಗ್ಯಪೂರ್ಣ ಪೈಪೋಟಿಯಾದರೆ ಕನ್ನಡ ಚಿತ್ರರಂಗಕ್ಕೆ ಒಳ್ಳೆಯದು. ಆದರೆ ಹಾಗಾಗದೆ ಎರಡೂ ಬಣಗಳು ವೈಯಕ್ತಿಕ ದೋಷಾರೋಪಣೆ ಮಾಡಿದರೆ ಕನ್ನಡ ಚಿತ್ರರಂಗ ಮತ್ತಷ್ಟು ಕೆಡುತ್ತದೆ.

ಹತ್ತಿ ಹರಿದ್ರೆ...

'ಗಾಂಧಿ'ನಗರವೇ ಹಾಗೆ!

ನಮ್ಮ ಗಾಂಧಿನಗರದಲ್ಲಿ 'ಹೆಸರು ಹೆಗಡೆಗಾದರೆ ಮೊಸರು-ಮಜ್ಜಿಗೆ ನಾಯಕರಿಗೆ' ಎಂಬ ಗಾದೆ ಮಾತು ಆಗೊಮ್ಮೆ ಈಗೊಮ್ಮೆ ಅಪ್‌ಡೇಟ್ ಆಗುತ್ತಿರುತ್ತದೆ. ಯಾರದ್ದೋ ಹೆಸರಲ್ಲಿ ಯಲ್ಲಮ್ಮನ ಜಾತ್ರೆ ಮಾಡುವ ಮಂದಿ ಮೂಲೆಮೂಲೆಗೂ ಸಿಗುತ್ತಾರೆ!


ಅದಕ್ಕೆ ಒನ್ ಆಫ್ ದಿ ಉದಾಹರಣೆ ದಿನೇಶ್ ಗಾಂಧಿ. ಅಲ್ಲಿ ಇಲ್ಲಿ ಬಡ್ಡಿಗೆ ದುಡ್ಡು ತಂದು, ಸುದೀಪ್ ಅಂಥವರನ್ನೇ ಯಾಮಾರಿಸಿ ರೈಲು ಹತ್ತಿಸಿದ್ದ ಈ ವ್ಯಕ್ತಿ ಈಗ ಕ್ಯಾಮೆರಾ ಹಿಡಿದು ನಿಂತಿದ್ದಾನೆ. "ನಾನೇ ನಿರ್ದೇಶನ ಮಾಡುತ್ತೇನೆ, ರಾಮ್ ಗೋಪಾಲ್ ವರ್ಮಾ ಲೆವೆಲ್ಲಿಗೇ ಶಾಟ್ಸ್ ತೆಗೆಯುತ್ತೇನೆ" ಎಂದು ಈತ ಬೆನ್ನು ಕುಣಿಸುತ್ತಿದ್ದಾನೆ. 'ಛತ್ರಪತಿ' ಎಂಬ ತೆಲುಗು ಸಿನಿಮಾವನ್ನು ತಂದು ಅದನ್ನು ಈಗ ಕನ್ನಡಕ್ಕೆ ಅವತರಿಸಲು ಮುಂದಾಗಿದ್ದಾನೆ!

ಈ ದಿನೇಶ್ ಗಾಂಧಿ 'ಛತ್ರಪತಿ' ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಮೊದಲ ದೃಶ್ಯಕ್ಕೆ ಚಾಲನೆ ನೀಡಿದ ಸನ್ನಿವೇಶ ಹೇಗಿತ್ತು ಎಂದು ಕೇಳಿದರೆ ನೀವು ಬಿದ್ದೂಬಿದ್ದು ನಗುತ್ತೀರಿ...



'ಛತ್ರಪತಿ' ಪಾತ್ರದಲ್ಲಿ ಸಿದ್ಧಾಂತ್ ನಟಿಸುತ್ತಿದ್ದಾನೆ. ಅಂದಹಾಗೆ ಈತನ ದುಡ್ಡಲ್ಲೇ ದಿನೇಶ್ ಗಾಂಧಿ ಯಲ್ಲಮ್ಮನ ಜಾತ್ರೆ ಶುರು ಮಾಡಿರುವುದು. ಅದೇ ಸಿದ್ಧಾಂತ್‌ಗೆ ತಾಯಿಯಾಗಿ ಬಹುಭಾಷಾ ತಾರೆ ಭಾನುಪ್ರಿಯಾ ನಟಿಸುತ್ತಿದ್ದಾರೆ.

ಮುಹೂರ್ತದ ದಿನ ಏನಾಯಿತೆಂದರೆ... ದಿನೇಶ್ ಗಾಂಧಿ ಮಾನೀಟರ್ ಎದುರಿಗೆ ಕೂತಿದ್ದಾನೆ. ಭಾನುಪ್ರಿಯಾ ಮೇಕಪ್ ಹಾಕಿ ಕ್ಯಾಮೆರಾ ಮುಂದೆ ನಿಂತಿದ್ದಾರೆ. ನಿರ್ದೇಶಕ ದಿನೇಶ್ ಗಾಂಧಿ ಕೈಯಲ್ಲಿ ಮೈಕ್ ಹಿಡಿದುಕೊಂಡು ಸಖತ್ ದೃಶ್ಯ ತೆಗೆಯಲು ಸಜ್ಜಾಗಿದ್ದಾನೆ.



ಆಗ ಗಾಂಧಿ ಒಮ್ಮೆಗೇ "ಎಲ್ಲರೂ ರೆಡೀನಾ? ಸೈಲೆನ್ಸ್, ಲೈಟ್ಸ್, ಕ್ಯಾಮೆರಾ, ಆಕ್ಷನ್" ಎಂದು ಒಂದೇ ಉಸಿರಲ್ಲಿ ಕೂಗಿಬಿಟ್ಟಿದ್ದಾನೆ.

ಈತ ಏನೋ ಜಾದು ಮಾಡುತ್ತಾನೆಂದು ನಿರೀಕ್ಷಿಸಿದ್ದ ಜನರಿಗೆ ಶಾಕ್ ಆಗಿದೆ. ಯಾಕೆಂದರೆ ಯಾವುದೇ ದೃಶ್ಯವನ್ನು ತೆಗೆಯುವ ಮುನ್ನ ಯಾವ ನಿರ್ದೇಶಕನೂ ಒಮ್ಮೆಗೆ "ಲೈಟ್ಸ್, ಕ್ಯಾಮೆರಾ, ಆಕ್ಷನ್" ಎಂದು ಒಂದೇ ಏಟಿಗೆ ಹೇಳುವುದಿಲ್ಲ, ಬದಲಾಗಿ ಲೈಟ್ಸ್ ಎಂದಾಗ ಲೈಟ್ಸ್ ಆನ್ ಆಗಬೇಕು. ಕ್ಯಾಮೆರಾ ಎಂದಾಗ ಕ್ಯಾಮೆರಾಮನ್ ಕೈತೋರಿಸಿ, ಓಕೆ ಎನ್ನಬೇಕು. ಆದಾದಮೇಲೆ ನಿರ್ದೇಶಕ ಆಕ್ಷನ್ ಅನ್ನಬೇಕು. ಆದರೆ ಗಾಂಧಿ ಈ ಮೂರನ್ನೂ ಒಟ್ಟಿಗೇ ಹೇಳಿ ಎರಡೂ ಕೈ ಎತ್ತಿಬಿಟ್ಟಿದ್ದಾನೆ. ಆ ಮೂಲಕ ನಗೆಪಾಟಲಿಗೆ ಗುರಿಯಾಗಿದ್ದಾನೆ!

ಅಷ್ಟೇ ಆಗಿದ್ದರೆ ಪರವಾಗಿಲ್ಲ ಎನ್ನಬಹುದಿತ್ತು, ಅಷ್ಟು ಹೇಳಿ ಒಂದು ಶಾಟ್ ತೆಗೆದಾದ ತಕ್ಷಣ ಅಲ್ಲೆಲ್ಲೋ ದೂರದಲ್ಲಿ ನಿಂತು ಗುಟಕಾ ಮೇಯುತ್ತಿದ್ದ 'ಹಲೋ ಯಮ' ಚಿತ್ರದ ನಿರ್ದೇಶಕ ಎ. ಆರ್. ಬಾಬು ಅವರು ಸೆಟ್ಟಿಗೆ ಬಂದು "ಓಕೆ ಗಾಂಧಿ, ಫಸ್ಟ್ ಸೀನ್ ತೆಗಿಯೋಣ್ವಾ?" ಎಂದು ಭಾನುಪ್ರಿಯಾ ಮುಂದೇ ಗಾಂಧಿಗೆ ಕೇಳಿದ್ದಾರೆ!

ಅದನ್ನೂ ಕೇಳಿ ಭಾನುಪ್ರಿಯಾಗೆ ಡಬಲ್ ಶಾಕ್. ಅವರು ಬಾಬು ಅವರನ್ನು ಕರೆದು "ಅಲ್ಲಾ ಸ್ವಾಮಿ, ಇಷ್ಟು ಹೊತ್ತು ಶಾಟ್ ತೆಗೆದಿದ್ದು ಅವ್ರು. ನೀವು ನೋಡಿದರೆ ಈಗ ಬಂದು ಫಸ್ಟ್ ಸೀನ್ ತೆಗಿಯೋಣ್ವಾ ಎಂದು ಕೇಳುತ್ತಿದ್ದೀರಿ. ಈ ಸಿನಿಮಾಗೆ ಡೈರೆಕ್ಟ್ರು ನೀವ್ವೋ? ಅವ್ರೋ?" ಎಂದು ಕೇಳಿದ್ದಾರೆ!

ಅದಕ್ಕೆ ಎ.ಆರ್.ಬಾಬು ಏನೆಂದಿರಬೇಕು ಹೇಳಿ?

"ಭಾನುಪ್ರಿಯಾ ಮೇಡಮ್, ಯೂ ಡೋಂಟ್ ವರಿ. ಈ ಫಿಲಂಗೆ ನಾನು ಟೆಕ್ನಿಕಲ್ ಡೈರೆಕ್ಟರ್, ದಿನೇಶ್ ಗಾಂಧಿ ಫುಲ್ ಟೈಮ್ ಡೈರೆಕ್ಟರ್!"

ಬಟ್ಟೆ ಬಿಚ್ಚಿ ನಿಂತಳು ಬಾಬು ಮಗಳು!



ಕನ್ನಡಕ್ಕೆ ಹತ್ತಾರು ಹಿಟ್ ಚಿತ್ರಗಳನ್ನು ನೀಡಿರುವ, ವಿಭಿನ್ನ ಪ್ರಯೋಗಗಳನ್ನು ಮಾಡಿರುವ, ಈಗ ಹಿರಿಯ ನಿರ್ದೇಶಕ ಎನಿಸಿಕೊಂಡಿರುವ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರ ಮಗಳು ರಿಷಿಕಾ ಸಿಂಗ್ ಈಗ 'ನಗ್ನ'ಳಾಗಿ ಸುದ್ದಿ ಮಾಡಿದ್ದಾಳೆ.

ವಾಸ್ತವವಾಗಿ ರಿಷಿಕಾ ಈ ಫೋಟೋದಲ್ಲಿ ನಗ್ನಳಾಗಿಲ್ಲ. ಬದಲಾಗಿ ದೇಹವನ್ನು ರಬ್ಬರ್‌ನಂತೆ ಅಪ್ಪಿಕೊಳ್ಳುವ ಬಾಡಿ ಸೂಟ್ ಧರಿಸಿ, ಅದರ ಮೇಲೆ ಭೂಮಿ ಬಿರುಕು ಬಿಟ್ಟಿರುವಂತಹ ಒಂದಿಷ್ಟು ಗ್ರಾಫಿಕ್ಸ್ ಮಾಡಿಸಲಾಗಿದೆ. ಆ ಫೋಟೋವನ್ನೇ ಮೊನ್ನೆ ಪತ್ರಿಕೆಗಳಲ್ಲಿ 'ಯಾರಾದ್ರೆ ನನಗೇನು?' ಎಂಬ ಹೊಸ ಚಿತ್ರದ ಜಾಹೀರಾತಾಗಿ ನೀಡಲಾಗಿತ್ತು.



ಮೇಲುನೋಟಕ್ಕೇ ಇದೊಂದು ಪಬ್ಲಿಸಿಟಿ ಸ್ಟಂಟ್ ಎಂಬುದು ಗೊತ್ತಾಗುತ್ತದೆ. ಹಾಗೊಮ್ಮೆ ಇಂತಹ ಫೋಟೊ ನೋಡಿಯೂ ಯಾರೂ ಪ್ರತಿಭಟಿಸದಿದ್ದರೆ ಪಬ್ಲಿಸಿಟಿ ಹೇಗೆ ಸಿಗುತ್ತದೆ ಎಂದು ಯೋಚಿಸಿದ ಆ ಸಿನಿಮಾದ ತಂಡ ಚಿತ್ರದ ಮುಹೂರ್ತದ ದಿನವೇ ಅದ್ಯಾವುದೋ ಬೋರ್ಡಿಗಿಲ್ಲದ ಮಹಿಳಾ ಸಂಘಟನೆಯು ಕಂಠೀರವ ಸ್ಟುಡಿಯೋದ ಮುಂದೆ ಪ್ರತಿಭಟನೆ ಮಾಡುವಂತೆಯೂ ನೋಡಿಕೊಂಡಿದ್ದಾರೆ. ಹೇಗಿದ್ದರೂ ಈಗ ಮಾಧ್ಯಮಗಳಿಗೆ 24 ಗಂಟೆಗಳ ಹಸಿವನ್ನು ತುಂಬುವ ತವಕ. ಅಂಥದ್ದರಲ್ಲಿ, ನಗ್ನ ಫೋಟೋ, ಪ್ರತಿಭಟನೆ, ಸಿನಿಮಾ ತರಹದ ಅಂಶಗಳಿದ್ದರೆ ಮಾಧ್ಯಮಗಳು ಅದು ಹೇಗೆ ಸುಮ್ಮನಿದ್ದಾವು?

ಸರಿ, 'ಯಾರಾದ್ರೆ ನನಗೇನು' ಚಿತ್ರ ತಂಡದ ಬಯಕೆ ಮತ್ತು ಮಾಧ್ಯಮಗಳ ಹಸಿವು ಎರಡೂ ಜೊತೆಗೂಡಿ ಈ ಫೋಟೋ ಸುತ್ತ ದೊಡ್ಡ ದೊಂಬರಾಟವೇ ಪ್ರಾರಂಭವಾಗಿದೆ. ಆ ದೊಂಬರಾಟ ಮುಂದುವರೆದು ತನಗೂ ತನ್ನ ಸಿನಿಮಾಗೂ ಪುಕ್ಕಟೆ ಪ್ರಚಾರ ಸಿಗುವಂತೆ ರಿಷಿಕಾ ಕೂಡ ವರ್ತಿಸುತ್ತಿದ್ದಾಳೆ.

"ನಾನು ಸಿನಿಮಾಗೆ ಬೇಕಾದಹಾಗೆ, ನನ್ನಿಷ್ಟ ಬಂದಂತೆ ಬಟ್ಟೆ ಬಿಚ್ಚುತ್ತೀನಿ. ನೀವು ಏನ್ ಕಿತ್ಕೋತೀರೋ ಕಿತ್ಕೊಳಿ. ಯಾರು ಏನು ಬೇಕಾದ್ರೂ ಹೇಳಲಿ. ನನಗೆ ನನ್ನ ಅಪ್ಪ ಮತ್ತು ಅಮ್ಮ ಒಪ್ಪಿಗೆ ಕೊಟ್ಟರೆ ಸಾಕು. ಅದು ಸಿಕ್ಕಿದೆ. ಹಾಗಾಗಿ ನಾನು ಉಳಿದ ಸಂಗತಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ" ಎಂದು ಆಕೆ ಅಬ್ಬರಿಸುತ್ತಿದ್ದು ಅದಕ್ಕೂ ಪ್ರಚಾರ ಸಿಕ್ಕಿದೆ.



'ಜೋಗಯ್ಯ' ಚಿತ್ರದ ಬ್ಯಾನರ್ ಬಿಡುಗಡೆಗಾಗಿ ತಾಜ್ ವೆಸ್ಟ್ ಎಂಡ್‌ನಲ್ಲಿ ಅದ್ದೂರಿ ಪಾರ್ಟಿಯೊಂದನ್ನು ಆಯೋಜಿಸಲಾಗಿತ್ತು. ಇಡೀ ಚಿತ್ರರಂಗ ಅಲ್ಲಿ ನೆರೆದಿತ್ತು. ಇಂಥ ಸಂದರ್ಭದಲ್ಲಿ ಮಾದಕ ಉಡುಗೆ ತೊಟ್ಟು ಬಂದಿದ್ದ ರಿಷಿಕಾಳನ್ನು ನೋಡಿದ ದುನಿಯಾ ವಿಜಿ 'ಕಂಠೀರವ' ಚಿತ್ರದಲ್ಲಿ ಆಕೆಯನ್ನು ನಾಯಕಿಯನ್ನಾಗಿಸಲು ನಿರ್ದೇಶಕ ತುಷಾರ್ ರಂಗನಾಥ್‌ಗೆ ಗಂಟುಬಿದ್ದಿದ್ದ. ಹೀಗಾಗಿ ರಿಷಿಕಾ ನಾಯಕಿಯಾಗಿ ಚಿತ್ರರಂಗಕ್ಕೆ ಎಂಟ್ರಿಕೊಟ್ಟಳು.

ಮೊದಲ ಚಿತ್ರ ಕಂಠೀರವದಲ್ಲೇ ಈಕೆಗೆ ಮೈಮೇಲೆ ಬಟ್ಟೆ ನಿಲ್ಲಲಿಲ್ಲ. ಸಿನಿಮಾ ನೋಡಿದವರೆಲ್ಲಾ 'ಸಿಂಗ್ ಬಾಬು ಮಗಳಾ ಇವಳೂ...' ಎಂದು ಉದ್ಧರಿಸಿದ್ದರು. ನಂತರ 'ಕಳ್ಳ ಮಳ್ಳ ಸುಳ್ಳ' ಚಿತ್ರದ ಎರ್ರಾಬಿರ್ರಿ ಎಕ್ಸ್‌ಪೋಸ್ ಮಾಡಿದ್ದಳು.

ಯಾರಿವನು ಬಷೀದ್?

ನೋಡಲು ಕಾರ್ಟೂನ್‌ನಂತಿರುವ ಬಷೀದ್ ಎಂಬಾತ 'ಯಾರಾದ್ರೆ ನನಗೇನು' ಚಿತ್ರವ ನಿರ್ದೇಶಿಸುತ್ತಿದ್ದಾನೆ. ಆಂಧ್ರದವನಾದ ಈತನಿಗೆ ಕನ್ನಡದ ಗಂಧ ಗಾಳಿಯೂ ಗೊತ್ತಿಲ್ಲ. ಈ ಹಿಂದೆ ತೆಲುಗಿನ 'ರಾಮ್‌ದೇವ್' ಸೇರಿದಂತೆ ಮೂರು ಚಿತ್ರಗಳನ್ನು ನಿರ್ದೇಶಿಸಿದ್ದ. ಆದಾದನಂತರ 'ಬೆಂಕಿ ಬಿರುಗಾಳಿ' ಎಂಬ ಕನ್ನಡ ಚಿತ್ರವನ್ನು ಆರಂಭಿಸಿ ಅದರಲ್ಲಿ ತಾನೇ ಹೀರೋ ಆಗಿ ನಟಿಸಿದ್ದ. ಆ ಚಿತ್ರದಲ್ಲೂ ರಿಷಿಕಾಳೇ ಮುಖ್ಯ ನಾಯಕಿ. ಜೊತೆಗೆ ನಿಮಿತಾ ಸೇರಿದಂತೆ ಆರೇಳು ಹುಡುಗಿಯರ ದಂಡೇ ಇದೆ.



ಆ ಚಿತ್ರವಿನ್ನೂ ಬಿಡುಗಡೆಯಾಗಿಲ್ಲ. ಬಿಡುಗಡೆಯಾಗುವುದೂ ಡೌಟೇ. ಯಾಕೆಂದರೆ ಈ ಚಿತ್ರವನ್ನು ಸಂಪೂರ್ಣ ತೆಲುಗಿನಲ್ಲಿ ಚಿತ್ರೀಕರಿಸಿ ಕನ್ನಡಕ್ಕೆ ಡಬ್ ಮಾಡಿದ್ದಾರೆ ಎಂಬ ಆರೋಪ ಇದೆ.

ಈಗ 'ಬೆಂಕಿ ಬಿರುಗಾಳಿ' ಬಿಡುಗಡೆಗೆ ಮುನ್ನವೇ ಹೊಸದೊಂದು ಅವಾಂತರಕ್ಕೆ ಬಷೀದ್ ಅಣಿಯಾಗಿದ್ದಾನೆ. ಬಷೀದ್‌ಗೆ ಅದೆಲ್ಲಿಂದ ಹಣ ಬರುತ್ತೋ ಗೊತ್ತಿಲ್ಲ. ಆದರೆ ಈತ ತನ್ನ ಸಿನಿಮಾಗಳಿಗೆ, ಅದರಲ್ಲಿ ನಟಿಸುವ ದಂಡಿದ ನಟಿಯರಿಗೆ ಧಾರಾಳವಾಗಿ ಹಣ ಸುರಿಯುತ್ತಿರುವುದಂತೂ ನಿಜ. ಬಲ್ಲ ಮೂಲಗಳ ಪ್ರಕಾರ ರಿಷಿ ಸಹಾ ಈ ಕಾರ್ಟೂನ್ ಕಮಂಗಿ ಬಷೀದ್‌ನಿಂದ ಒಳ್ಳೇ ಅಮೌಂಟು ಪೀಕಿದ್ದಾಳಂತೆ.

ಈ ರಿಷಿಕಾ ಮತ್ತು ಬಷೀದ್ ಎಂಬ ಜೋಡಿಯ ಈ 'ನಗ್ನ' ಗಿಮಿಕ್ಕನ್ನು ನೋಡಿ ಜನ "ನೀವೇನು ಮಾಡಿದ ನಮಗೇನು" ಎನ್ನುವುದರ ಬಗ್ಗೆ ಸಂಶಯವೇ ಇಲ್ಲ.

ಹರಿಹರ ಪುತ್ರ ಅಯ್ಯಪ್ಪನಿಗೆ ಹರಿಪ್ರಿಯಾ ಅಪಚಾರ!

ಶಬರಿಮಲೆ ಅಯ್ಯಪ್ಪಸ್ವಾಮಿ ಎಂದರೆ ಹಲವರಿಗೆ ಅದೆಂಥದ್ದೋ ವಿಚಿತ್ರ ಭಕ್ತಿ. ಅಂತಹ ಭಕ್ತರು ತಮ್ಮೆಲ್ಲಾ ತೆವಲುಗಳನ್ನು ಪಕ್ಕಕ್ಕಿಟ್ಟು ಮಾಲೆ, ಭಜನೆ, ಧ್ಯಾನ ಎಂದು ಅಯ್ಯಪ್ಪನನ್ನು ಆರಾಧಿಸುತ್ತಾರೆ. ಇರುಮುಡಿ ಕೊಂಡೊಯ್ದು ಅಯ್ಯಪ್ಪನ ದರ್ಶನ ಮಾಡಿಬರುವ ತನಕ ಭಕ್ತರು ಹೆಂಡ, ಹೆಣ್ಣು ಚಟಗಳಿಂದ ದೂರ ಉಳಿಯುತ್ತಾರೆ.

ಈವರೆಗೆ ಅಯ್ಯಪ್ಪನನ್ನು ಕುರಿತು ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲೂ ಹಲವಾರು ಸಿನಿಮಾಗಳು ಬಂದುಹೋಗಿವೆ. ಈಗ ಒಂದೇ ಸಮಯದಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ 'ಸ್ವಾಮಿ ಮಣಿಕಂಠ' ಎಂಬ ಚಿತ್ರವೊಂದು ತಯಾರಾಗುತ್ತಿದೆ.

ಆದರೆ ಈ ಚಿತ್ರದಲ್ಲಿ ಅಯ್ಯಪ್ಪನನ್ನು ಕುರಿತ ಭಕ್ತಿ, ಆತನ ಮಹಿಮೆಯನ್ನು ಸಾರುವ ದೃಶ್ಯಗಳು ಮಾತ್ರ ಇಲ್ಲ. ನೋಡಿದೇಟಿಗೆ ಎಂಥವನ ಮೈ ಜುಮ್ಮೆನಿಸುವ ಹಸಿಬಿಸಿ ದೃಶ್ಯಗಳೂ ಈ ಚಿತ್ರದಲ್ಲಿ ಭರ್ಜರಿಯಾಗಿ ತುಂಬಿದೆ.

ಮಲಯಾಳಂನ ವಿಜೇಶ್ ಮಣಿ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಕೌಶಿಕ್‌ಬಾಬು, ಕಲಾಭವನ್ ಮಣಿ ಮುಂತಾದವರು ನಟಿಸುತ್ತಿದ್ದಾರೆ. ಈ ದೇವರ ಚಿತ್ರದ ಮೋಹಿನಿಯ ಪಾತ್ರದಲ್ಲಿ ಕನ್ನಡದ ಹರಿಪ್ರಿಯಾ ನಟಿಸುತ್ತಿದ್ದಾಳೆ.

ಇಲ್ಲಿರುವ ಹರಿಪ್ರಿಯಾಳ ಚಿತ್ರಾಮಸ್ತಾ ಫೋಟೋಗಳನ್ನು ನೋಡಿದರೆ "ಇದು ಭಕ್ತಿ ಪ್ರಧಾನ ಚಿತ್ರವಾ? ಅಥವಾ ಮತ್ತಿನ್ನೆಂಥದೋ ಚಿತ್ರವಾ?" ಎಂಬ ಅನುಮಾನ ಮೂಡುವುದು ಸಹಜ. ಅಯ್ಯಪ್ಪ ಸ್ವಾಮಿಯನ್ನು ಕುರಿತಾದ ಚಿತ್ರವೊಂದಕ್ಕೆ ಇಂಥ ಮದವೇರಿಸುವ ದೃಶ್ಯಗಳ ಅವಶ್ಯಕತೆ ಇದೆಯಾ? ಅಸಲಿಗೆ ಅಯ್ಯಪ್ಪನಿಗೂ ಮೋಹಿನಿಗೂ ಎತ್ತಿಂದೆತ್ತಣ ಸಂಬಂಧ??



ಹರಿಪ್ರಿಯಾಗೆ ಬೇಕಿತ್ತಾ?

ಇಲ್ಲಿಯತನಕ ಈ ಹರಿಪ್ರಿಯಾ ಕನ್ನಡದಲ್ಲಿ ನಟಿಸಿರುವ 'ಮನಸುಗಳ ಮಾತು ಮಧುರ', 'ವಸಂತಕಾಲ', 'ಈ ಸಂಭಾಷಣೆ' ಮತ್ತು 'ಚೆಲುವೆ ನಿನ್ನ ನೋಡಲು' ಸಿನಿಮಾಗಳೆಲ್ಲ ಬಾಕ್ಸ್ ಆಫೀಸಿನಲ್ಲಿ ತೋಪೆದ್ದಿವೆ. ಎಲ್ಲಾ ಅಂದುಕೊಂಡಂತೆ ನಡೆದಿದ್ದರೆ ಯೋಗರಾಜ್ ಭಟ್ ನಿರ್ದೇಶನದ 'ಪಂಚರಂಗಿ' ಚಿತ್ರದಲ್ಲಿ ಈಕೆ ದಿಗಂತನೊಂದಿಗೆ ನಟಿಸಬೇಕಿತ್ತು. ಆದರೆ ಈಕೆಯ ದುರಾದೃಷ್ಟವೋ ಏನೋ ಆ ಪಾತ್ರಕ್ಕೆ ಭಟ್ಟರು ನಿಧಿ ಸುಬ್ಬಯ್ಯಳನ್ನು ಹಾಕಿಕೊಂಡರು.

ಹರಿಪ್ರಿಯಾ ನೋಡಲು ಮುದ್ದುಮುದ್ದಾಗಿದ್ದರೂ ಈಕೆ ನಟಿಸಿದ ಯಾವ ಚಿತ್ರಗಳೂ ಬರ್ಕತ್ತಾಗದ ಕಾರಣ ಕನ್ನಡದಲ್ಲಿ ಹರಿಪ್ರಿಯಾಳ ಲಕ್ಕು ಕುದುರಲೇ ಇಲ್ಲ. ಹೀಗಾಗಿ ತಮಿಳು, ತೆಲುಗಿಗೆ ವಲಸೆ ಹೋದ ಹರಿಪ್ರಿಯಾ ತಮಿಳುನಾಡಿನಲ್ಲಿ ಈಗಷ್ಟೇ ಅರ್ಜುನ್ ಸರ್ಜಾ ಜೊತೆ 'ಕನಕವೇಲ್ ಕಾಕಾ' ಚಿತ್ರದಲ್ಲಿ ನಟಿಸಿದ್ದಾಳೆ. ಆ ಚಿತ್ರ ಮುಗಿಯುವ ಹೊತ್ತಿಗೆ ಹರಿಪ್ರಿಯಾ ತಮಿಳು ಚಿತ್ರರಂಗದ ಸ್ಟಾರ್ ನಿರ್ದೇಶಕ ಚೇರನ್ ಸಿನಿಮಾದಲ್ಲೂ ಅವಕಾಶ ಪಡೆದಳು. ಅದೇ ವೇಳೆಗೆ ತೆಲುಗಿನಿಂದಲೂ ಒಂದಷ್ಟು ಛಾನ್ಸು ಈಕೆಗೆ ದಕ್ಕಿತು. ಆದರೆ 'ತಕಿಟ ತಕಿಟ' ಚಿತ್ರದಲ್ಲಿ ಹೀರೋ ಹರ್ಷವರ್ಧನ್ ಜೊತೆ ಲಿಪ್ ಲಾಕ್ ದೃಶ್ಯದಲ್ಲಿ ಪಾಲ್ಗೊಂಡಿದ್ದೇ ಹರಿಪ್ರಿಯಾಳ ಲಕ್ಕೂ ಉಕ್ಕಲು ಶುರುವಾಯಿತು.

ಈಗ ನೋಡಿದರೆ ಭಕ್ತಿ ಕಥಾನಕ ಚಿತ್ರವೊಂದರಲ್ಲಿ ಹರಿಪ್ರಿಯಾ ತನ್ನ ಮೈಸಿರಿಯನ್ನು ಪ್ರದರ್ಶಿಸುವಂತಹ ಉಡುಪಿನಲ್ಲಿ ಕಾಣಿಸಿಕೊಂಡಿದ್ದಾಳೆ. ಅಯ್ಯಯ್ಯೋ, ಸ್ವಾಮಿಯೇ ಶರಣಂ ಅಯ್ಯಪ್ಪ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com